ಜನಶಕ್ತಿ


ದುಡಿಯುವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 13 | ಸಂಚಿಕೆ 16 | ಏಪ್ರಿಲ್ 15–21, 2019 | ಪುಟ 16 | ರೂ.10/-

Web : www.janashakthi.co.in, e-mail : js_weekly@yahoo.com






ಜಲಿಯನ್ ವಾಲಾಬಾಗ್ ಹತ್ಯಾಕಾಂಡಕ್ಕೆ 100 ವರ್ಷ

ಏತ್ತ ಸಾಗುತ್ತಿದೆ ಎತ್ತಿನಹೊಳೆ ಯೋಜನೆ?








ರಫೇಲ್ ಹಗರಣದಲ್ಲಿ ಮೋದಿ



ಸಿಪಿಐ(ಎಂ) ಅಭ್ಯರ್ಥಿಗೆ ಕೃಷಿ ಕಾರ್ಮಿಕ ಸಂಘದ ಬೆಂಬಲ

ಮೋದಿ ರಫೆಲ್ ವ್ಯವಹಾರದಲ್ಲಿ ರಾಷ್ಟ್ರೀಯ ಭದ್ರತೆಯೊಂದಿಗೆ ಆಟವಾಡಿದ್ದಾರೆ–ಸೀತಾರಾಮ್ ಯೆಚುರಿ



ರಫೆಲ್ ವ್ಯವಹಾರದ ಇನ್ನಷ್ಟು ಸಂಗತಿಗಳು ಈ ವಾರ ಬಯಲಿಗೆ ಬಂದಿವೆ. ಈ ವ್ಯವಹಾರದಲ್ಲಿ ಎರಡು ವಿದೇಶಿ ರಕ್ಷಣಾ ವಲಯದ ಕಂಪನಿಗಳಿಗೆ ವಿನಾಯ್ತಿಗಳನ್ನು ಮೋದಿ ಸರಕಾರ ಕೊಟ್ಟಿದೆ ಎಂಬ ವಿಷಯ ಬೆಳಕಿಗೆ ಬಂದಿದೆ.

ಅಂದರೆ ಈ ವ್ಯವಹಾರದಿಂದಾಗಿ ನಮ್ಮ ವಾಯುಪಡೆಗೆ ಬೇಕಾಗಿದ್ದ 126 ಯುದ್ಧ ವಿಮಾನಗಳ ಬದಲು ಕೇವಲ 36 ಮಾತ್ರವೇ ಈಗ ಸಿಗುತ್ತಿದೆ, ಮಾತ್ರವಲ್ಲ, ಈ ವ್ಯವಹಾರದಲ್ಲಿ ಮೋದಿಯವರ ಚಮಚಾಗಳಿಗೆ ಅನುಕೂಲ ಕಲ್ಪಿಸಲಾಗಿದೆ. ಇದಕ್ಕಾಗಿ ರಕ್ಷಣಾ ಸಾಮಗ್ರಿಗಳನ್ನು ಖರೀದಿಸುವ ನಿಯಮಾವಳಿಗಳನ್ನು ಉಲ್ಲಂಘಿಸಿ, ರಕ್ಷಣಾ ಇಲಾಖೆಯ



ವ್ಯಂಗ್ಯಚಿತ್ರ: ಪಿ. ಮಹಮ್ಮದ್, ವಾರ್ತಾಭಾರತಿ

ಬದಲು ರಾಷ್ಟ್ರೀಯ ಭದ್ರತಾ ಸಲಹೆಗಾರರೇ ನೇರವಾಗಿ ಮಾತುಕತೆ ನಡೆಸಿದ್ದಾರೆ. ಇಂತಹ ಖರೀದಿಗಳಿಗೆ ಸಂಬಂಧಪಟ್ಟಂತೆ ನ್ಯಾಯಪಂಚಾಯ್ತಿಯ ವಿಷಯದಲ್ಲಿ ಮತ್ತು ಲೆಕ್ಕ ಪತ್ರ ಶೋಧನೆಯಿಂದ ಮಾತ್ರವಲ್ಲ ಖರೀದಿಯಲ್ಲಿ ಕಮಿಷನ್‌ಗಳು ಇತ್ಯಾದಿಗಳ ಮೂಲಕ ಭ್ರಷ್ಟಾಚಾರ ನಡೆಯುವುದನ್ನು ತಡೆಯಲು ಇರುವ ಕಾನೂನಿನ ಅಂಶಗಳಿಂದಲೂ ವಿನಾಯ್ತಿ ಕೊಡಲಾಗಿದೆ ಎಂದು ಈಗ ತಿಳಿದು ಬಮದಿದೆ.

ಈ ಮೂಲಕ ರಾಷ್ಟ್ರೀಯ ಭದ್ರತೆಯೊಂದಿಗೆ ಆಟವಾಡಿದ್ದಕ್ಕೆ ಮೋದಿ ಸರಕಾರವನ್ನು ಹೊಣೆ ಮಾಡಬೇಕಾಗುತ್ತದೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಹೇಳಿದ್ದಾರೆ.

ಈ ನಡುವೆ ಸುಪ್ರಿಂ ಕೋರ್ಟ್ ಈ ಕುರಿತ ತನ್ನ ಈ ಹಿಂದಿನ ತೀರ್ಪಿನ ಮರುವಿಮರ್ಶೆಗೆ ಮೋದಿ ಸರಕಾರದ ಆಕ್ಷೇಪವನ್ನು ಬದಿಗೊತ್ತಿ, ಆ ತೀರ್ಪಿನ ನಂತರ ಸಾರ್ವಜನಿಕಗೊಂಡಿರುವ ದಸ್ತಾವೇಜುಗಳನ್ನು ಕೂಡ ಪರಿಶೀಲಿಸಲಾಗುವುದು ಎಂದು ಎಪ್ರಿಲ್ 10ರಂದು ಹೇಳಿದೆ.

ಇದುವರೆಗೆ ಬೆಳಕಿಗೆ ಬಂದಿರುವ ಸಂಗತಿಗಳು ಮೋದಿ ಮತ್ತು ಅವರ ಸರಕಾರ ಒಂದು ಮಹತ್ವಪೂರ್ಣ ರಕ್ಷಣಾ ವ್ಯವಹಾರದಲ್ಲಿ ರಾಷ್ಟ್ರೀಯ ಭದ್ರತೆಯನ್ನು ಭ್ರಷ್ಟಾಚಾರ ಮತ್ತು ತಮ್ಮ ಚಮಚಾಗಳಿಗಾಗಿ ಒತ್ತೆಯಿಟ್ಟಿದ್ದಾರೆ ಎಂಬ ಸಂಗತಿಯತ್ತ ಬೊಟ್ಟು ಮಾಡಿ ತೋರಿಸುತ್ತಿವೆ.

ಇದಕ್ಕಾಗಿ, ಮೋದಿ ಸರಕಾರ * ಜವಾಬುದಾರಿಕೆಯಿಂದ ನುಣುಚಿಕೊಳ್ಳಲು ಪ್ರಯತ್ನಿಸಿದೆ; *ಒಂದು ಜಂಟಿ ಸಂಸದೀಯ ಸಮಿತಿ ವಿಚಾರಣೆ ನಡೆಸಲು ನಿರಾಕರಿಸಿದೆ; ಸಿ.ಎ.ಜಿ.ಯಿಂದ ಅದರ ಬೆಲೆಯನ್ನು ಮುಚ್ಚಿಟ್ಟಿದೆ; ಮತ್ತು, ಸುಪ್ರಿಂ ಕೋರ್ಟನ್ನು ಮೊದಲು ದಾರಿ ತಪ್ಪಿಸಲು, ಆಮೇಲೆ ಯಾವುದೇ ವಿಚಾರಣೆ ಮಾಡದಂತೆ ತಡೆಯಲು ಪ್ರಯತ್ನಿಸಿದೆ.

"ಸುಪ್ರಿಂ ಕೋರ್ಟ್ ತಮಗೆ 'ಕ್ಲೀನ್ ಚಿಟ್' ನೀಡಿದೆ ಎಂದು ಮೋದಿ ಮತ್ತು ಅವರ ಬಂಟರು ಹೇಳಿಕೊಳ್ಳುತ್ತಿದ್ದರು. ಆದರೆ ಸಾಕ್ಷಿಗಳು ಒಂದಾದ ಮೇಲೊಂದರಂತೆ ಹೊರಬೀಳಲಾರಂಭಿಸಿವೆ. ಇದೀಗ ಭಾರತದ ಚರಿತ್ರೆಯಲ್ಲಿಯೇ ಅತ್ಯಂತ ಭ್ರಷ್ಟ ಮತ್ತು ರಾಜಿಗಿಳಿದ ಸರಕಾರ ಆಗಿಬಿಟ್ಟಿದೆ. ಇದನ್ನು ಕಿತ್ತೆಸೆಯಬೇಕಾದ ಸಮಯವೀಗ ಬಂದಿದೆ." ಎಂದು ಸೀತಾರಾಮ್ ಯೆಚುರಿ ಹೇಳಿದ್ದಾರೆ.

ತೆಲಂಗಾಣದಲ್ಲಿ 11 ಮನರೇಗ ಕೆಲಸಗಾರರ ಸಾವು

ಎಐಎಡಬ್ಲ್ಯುಯು ತೀವ್ರ ಆತಂಕ

ದೇಶದ ವಿವಿಧ ಸ್ಥಳಗಳಲ್ಲಿ ಅಪಘಾತಗಳಿಂದ ಮನರೇಗ ಕೆಲಸಗಾರರ ಸಾವಿನ ಪ್ರಕರಣಗಳು ಮುಂದುವರೆದಿವೆ. ಇತ್ತೀಚೆಗೆ ತೆಲಂಗಾಣದ ಮರಿಕಲ್ ಮಂಡಲದ ಥಿಲೇರು ಗ್ರಾಮದಲ್ಲಿ ಒಂದು ಮಣ್ಣು ಕುಸಿತದ ಪ್ರಕರಣದಲ್ಲಿ 11 ಮನರೇಗ ಕೆಲಸಗಾರರ ಸಾವು ಸಂಭವಿಸಿದೆ. ಈ ಬಗ್ಗೆ ಅಖಿಲ ಭಾರತ ಕೃಷಿ ಕೂಲಿಗಾರರ ಸಂಘ(ಎಐಎಡಬ್ಲ್ಯುಯು) ತೀವ್ರ ಆತಂಕವನ್ನು ವ್ಯಕ್ತಪಡಿಸಿದೆ. ಅವರು ತಮ್ಮ ದೈಹಿಕ ಕೆಲಸದ ನಂತರ ತುಸು ವಿರಾಮ ಪಡೆದು ಕೂತಿದ್ದಾಗ ಒಂದು ದೊಡ್ಡ ಮಣ್ಣ ರಾಶಿ ಕುಸಿದು ಈ ಘಟನೆ ನಡೆದಿದೆ.

ಇಂತಹ ಘಟನೆಗಳು ಸಂಭವಿಸಲು ಕೇಂದ್ರ ಸರಕಾರ ಮತ್ತು ಸಂಬಂಧಪಟ್ಟ ರಾಜ್ಯ ಸರಕಾರ ಇಬ್ಬರೂ ಹೊಣೆಗಾರರು. ಸತ್ತಿರುವ ಪ್ರತಿಯೊಬ್ಬರ ಕುಟುಂಬಗಳಿಗೆ 10 ಲಕ್ಷ ರೂ. ಮತ್ತು ಗಾಯಗೊಂಡವರ ಕುಟುಂಬಗಳಿಗೆ 2ಲಕ್ಷ ರೂ. ಪರಿಹಾರ ನೀಡಬೇಕು ಎಂದು ಎಐಎಡಬ್ಲ್ಯುಯು ಆಗ್ರಹಿಸಿದೆ. ಇದಲ್ಲದೆ ಈ ಭೀಕರ ದುರಂತದಲ್ಲಿ ಕುಟುಂಬದ ಸದಸ್ಯರನ್ನು ಕಳಕೊಂಡವರಿಗೆ ಪರಿಹಾರಾರ್ಥವಾಗಿ ಮನೆಗಳನ್ನು ಮತ್ತು 3 ಎಕ್ರೆ ಕೃಷಿ ಭೂಮಿಯನ್ನು ಕೊಡಬೇಕು ಎಂದೂ ಅದು ಆಗ್ರಹಿಸಿದೆ.

ಹಲವು ರಾಜ್ಯಗಳಲ್ಲಿ ಮನರೇಗ ಕೆಲಸಗಾರರಿಗೆ ಕನಿಷ್ಟ ಸುರಕ್ಷಿತತೆಯನ್ನು ಕೂಡ ಒದಗಿಸಿಲ್ಲ ಎಂಬುದೊಂದು ಗಂಭೀರ ಸಂಗತಿ. ಇಂತಹ ಒಂದು ನಿಲುವನ್ನು ಒಪ್ಪಲು ಸಾಧ್ಯವಿಲ್ಲ. ಅದು ಖಂಡನಾರ್ಹ. ಕೊಲ್ಲಲ್ಪಟ್ಟಿರುವವರ ಬದುಕುಗಳಿಗೆ ಈ ಪರಿಹಾರಗಳು ಬದಲಿಯಾಗಲಾರವು ಎಂಬುದು ನಮ್ಮ ನಂಬಿಕೆ ಎಂದು ಎಐಎಡಬ್ಲ್ಯುಯು ಹೇಳಿದೆ.

ಚುನಾವಣಾ–ಪೂರ್ವ ವಾತಾವರಣವನ್ನು ಕಲುಷಿತಗೊಳಿಸುವ ಮತ್ತಷ್ಟು ಆಚಾರ ಸಂಹಿತೆ ಉಲ್ಲಂಘನೆಗಳು–ದೃಢ ಕ್ರಮ ಕೈಗೊಳ್ಳದಿರುವ ಚುನಾವಣಾ ಆಯೋಗಕ್ಕೆ ಮತ್ತೊಂದು ಪತ್ರ

ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ಇತ್ತೀಚಿನ ಮಾದರಿ ಆಚಾರ ಸಂಹಿತೆ ಉಲ್ಲಂಘನೆಯನ್ನು ಮುಖ್ಯ ಚುನಾವಣಾ ಆಯುಕ್ತರ ಗಮನಕ್ಕೆ ತರುತ್ತ ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯ ನೀಲೋತ್ಪಲ ಬಸು ರವರು ಎಪ್ರಿಲ್ 9ರಂದು ಮತ್ತೊಂದು ಪತ್ರವನ್ನು ಬರೆದಿದ್ದಾರೆ. ಇದರಲ್ಲಿ ಪ್ರಧಾನಿಗಳು ಮಾತ್ರವಲ್ಲ, ಅಸ್ಸಾಂನ ಸಂಪುಟ ಮಂತ್ರಿ ಹಿಮಂತ ಬಿಸ್ವಾಸ್ ಶರ್ಮರವರು ಮಾಡಿರುವ ಉಲ್ಲಂಘನೆಗಳು ಭಂಡತನದಿಂದ ಕೂಡಿದ್ದು ಚುನಾವಣಾ–ಪೂರ್ವ ವಾತಾವರಣ ಕಲುಷಿತ ಗೊಳ್ಳದಂತೆ ತಡೆಯಲು ಚುನಾವಣಾ ಆಯೋಗ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಬಲವಾಗಿ ಆಗ್ರಹ ಪಡಿಸಿದ್ದಾರೆ.

ಎಪ್ರಿಲ್ 9 ರಂದು ಮಹಾರಾಷ್ಟ್ರದ ಲಾತೂರ್‌ನಲ್ಲಿ ಮೊದಲ ಬಾರಿಗೆ ಮತದಾನ ಮಾಡುವವರನ್ನು ಉದ್ದೇಶಿಸಿ ಮಾತನಾಡುತ್ತ ಅವರು ತಮ್ಮ ಮತಗಳನ್ನು ಬಾಲಕೋಟ್ ನಲ್ಲಿ ವಾಯು ಪ್ರಹಾರ ನಡೆಸಿದವರಿಗೆ ಸಮರ್ಪಿಸಬೇಕು ಎಂದು ಪ್ರಧಾನ ಮಂತ್ರಿಗಳು ಹೇಳಿರುವುದಾಗಿ ವರದಿಯಾಗಿದೆ. ಈ ಕುರಿತ ಮಾಧ್ಯಮ ವರದಿಗಳನ್ನು ತಮ್ಮ ಪತ್ರದಲ್ಲಿ ಲಗತ್ತಿಸಿರುವ ಅವರು ಪ್ರಧಾನಿಗಳಿಂದ ಮಾದರಿ ಆಚಾರ ಸಂಹಿತೆಯ ಉಲ್ಲಂಘನೆಗಳ ತೀರಾ ಇತ್ತೀಚಿನ ಈ ಪ್ರಕರಣ ಅತ್ಯಂತ ಆತಂಕ ಹುಟ್ಟಿಸುವಂತದ್ದು, ಅವರು ಮತಯಾಚನೆಗೆ ಸಶಸ್ತ್ರ ಪಡೆಗಳ ಪ್ರಸ್ತಾಪವನ್ನು ಪ್ರಚಾರದ ವೇಳೆಯಲ್ಲಿ ತರಬಾರದು ಎಂವ ಚುನಾವಣಾ ಆಯೊಗದ ನಿರ್ದಿಷ್ಟ ನಿರ್ದೇಶನವನ್ನೂ ಉಲ್ಲಂಘಿಸಿದ್ದಾರೆ ಎಂಬ ಸಂಗತಿಯನ್ನು ಚುನಾವಣಾ ಆಯೋಗದ ಗಮನಕ್ಕೆ ತಂದಿದ್ದಾರೆ.

ಅತ್ತ ಅಸ್ಸಾಂನಲ್ಲಿ ಅಲ್ಲಿಯು ಸಂಪುಟ ಮಂತ್ರಿ ಹಿಮಂತ ಬಿಸ್ವಾಸ್ ಶರ್ಮರವರು ತಮ್ಮ ಚುನಾವಣಾ ಪ್ರಚಾರದಲ್ಲಿ, ತಮಗೆ "ಧೋತಿಗಳನ್ನು ಮತ್ತು ಲುಂಗಿಗಳನ್ನು" ಧರಿಸಿರುವವರ ಮತಗಳ ಅಗತ್ಯವಿಲ್ಲ ಎಂದು ಹೇಳಿದ್ದಾರೆ. ಈ ಮೂಲಕ ಅವರು ರಾಜ್ಯದ ಭಾಷಾ ಮತ್ತು ಧಾರ್ಮಿಕ ಅಲ್ಪಸಂಖ್ಯಾತರ ಬಗ್ಗೆ ತಮ್ಮ ಪಕ್ಷದ ತಿರಸ್ಕಾರದ ನಿಲುವಿನ ಇಂಗಿತವನ್ನು ವ್ಯಕ್ತಪಡಿಸಿದ್ದಾರೆ. ಅಸ್ಸಾಂನಲ್ಲಿ ಪರಿಸ್ಥಿತಿ ಬಹಳಷ್ಟು ಸ್ಫೋಟಕವಾಗಿದೆ. ಗೋಲ್ಪಾರಾದಲ್ಲಿ ಸರಕಾರ ನಡೆಸುತ್ತಿರುವ ಒಂದು ಸ್ಥಾನಬದ್ಧತಾ ಕ್ಯಾಂಪ್‌ನಲ್ಲಿ ಒಂದು ಕಸ್ಟಡಿ ಸಾವು ಸಂಭವಿಸಿದೆ. ಬಿಜೆಪಿಯ ಚುನಾವಣಾ ವಚನಗಳ ಪ್ರಕಾರ ಇಂತಹ ಸಂದೇಹಾಸ್ಪದ ಮತದಾರರು ಎಂದು ಹೇಳಲಾಗಿರುವವರಿಗೆಂದು ಮಾಡಿರುವ ಸ್ಥಾನಬದ್ಧತಾ ಕ್ಯಾಂಪುಗಳನ್ನು ಕಳಚಿ ಹಾಕಬೇಕಾಗಿತ್ತು. ಆದರೆ ಆ ಆಶ್ವಾಸನೆಯನ್ನು ಈಡೇರಿಸುವ ಬದಲು ಹೊಸ ಕ್ಯಾಂಪುಗಳು ತಲೆಯೆತ್ತಿವೆ. ಇದು ರಾಷ್ಟ್ರೀಯ ನಾಗರಿಕ ದಾಖಲೆಗಳನ್ನು ಮೇಲ್ದರ್ಜೆಗೆ ಏರಿಸುವ ಸುಪ್ರಿಂ ಕೋರ್ಟ್ ಉಸ್ತುವಾರಿಯ ಪ್ರಕ್ರಿಯೆಯ ಹೊರತಾಗಿಯೂ ನಡೆಯುತ್ತಿದೆ.

"ನಾವು ಈ ಹಿಂದೆಯೂ ಬಿಜೆಪಿ ಮತ್ತು ಅದರ ಮುಖಂಡರಿಂದ ಇಂತಹ ಭಂಡ ಉಲ್ಲಂಘನೆಗಳನ್ನು ತಮ್ಮ ಗಮನಕ್ಕೆ ತಂದಿದ್ದೆವು. ಆದರೆ ಆಯೋಗ ಅದೇಕೋ ಇಂತಹ ಕೃತ್ಯಗಳ ವಿರುದ್ಧ ಯಾವುದೇ ದೃಢತೆಯಿಂದ ಕ್ರಮ ವಹಿಸಿಲ್ಲ. ಉತ್ತರಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರ "ಮೋದೀ ಕೀ ಸೇನಾ" ಎಂಬ ಅಸಹ್ಯಕರ ಹೇಳಿಕೆಯನ್ನು "ಹಗುರವಾಗಿ" ಕಂಡಿದೆ ಎಂದು ವರದಿಯಾಗಿದೆ" ಎಂದು ಬೇಸರ ವ್ಯಕ್ತಪಡಿಸಿರುವ ನೀಲೋತ್ಪಲ ಬಸು, ಚುನಾವಣಾ–ಪೂರ್ವ ವಾತಾವರಣವನ್ನು ಪಕ್ಷಪಾತಪೂರ್ಣ ಚುನಾವಣಾ ಹಿತಾಸಕ್ತಿಗಳಿಗಾಗಿ ಅಸ್ಮಿತೆಗಳು ಮತ್ತು ರಾಷ್ಟ್ರೀಯು ಸಂಕೇತಗಳ ಆಧಾರದಲ್ಲಿ ಧ್ರುವೀಕರಣಗೊಳಿಸುವ ಮಟ್ಟಕ್ಕೆ ಇಳಿಸಿ ಕಲುಷಿತಗೊಳಿಸುವುದನ್ನು ನಿಲ್ಲಿಸಬೇಕಾಗಿದೆ, ಇದಕ್ಕೆ ಚುನಾವಣಾ ಆಯೋಗತ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಬಲವಾಗಿ ಆಗ್ರಹಿಸಿದ್ದಾರೆ.

ಪಶ್ಚಿಮ ಬಂಗಾಲದಲ್ಲಿ ಎಡರಂಗದ ಅಭ್ಯರ್ಥಿಗಳ ಮೇಲೆ ಹಲ್ಲೆಗಳು, ಬೆದರಿಕೆಗಳು–ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡನೆ

"ಎಡಪಕ್ಷಗಳ ಹೆಚ್ಚುತ್ತಿರುವ ಸವಾಲನ್ನು ತೋರಿಸುತ್ತದೆ"

ಎಪ್ರಿಲ್ 9 ರಂದು ಪಶ್ಚಿಮ ಬಂಗಾಲದ ಅಸನ್‌ಸೋಲ್ ಲೋಕಸಭಾ ಕ್ಷೇತ್ರದ ಸಿಪಿಐ(ಎಂ) ಅಭ್ಯರ್ಥಿ ಗೌರಾಂಗ ಚಟರ್ಜಿ ಪಶ್ಚಿಮ ಬರ್ದಮಾನ್ ಜಿಲ್ಲೆಯ ಬರಬಾನಿ ಪೊಲಿಸ್ ಠಾಣೆಯ ಅಡಿಯಲ್ಲಿ ಬರುವ ಮದನಪುರ ಗ್ರಾಮದಲ್ಲಿ ಪ್ರಚಾರ ಮಾಡುತ್ತಿದ್ದಾಗ ಅವರ ಮೇಲೆ ಹಲ್ಲೆ ನಡೆದಿದೆ. ಟಿಎಂಸಿ ಯಜಮಾನಿಕೆಯಲ್ಲಿರುವ ಕಲ್ಲಿದ್ದಲು ಮಾಫಿಯಾದ ಗೂಂಡಾಗಳು ಈ ಹಲ್ಲೆ ನಡೆಸಿದ್ದಾರೆ ಎನ್ನಲಾಗಿದೆ.

ಅದೇ ದಿನ ದಕ್ಷಿಣ 24 ಪರಗಣ ಜಿಲ್ಲೆಯ ಡೈಮಂಡ್ ಹಾರ್ಬರ್ ಕ್ಷೇತ್ರದ ಸಿಪಿಐ(ಎಂ) ಅಭ್ಯರ್ಥಿ ಡಾ. ಫವುದ್ ಹಲೀಂ ಮೇಲೂ ಆಳುವ ಪಕ್ಷದ ಗೂಂಡಾಗಳು ಮಾಡಿರುವ ಹಲ್ಲೆಯಿಂದಾಗಿ ಅವರು ತೀವ್ರವಾಗಿ ಗಾಯಗೊಂಡು ಅವರನ್ನು ಆಸ್ಪತ್ರೆಗೆ ಸೇರಿಸಬೇಕಾಗಿ ಬಂದಿದೆ.

ಅದರ ಹಿಂದಿನ ದಿನ ಬಸಿರ್ಹಾಟ್ ಕ್ಷೇತ್ರದ ಸಿಪಿಐ ಅಭ್ಯರ್ಥಿ ಪಲ್ಲಬ್ ಸೆನ್‌ಗುಪ್ತರವರ ಮೇಲೆ ಹಲ್ಲೆ ನಡೆದಿದೆ, ಅವರು ಚುನಾವಣಾ ಪ್ರಚಾರವನ್ನು ಮುಂದುವರೆಸುವ ಧೈರ್ಯ ತೋರಿದರೆ ತೀವ್ರ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ ಎಂದು ಟಿಎಂಸಿ ಗೂಂಡಾಗಳು ಬೆದರಿಸಿದ್ದಾರೆ.

ಈ ಹಲ್ಲೆಗಳನ್ನು, ಬೆದರಿಕೆಗಳನ್ನು ಸಿಪಿಐ(ಎಂ) ಪೊಲಿಟ್ ಬ್ಯುರೊ ಬಲವಾಗಿ ಖಂಡಿಸಿದೆ.

ದಿನ ಬೆಳಗಾದರೆ ಮುಖ್ಯಧಾರೆಯ ಕಾರ್ಪೊರೇಟ್ ಮಾಧ್ಯಮಗಳಲ್ಲಿನ ಚುನಾವಣಾ ಸರ್ವೆಗಳು ಎಂದು ಹೇಳಿಕೊಳ್ಳುವ ವರದಿಗಳು ಪಶ್ಚಿಮ ಬಂಗಾಲದಲ್ಲಿ ಎಡಶಕ್ತಿಗಳು ಸತ್ತೇ ಹೋಗುತ್ತವೆ ಎಂದು ಸಂತೋಷದಿಂದ ಭವಿಷ್ಯ ನಡಿಯುತ್ತಿವೆ. ಹಾಗಿದ್ದರೆ ಎಡಪಕ್ಷಗಳ ಕಾರ್ಯಕರ್ತರು ಮಾತ್ರವಲ್ಲ ಅಭ್ಯರ್ಥಿಗಳ ಮೇಲೆಯೂ ಹಲ್ಲೆಗಳು ಏಕೆ ಹೆಚ್ಚುತ್ತಿವೆ? ಇಂತಹ ಮಾರಣಾಂತಿಕ ಹಲ್ಲೆಗಳು, ವಾಸ್ತವಿಕವಾಗಿ, ಬಹುಪಾಲು ಮತದಾರರಿಗೆ ಮತದಾನದ ಹಕ್ಕನ್ನೂ ನಿರಾಕರಿಸುವ ಅಳುವ ಪಕ್ಷ ಟಿಎಂಸಿಯು ಪ್ರಜಾಪ್ರಭುತ್ವ–ವಿರೋಧಿ ಮತ್ತು ಸರ್ವಾಧಿಕಾರಶಾಹಿ ಧೋರಣೆಗಳಿಗೆ ಎಡರಂಗ ಸವಾಲುಗಳನ್ನು ಒಡ್ಡಿದೆ ಎಂಬುದನ್ನು ಎತ್ತಿ ತೋರುತ್ತವೆ ಎಂದು ಪೊಲಿಟ್‌ಬ್ಯುರೊ ಹೇಳಿದೆ.

ಕೆಂಬಾವುಟವನ್ನು ಇಂತಹ ಭಯೋತ್ಪಾದಕ ತಂತ್ರಗಳಿಂದ ದಮನ ಮಾಡಲು ಸಾಧ್ಯವಿಲ್ಲೆ ಎಂದು ಸಿಪಿಐ(ಎಂ), ಇತರ ಎಡಪಕ್ಷಗಳು ಮತ್ತು ಪ್ರಜಾಪ್ರಭುತ್ವವಾದಿ ಮನೋಭಾವದ ಜನಗಳು ಪುನರುಚ್ಚರಿಸುತ್ತಾರೆ ಎಂದು ಪೊಲಿಟ್ ಬ್ಯುರೊ ಹೇಳಿದೆ.

ಪಶ್ಚಿಮ ಬಂಗಾಲದಲ್ಲಿ ಮುಕ್ತ ಮತ್ತು ನ್ಯಾಯಯುತ ಮತದಾನ ನಡೆಯುವಂತೆ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಚುನಾವಣಾ ಆಯೋಗವನ್ನು ಈ ಹಿಂದೆ ಹಲವು ಬಾರಿ ಕೇಳಲಾಗಿದ್ದು, ಈಗ ಮತ್ತೊಮ್ಮೆ ಆದನ್ನು ಪೊಲಿಟ್ ಬ್ಯುರೊ ಆಗ್ರಹಿಸಿದೆ. ಪಶ್ಚಿಮ ಬಂಗಾಳದಲ್ಲಿ ಪ್ರಜಾಪ್ರಭುತ್ವ ಪ್ರಕ್ರಿಯೆಯನ್ನೇ ಶಿಥಿಲಗೊಳಿಸುತ್ತಿರುವ ಈ ಶಕ್ತಿಗಳನ್ನು ದೂರ ತಳ್ಳಬೇಕು ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಈ ರಾಜ್ಯದ ಮತ್ತು ಇಡೀ ದೇಶದ ಪ್ರಜಾಪ್ರಭುತ್ವ ಮನೋಭಾವದ ಜನಗಳಿಗೆ ಮನವಿ ಮಾಡಿಕೊಂಡಿದೆ.

ಸಂಪಾದಕೀಯ

ಸ್ವತಂತ್ರ ಅಭ್ಯರ್ಥಿಗಳ ವಿಷಯದಲ್ಲಿ ಎಚ್ಚರಿಕೆ ಬೇಕು

ಚುನಾವಣೆಗಳಲ್ಲಿ ಸ್ವತಂತ್ರವಾಗಿ ಸ್ಪರ್ಧಿಸುವ ಅಭ್ಯರ್ಥಿಗಳನ್ನು ಬೆಂಬಲಿಸುವ ವಿಷಯದಲ್ಲಿ ಎಚ್ಚರಿಕೆ ಬೇಕು ಎಂಬುವುದು ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಶ್ರೀಮತಿ ಸುಮಲತಾ ಅಂಬರೀಶ್ ವಿಷಯದಲ್ಲಿ ಸ್ಪಷ್ಟವಾಗಿದೆ. ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ಇಬ್ಬರು ಪ್ರಮುಖ ಸ್ಪರ್ಧಿಗಳು. ಒಬ್ಬರು ಕಾಂಗ್ರೆಸ್ ಜೆಡಿಎಸ್ ಮೈತ್ರಿಕೂಟದ ಪರವಾಗಿ ಸ್ಪರ್ಧಿಸಿರುವ ಜೆಡಿಎಸ್ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ. ಇನ್ನೊಬ್ಬರು ಸ್ವತಂತ್ರವಾಗಿ ಸ್ಪರ್ಧಿಸಿರುವ ಶ್ರೀಮತಿ ಸುಮಲತಾ ಅಂಬರೀಶ್. ಯಾವ ಪಕ್ಷದ ಅಭ್ಯರ್ಥಿಗೂ ಮತ ನೀಡದೆ ಸ್ವತಂತ್ರ ಅಭ್ಯರ್ಥಿಗೆ ಮತ ನೀಡಲು ಬಯಸಿದ್ದ ಮಂಡ್ಯ ಕ್ಷೇತ್ರದ ಮತದಾರರಿಗೆ ಶಾಕ್ ಆಗಿದೆ. ಅವರು ನಂಬಿಕೆ ಇಟ್ಟು ಕೊಂಡಿದ್ದ ಸ್ವತಂತ್ರ ಅಭ್ಯರ್ಥಿ ಶ್ರೀಮತಿ ಸುಮಲತಾರವರಿಗೆ ಬಿಜೆಪಿ ಬೆಂಬಲ ಘೋಷಿಸಿದೆ. ಬಿಜೆಪಿ ಮಂಡ್ಯ ಕ್ಷೇತ್ರದಲ್ಲಿ ತಮ್ಮ ಪಕ್ಷದ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಲಿಲ್ಲ. ಬದಲಾಗಿ ಸ್ವತಂತ್ರ ಅಭ್ಯರ್ಥಿ ಶ್ರೀಮತಿ ಸುಮಲತಾರವರಿಗೆ ಬೆಂಬಲ ನೀಡಿದೆ. ಬಹಿರಂಗವಾಗಿ ಪ್ರಚಾರದಲ್ಲಿ ತೊಡಗಿದೆ. ಶ್ರೀಮತಿ ಸುಮಲತಾರವರು ಬಿಜೆಪಿಯ ಬೆಂಬಲವನ್ನು ನಿರಾಕರಿಸಲಿಲ್ಲ. ಬದಲಾಗಿ ಅದನ್ನು ಸ್ವಾಗತಿಸಿದ್ದಾರೆ. ಶ್ರೀಮತಿ ಸುಮಲತಾ ರವರು ಬಿಜೆಪಿಯ ಅಘೋಷಿತ ಅಭ್ಯರ್ಥಿಯೇ ಆಗಿದ್ದಾರೆ. ಇದರಿಂದಾಗಿ ಯಾವುದೇ ಪಕ್ಷದ ಅಭ್ಯರ್ಥಿಯನ್ನು ಬೆಂಬಲಿಸುವ ಬದಲು, ಒಬ್ಬ ಸ್ವತಂತ್ರ ಅಭ್ಯರ್ಥಿ ಯನ್ನು ಬೆಂಬಲಿಸಿ ಗೆಲ್ಲಿಸಬೇಕೆಂದು ಬಯಸಿದ್ದ ಮತದಾರರಿಗೆ ದ್ರೋಹವಾಗಿದೆ. ಮಂಡ್ಯ ಕ್ಷೇತ್ರದ ವಿಷಯದಲ್ಲಿ ಬಿಜೆಪಿಗೂ ಮತ ನೀಡದೆ, ಕಾಂಗ್ರೆಸ್– ಜೆಡಿಎಸ್ ಮೈತ್ರಿಕೂಟದ ಅಭ್ಯರ್ಥಿಗೂ ಮತ ಹಾಕದಿರಲು ನಿರ್ಧರಿಸಿದವರಿಗೆ ಈ ಬೆಳವಣಿಗೆಯಿಂದಾಗಿ ನಿರಾಶೆಯಾಗಿದೆ.

ಕೆಲವು ವಿಶೇಷ ಸಂದರ್ಭಗಳನ್ನು ಹೊರತುಪಡಿಸಿ ಸಾಮಾನ್ಯ ಸಂದರ್ಭಗಳಲ್ಲಿ ಸ್ವತಂತ್ರ ಅಭ್ಯರ್ಥಿಗಳಿಗೆ ಮತ ನೀಡುವುದು ಅಪಾಯಕಾರಿಯಾಗಿದೆ ಎನ್ನುವುದಕ್ಕೆ ಇನ್ನೂ ಕೆಲವು ಕಾರಣಗಳನ್ನು ಚರ್ಚಿಸಬಹುದು.

ಸ್ವತಂತ್ರ ಅಭ್ಯರ್ಥಿಗೆ ಯಾವುದೇ ಸೈದ್ಧಾಂತಿಕ ಬದ್ಧತೆ ಇರುವುದಿಲ್ಲ. ಕ್ಷೇತ್ರದ ಮತದಾರರ ನಿರೀಕ್ಷೆಗಳ ಬಗ್ಗೆ ಸ್ವತಂತ್ರ ಅಭ್ಯರ್ಥಿ ಯಾವುದೇ ಸ್ಪಷ್ಟ ನಿಲುವು ಹೊಂದಿರಬೇಕಾಗಿಲ್ಲ. ಆತನ ಸ್ವಂತ ವರ್ಚಸ್ಸು ವ್ಯಕ್ತಿಗತ ಸಾಧನೆ, ಮತದಾರರನ್ನು ಸೆಳೆಯುವ ಕಲೆ ಮೊದಲಾದವುಗಳೇ ಆತನ ಬಂಡವಾಳ. ಆತನ ಮಾತುಗಳಿಗೆ ಮತ್ತು ಕೃತಿಗಳಿಗೆ ಯಾವುದೇ ಚೌಕಟ್ಟು, ಯಾವುದೇ ನಿಯಂತ್ರಣ ಇರುವುದಿಲ್ಲ. ಆತನು ತನ್ನ ನಿಲುವುಗಳನ್ನು ತನ್ನ ಇಚ್ಛಾನುಸಾರ ಬದಲಾಯಿಸಿಕೊಳ್ಳಬಹುದು. ಯಾರು ಆತನನ್ನು ಪ್ರಶ್ನಿಸಲು ಸಾಧ್ಯವಿಲ್ಲ.

ಕೆಲವೊಮ್ಮೆ, ಒಂದು ಪಕ್ಷದಿಂದ ಟಿಕೆಟ್ ನಿರೀಕ್ಷಿಸುತ್ತಿರುವನಿಗೆ ಟಿಕೆಟ್ ದೊರೆಯದಿದ್ದಾಗ ಆತ ಸ್ವಂತ ವರ್ಚಸ್ಸಿನ ಆಧಾರದಲ್ಲಿ, ಕೆಲವೊಮ್ಮೆ ಹಣಬಲ, ಜಾತಿಬಲ, ತೋಳ್ಬಲ ಬಳಸಿ ಗೆಲ್ಲಬಹುದು. ಮುಂದೆ ಆತ ಯಾವ ತೀರ್ಮಾನ ಕೈಗೊಳ್ಳುತ್ತಾನೆ ಎಂಬುದು ಆತನಿಗೆ ಬಿಟ್ಟ ವಿಚಾರವಾಗುತ್ತದೆ.

ಸ್ವತಂತ್ರವಾಗಿ ಸ್ಪರ್ಧಿಸಿ ಗೆದ್ದವರು ಚುನಾವಣೆಯ ನಂತರ ಮಾರಾಟಕ್ಕೆ ಲಭ್ಯವಿರುವ ಕುದುರೆಗಳಾಗಬಹುದು. ಬಹುಮತ ಸಂಪಾದಿಸಲು ಒಂದು ರಾಜಕೀಯ ಪಕ್ಷಕ್ಕೆ ಅಗತ್ಯ ಸಂಖ್ಯೆಯನ್ನು ಒದಗಿಸಲು ಇಂಥವರು ಮುಂದಾಗುತ್ತಾರೆ. ಅವರಿಗೆ ಪಕ್ಷದ ಕಟ್ಟುಪಾಡುಗಳಿಲ್ಲದೆ ಇರುವುದರಿಂದ ಅವರು ಹೆಚ್ಚಿನ ಬೆಲೆಗೆ ವಿಕ್ರಯವಾಗುತ್ತಾರೆ. ಇಂಥವರಿಂದ ಒಳ್ಳೆಯ ಜನಪರ ರಾಜಕೀಯವನ್ನು ನಿರೀಕ್ಷಿಸಲು ಸಾಧ್ಯವೇ? ಆದ್ದರಿಂದ ಅಂತಹ ಸಾಮಾಜಿಕ ಹೊಣೆಗಾರಿಕೆ ಇಲ್ಲದ ಸ್ವತಂತ್ರ ಅಭ್ಯರ್ಥಿಗಳನ್ನು ಆಯ್ಕೆಮಾಡುವುದು ಅಪಾಯಕಾರಿಯಾಗಿದೆ.

ಆದರೆ, ಕೆಲವೊಮ್ಮೆ ಸಮಾಜದಲ್ಲಿ ಗಣ್ಯರು, ಸಜ್ಜನರು ಎಂಬ ಚರಿತ್ರೆ ಉಳ್ಳವರು ಯಾವುದೇ ರಾಜಕೀಯ ಪಕ್ಷದ ಸದಸ್ಯರಾಗಿರದೆ ಜನಸೇವೆಯಲ್ಲಿ ತೊಡಗಿರುತ್ತಾರೆ. ಅಂತವರನ್ನು ಆಯ್ಕೆ ಮಾಡುವುದರಿಂದ ಶಾಸನ ಸಭೆಗಳ ಘನತೆ, ಅಲ್ಲಿ ನಡೆಯುವ ಚರ್ಚೆಯ ಗುಣಮಟ್ಟ ಉತ್ತಮಗೊಳ್ಳುವ ಸಾಧ್ಯತೆ ಇದೆ. ಅಂತವರು ಸ್ವತಂತ್ರವಾಗಿ ಸ್ಪರ್ಧೆ ಮಾಡಿದಾಗ, ಪ್ರಜ್ಞಾವಂತ ಮತದಾರರು ಅವರನ್ನು ಗೆಲ್ಲಿಸಬಹುದು.

ವ್ಯಕ್ತಿಗಿಂತ ವ್ಯಕ್ತಿಯು ಪ್ರತಿಪಾದಿಸುವ ಧೋರಣೆಗಳು ಮುಖ್ಯವಾಗುತ್ತವೆ. ರಾಜಕೀಯ ಪಕ್ಷಗಳಿಗೆ ಕೆಲವು ಧೋರಣೆಗಳಾದರೂ ಇರುತ್ತವೆ. ನಮ್ಮ ಆಯ್ಕೆ ಧೋರಣೆಗಳ ಆಧಾರದಲ್ಲಿ ಇರಬೇಕು. ವ್ಯಕ್ತಿ ಎಷ್ಟೇ ಒಳ್ಳೆಯವನು ಆಗಿದ್ದರೂ ಆತನ ಪಕ್ಷದ ಧೋರಣೆಗಳು ಜನ ವಿರೋಧಿಯಾಗಿದ್ದರೆ ಅಂತಹ ಅಭ್ಯರ್ಥಿಗಳನ್ನು ಮತ್ತು ಅವರ ಪಕ್ಷಗಳನ್ನು ತಿರಸ್ಕರಿಸಬೇಕಾಗುತ್ತದೆ. ಸ್ವತಂತ್ರ ಅಭ್ಯರ್ಥಿಗಳ ವಿಷಯದಲ್ಲಿ ಆಯ್ಕೆ ಕಷ್ಟ ಸಾಧ್ಯವಾಗುತ್ತದೆ.

ಸಿಪಿಐ(ಎಂ) ಅಂತಹ ಕಮ್ಯುನಿಸ್ಟ್ ಪಕ್ಷಗಳಲ್ಲಿ ಅಭ್ಯರ್ಥಿಗಳ ಆಯ್ಕೆಯನ್ನು ಪಕ್ಷದ ಆಯಾ ಹಂತದ ಸಮಿತಿಗಳು ನಿರ್ಧರಿಸುತ್ತವೆ. ಚುನಾವಣಾ ಕೆಲಸಗಳನ್ನು ಸಮಿತಿಗಳೇ ನಿರ್ವಹಿಸುತ್ತವೆ. ಜನಪರ ಹೋರಾಟಗಳಲ್ಲಿ ಭಾಗವಹಿಸಿದ, ಜನಾನುರಾಗಿಯಾಗಿ ಬೆಳೆದು ಬಂದಿರುವ ವ್ಯಕ್ತಿಗಳು ಕಮ್ಯುನಿಸ್ಟ್ ಪಕ್ಷಗಳ ಅಭ್ಯರ್ಥಿಗಳಾಗಿ ಸ್ಪರ್ಧಿಸಲು ಬಯಸುತ್ತಾರೆ. ಆದರೆ ಕಮ್ಯುನಿಸ್ಟ್ ಪಕ್ಷಗಳಲ್ಲಿ ತರಾತುರಿಯಲ್ಲಿ ಸದಸ್ಯತ್ವ ನೀಡಲಾಗುವುದಿಲ್ಲ. ಕಮ್ಯುನಿಸ್ಟ್ ಪಕ್ಷದಲ್ಲಿ ಸದಸ್ಯರಾಗಲು ಬಯಸುವವರು ಮೊದಲು ಸಹಾಯಕ ಸದಸ್ಯರಾಗಿ, ನಂತರ ಉಮೇದ್ವಾರ ಸದಸ್ಯರಾಗಿ ಕೆಲಸ ಮಾಡಿ, ಪಕ್ಷದ ಪೂರ್ಣ ಸದಸ್ಯತ್ವವನ್ನು ಪಡೆಯುತ್ತಾರೆ. ಚುನಾವಣೆಯಲ್ಲಿ ಅಭ್ಯರ್ಥಿಯಾಗುವ ಉದ್ದೇಶದಿಂದ ಸದಸ್ಯತ್ವ ಪಡೆಯಲಾಗುವುದಿಲ್ಲ. ಆದರೆ ವ್ಯಕ್ತಿಯ ಹಿನ್ನೆಲೆ, ಜನಪರ ಹೋರಾಟಗಳಲ್ಲಿ ಅವರು ನಿರ್ವಹಿಸಿದ ಪಾತ್ರ ಮೊದಲಾದವುಗಳನ್ನು ಗಣನೆಗೆ ತೆಗೆದುಕೊಂಡು ಅವರನ್ನು ಸ್ವತಂತ್ರ ಅಭ್ಯರ್ಥಿಗಳಾಗಿ ಸ್ಪರ್ಧೆಗಿಳಿಸಿ ಪಕ್ಷದ ಬೆಂಬಲ ನೀಡುವ ಪರಿಪಾಠ ಕಮ್ಯುನಿಸ್ಟ್ ಪಕ್ಷಗಳಲ್ಲಿ ಇದೆ. ಈ ಸಲದ ಲೋಕಸಭಾ ಚುನಾವಣೆಯಲ್ಲಿ, ಉದಾಹರಣೆಗೆ, ಸಿಪಿಐ(ಎಂ) ಕೇರಳದಲ್ಲಿ ಇಬ್ಬರು ಗಣ್ಯ ವ್ಯಕ್ತಿಗಳನ್ನು ಬೆಂಬಲಿಸಿ ಸ್ಪರ್ಧೆಗಿಳಿಸಿದೆ. ಸಿಪಿಐ(ಎಂ) ಬೆಂಬಲಿಸಿರುವ ಆ ಇಬ್ಬರು ಸ್ವತಂತ್ರ ಅಭ್ಯರ್ಥಿಗಳು ಸಿಪಿಐ(ಎಂ)ನ ಬಹುತೇಕ ತಾತ್ವಿಕ ನಿಲುವುಗಳನ್ನು ಒಪ್ಪಿದವರಾಗಿದ್ದಾರೆ. ಹಾಗೆ ಸ್ವತಂತ್ರ ಅಭ್ಯರ್ಥಿಗಳನ್ನು ಬೆಂಬಲಿಸುವ ಆರೋಗ್ಯಕರ ಪದ್ಧತಿ ಸಿಪಿಐ(ಎಂ)ನಲ್ಲಿ ಇದೆ. ಆದರೆ, ಯಾರನ್ನು ಬೇಕಾದರೂ ಬೆಂಬಲಿಸಿ ಗುಟ್ಟಾದ ಒಪ್ಪಂದ ಮಾಡಿ ತಮ್ಮ ಸಂಖ್ಯಾಬಲವನ್ನು ಹೆಚ್ಚಿಸಿಕೊಳ್ಳುವ ಪರಿಪಾಟ ಆರೋಗ್ಯಕರವಾದುದಲ್ಲ. ಜನಪರವಾದ ಧೋರಣೆ ಇಲ್ಲದ ಪಕ್ಷಗಳು ಯಾರನ್ನು ಬೇಕಾದರೂ, ಯಾವಾಗ ಬೇಕಾದರೂ ಸೇರಿಸಿಕೊಳ್ಳುತ್ತವೆ.

ಎತ್ತ ಸಾಗುತ್ತಿದೆ ಎತ್ತಿನಹೊಳೆ ಯೋಜನೆ?

–ನಿತ್ಯಾನಂದಸ್ವಾಮಿ–

ಕುಡಿಯಲು ನೀರು ಹಾಗೂ ವ್ಯವಸಾಯಕ್ಕೆ ನೀರಿನ ತೀವ್ರ ಅಭಾವವನ್ನು ಎದುರಿಸುತ್ತಿರುವ ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳನ್ನು ಒಳಗೊಂಡಂತೆ ಒಟ್ಟು 7 ಜಿಲ್ಲೆಗಳ ಶಾಶ್ವತ ನೀರಾವರಿ ಯೋಜನೆಯೊಂದನ್ನು ಮಂಜೂರು ಮಾಡಿ ಜಾರಿಗೊಳಿಸಬೇಕೆಂದು ಒತ್ತಾಯಿಸಿ ಹಲವು ಹೋರಾಟಗಳ ನಂತರ ನೀರಾವರಿ ತಜ್ಞ ಜಿ.ಎಸ್ ಪರಮಶಿವಯ್ಯ ಅವರ ವರದಿ ಬಂತು. ಪಶ್ಚಿಮ ಘಟ್ಟದಲ್ಲಿ ಹುಟ್ಟಿ ಪಶ್ಚಿಮಾಭಿಮುಖವಾಗಿ ಹರಿದು ಮಳೆಗಾಲದಲ್ಲಿ ವ್ಯರ್ಥವಾಗಿ ಸಮುದ್ರ ಸೇರುತ್ತಿರುವ ನೇತ್ರಾವತಿ ಉಪನದಿಗಳ ನೀರನ್ನು ಗಾರ್ಲೆಂಡ್ ಕಾಲುವೆಗಳ ಮೂಲಕ ಪೂರ್ವಕ್ಕೆ ಹರಿಸಿ ಮಧ್ಯಕರ್ನಾಟಕದ ನಿರಂತರ ಜಲಕ್ಷಾಮ ಎದುರಿಸುತ್ತಿರುವ ಜಿಲ್ಲೆಗಳಿಗೆ ನೀರನ್ನು ಒದಗಿಸುವ ಯೋಜನೆ ಅದಾಗಿತ್ತು. ಆದರೆ ಈ ಯೋಜನೆ ಜಾರಿಯಾದರೆ ಕರಾವಳಿಯ ಜೀವನದಿ ಆಗಿರುವ ನೇತ್ರಾವತಿಯಲ್ಲಿ ನೀರೇ ಇಲ್ಲದಂತಹ ಪರಿಸ್ಥಿತಿ ನಿರ್ಮಾಣ ಆಗಬಹುದೆಂದು ಕರಾವಳಿ ಜಿಲ್ಲೆಗಳ ಪರಿಸರವಾದಿಗಳು ಹಾಗೂ ಸಾಮಾನ್ಯ ಜನರು ತೀವ್ರ ವಿರೋಧ ವ್ಯಕ್ತಪಡಿಸಿದರು. ಆಗ ಇನ್ನೂ ಜೀವಂತವಾಗಿದ್ದ ಜಿ.ಎಸ್. ಪರಮಶಿವಯ್ಯನವರು ತಮ್ಮ ಯೋಜನೆಗೆ ಕೆಲವು ವೈಜ್ಞಾನಿಕವಾದ ಮಾರ್ಪಾಡುಗಳನ್ನು ಮಾಡಿ ಕೊಟ್ಟರೂ ಯೋಜನೆಗೆ ಜನರ ವಿರೋಧ ಕಡಿಮೆಯಾಗಲಿಲ್ಲ. ಇತ್ತ ಶಾಶ್ವತ ನಿರಾವರಿ ಯೋಜನೆಗಾಗಿ ಚಳುವಳಿಯೂ ಜೋರಾಯಿತು. ಚುನಾವಣೆಗಳಲ್ಲಿ ಇದೊಂದು ಚರ್ಚೆಯ ಪ್ರಮುಖ ವಿಷಯವಾಯಿತು. ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳು ನೀರಿನ ವಿಷಯದಲ್ಲೂ ರಾಜಕಾರಣ ಮಾಡಿ ರಾಜಕೀಯ ಲಾಭ ಪಡೆಯಲು ಪೈಪೋಟಿ ನಡೆಸುತ್ತಾ ಬಂದವು. ಅವಿಭಜಿತ ಕೋಲಾರ ಜಿಲ್ಲೆಯಲ್ಲಿ ಗಣನೀಯವಾದ ಜನಬೆಂಬಲ ಹೊಂದಿರುವ ಸಿಪಿಐ(ಎಂ) ಶಾಶ್ವತ ನೀರಾವರಿ ಯೋಜನೆಗಾಗಿ ತೀವ್ರ ಹೋರಾಟ ಮಾಡುತ್ತಾ ಬಂತು. ಈ ಜಿಲ್ಲೆಗಳಿಗೆ ಕೇವಲ ಕುಡಿಯುವ ನೀರು ಮಾತ್ರವಲ್ಲ, ಕೃಷಿ ಚಟುವಟಿಕೆಗಳಿಗೂ ನೀರನ್ನೂ ಒದಗಿಸುವ ಯೋಜನೆಗಾಗಿ ಸಿಪಿಐ(ಎಂ) ಹೋರಾಟವನ್ನು ಮುಂದುವರೆಸಿತು.

ಎತ್ತಿನ ಹೊಳೆ ಯೋಜನೆ:

ಹೋರಾಟ ನಿರತ ಜನರ ಆಕ್ರೋಶವನ್ನು ಶಮನ ಮಾಡಲು ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯನವರು ತಜ್ಞರ ಒಂದು ಸಮಿತಿಯನ್ನು ನೇಮಿಸಿದರು. ಸಮಿತಿ ನೀಡಿದ ವರದಿ ಆಧಾರದಲ್ಲಿ ರೂಪಿತವಾದ ಯೋಜನೆ 'ಎತ್ತಿನ ಹೊಳೆ' ಯೋಜನೆ. ಇದು ಕೇವಲ ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳಿಗೆ ಕುಡಿಯುವ ನೀರಿನ ಕೊರತೆಯನ್ನು ನೀಗಿಸಲು 24 ಟಿಎಂಸಿ ನೀರನ್ನು ಒದಗಿಸುವ ಯೋಜನೆಯಾಗಿದೆ. ಪಶ್ಚಿಮ ಘಟ್ಟದಲ್ಲಿ ಹುಟ್ಟಿ ಹರಿಯುವ ಎತ್ತಿನ ಹೊಳೆ, ಕಾಡುಮನೆ ಹೊಳೆ, ಹೊಂಗದ ಹಳ್ಳ, ಕೇರಿ ಹೊಳೆ ಮುಂತಾದ ಹೊಳೆಗಳಿಗೆ ಚೆಕ್ ಡ್ಯಾಂಗಳನ್ನು ಕಟ್ಟಿ, ಸಂಗ್ರಹಿಸಿದ ನೀರನ್ನು ಯಾಂತ್ರಿಕ ಪಂಪಿಂಗ್ ಮೂಲಕ ತುಮಕೂರಿನ ದೇವನ ದುರ್ಗ ಜಲಾಶಯದಲ್ಲಿ ಶೇಖರಿಸಿ ಬಯಲು ಸೀಮೆಯ ಈ ಎರಡು ಜಿಲ್ಲೆಗಳಿಗೆ ಒದಗಿಸುವುದು ಸರ್ಕಾರದ ಉದ್ದೇಶವಾಗಿದೆ.

ಯೋಜನೆಯ ಕಾಮಗಾರಿಗಳನ್ನು 2012 ರಲ್ಲಿ ಆರಂಭಿಸಲಾಗಿತ್ತು. ಇದರ ಚುನಾವಣಾ ಲಾಭ ಕಾಂಗ್ರೆಸ್ ಪಕ್ಷದ ವೀರಪ್ಪ ಮೊಯಿಲಿ ಪಡೆದಿದ್ದರು. ಆದರೆ ಯೋಜನೆಯ ಅನುಷ್ಠಾನಕ್ಕೆ ನಿರೀಕ್ಷಿತ ವೇಗ ಇಲ್ಲದಾಗಿದೆ. ಈಗಾಗಲೇ 4,133.93 ಕೋಟಿ ರೂ. ವೆಚ್ಚವಾಗಿದೆ. 2022–23 ರಲ್ಲಿ ಯೋಜನೆ ಪೂರ್ಣಗೊಳಿಸುವ ಉದ್ದೇಶವಿದೆ ಎನ್ನಲಾಗುತ್ತಿದೆ. 2019 ರಲ್ಲಿ ಮೊದಲ ಹಂತದ ಲಿಫ್ಟ್ ಕಾಮಗಾರಿಗಳನ್ನು ಪೂರ್ಣಗೊಳಿಸಿ ನೀರು ಹರಿಸುವ ಗುರಿ ತಲುಪುವ ಸಾಧ್ಯತೆ ದೂರವಾಗಿದೆ.

ಸರ್ಕಾರ ನೇಮಿಸಿದ ತಜ್ಞರ ಸಮಿತಿಗೆ ಎತ್ತಿನ ಹೊಳೆ ಹೊರತಾಗಿ ಕೃಷ್ಣ ಜಲವಿವಾದ ನ್ಯಾಯಾಧಿಕರಣದಲ್ಲಿ ಹಂಚಿಕೆ ಆಗಬೇಕಾದ ನೀರು, ಮೇಕೆದಾಟು, ಶರಾವತಿ ಮತ್ತು ಅಘನಾಶಿನಿ ಯೋಜನೆಗಳ ಜೊತೆಗೆ ಪರಮಶಿವಯ್ಯ ವರದಿಯನ್ನೂ ಪರಿಗಣಿಸುವಂತೆ ನೀಡಲಾದ ಆದೇಶ ಪೂರ್ಣ ಪ್ರಮಾಣದಲ್ಲಿ ಪರಿಶೀಲನೆಗೆ ಒಳಪಟ್ಟಿಲ್ಲ. ಬಯಲು ಸೀಮೆಯ ಎಲ್ಲ 7 ಜಿಲ್ಲೆಗಳಿಗೂ ಆದ್ಯತೆಯ ಮೇರೆಗೆ ಶಾಶ್ವತ ನೀರಾವರಿ ಯೋಜನೆಯನ್ನು ರೂಪಿಸಬೇಕಾಗಿದೆ. ಇವೆಲ್ಲದರ ಸುತ್ತ ಇರುವ ಗೊಂದಲಗಳ ನಿವಾರಣೆ ಆಗಬೇಕು ಮಾತ್ರವಲ್ಲ ಒಂದು ಬಲವಾದ ಚಳುವಳಿಯನ್ನು ಕಟ್ಟಬೇಕಾಗಿದೆ. ಈ ಗುರಿ ಸಾಧನೆಗೆ, ಈ ಚುನಾವಣೆಯಲ್ಲಿ ಸಿಪಿಐ(ಎ) ಅಭ್ಯರ್ಥಿ, ಹೋರಾಟಗಾರ್ತಿ ಎಸ್. ವರಲಕ್ಷ್ಮಿ ಅವರನ್ನು ಗೆಲ್ಲಿಸಿದರೆ ಸಹಾಯವಾದೀತು.

ಕೆ.ಸಿ. ವ್ಯಾಲಿ ನೀರು :

ಈ ನಡುವೆ ಕೃಷಿ ಚಟುವಟಿಕೆಗಳಿಗಾಗಿ ನೀರಿನ ಕೊರತೆ ನೀಗಿಸಲು ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳ ಕೆರೆಗಳಿಗೆ ಸಂಸ್ಕರಿಸಿದ ಕೊಳಚೆ ನೀರನ್ನು ಹರಿಸುವ ಯೋಜನೆ ಅನುಷ್ಠಾನಗೊಂಡಿದೆ. ಇದಕ್ಕೆ ಸುಮಾರು 2,500 ಕೋಟಿ ರೂ. ಖರ್ಚಾಗಿದೆ. ಆದರೆ ಆ ನೀರನ್ನು ಬಳಸುವ ಬಗ್ಗೆ ಜನರಲ್ಲಿ ಆತಂಕ ಉಂಟಾಗಿರುವುದು ಸಹಜವಾಗಿದೆ. ಈಗಾಗಲೇ ಫ್ಲೋರೈಡ್‌ಯುಕ್ತ ನೀರನ್ನು ಸೇವಿಸಿ ರೋಗಗಳಿಗೆ ತುತ್ತಾಗಿರುವ ಜನರಲ್ಲಿ ಕೊಳಚೆ ನೀರಿನ ಬಗ್ಗೆ ಭೀತಿ ಇದ್ದೇ ಇರುತ್ತದೆ. ಗಂಭೀರವಾದ ಪರಿಶೀಲನೆ ಅಗತ್ಯವಿದೆ. ಕೃಷಿ ಚಟುವಟಿಕೆಗೆ ಅದರ ಬಳಕೆಯಿಂದ ಏನೂ ಹಾನಿ ಆಗುವುದಿಲ್ಲ ಎನ್ನುವುದನ್ನು ಅಧ್ಯಯನ, ಸಂಶೋಧನೆ ಮೂಲಕ ಸಾಬೀತು ಪಡಿಸಬೇಕು. ಈ ವಿಷಯದಲ್ಲಿಯೂ ಈ ಸಲದ ಲೋಕಸಭಾ ಚುನಾವಣೆಯಲ್ಲಿ ಯಾರು ಲೋಕಸಭಾ ಸದಸ್ಯರಾಗಿ ಇಲ್ಲಿ ಆಯ್ಕೆಯಾಗುತ್ತಾರೆ ಎಂಬುದು ಬಹು ಮುಖ್ಯ ಪ್ರಶ್ನೆಯಾಗುತ್ತದೆ. ಈ ವಿಷಯದಲ್ಲಿ ಸಿಪಿಐ(ಎಂ) ನಡೆಸುತ್ತಾ ಬಂದಿರುವ ಜನ ಚಳುವಳಿಯನ್ನು ಅದರ ಗುರಿ ಮುಟ್ಟಿಸಲು ಸಾಧ್ಯವಾಗಬೇಕಾದರೆ ಬಿಜೆಪಿ ಮತ್ತು ಕಾಂಗ್ರೆಸ್ ಮುಂತಾದ ಪಕ್ಷಗಳನ್ನು ತಿರಸ್ಕರಿಸಿ, ಸಿಪಿಐ(ಎಂ) ಅಭ್ಯರ್ಥಿ, ದಿಟ್ಟ ಹೋರಾಟಗಾರ್ತಿ ಎಸ್. ವರಲಕ್ಷ್ಮಿ ಅವರನ್ನು ಗೆಲ್ಲಿಸಲು ಕ್ಷೇತ್ರದ ಮತದಾರರು ದೃಢ ನಿರ್ಧಾರ ಮಾಡಬೇಕು.

•

ಚುನಾವಣೆ ಸಂಬಂಧ ದ.ಕ. ಜಿಲ್ಲೆಯಲ್ಲಿ ರಾಜಕೀಯ ಸಮಾವೇಶಗಳು

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಿಪಿಐ(ಎಂ) ಪಕ್ಷವು ಲೋಕಸಭಾ ಚುನಾವಣೆಯಲ್ಲಿ ಈ ಹಿಂದೆ ಸ್ಪರ್ಧಿಸುತ್ತಿದ್ದುದರಿಂದ, ಈ ಬಾರಿಯ ಚುನಾವಣೆಯಲ್ಲಿ ಪಕ್ಷದ ನಿಲುವು ಹಾಗೂ ಮಾರ್ಗದರ್ಶನಕ್ಕಾಗಿ ಮತದಾರರು ಕಾತರರಾಗಿದ್ದರು. ಸಿಪಿಐ(ಎಂ) ಹಾಗೂ ಎಡಪಕ್ಷಗಳು ಸ್ಪರ್ಧಿಸಿದಲ್ಲಿ ಅವುಗಳನ್ನು ಗೆಲ್ಲಿಸುವುದಕ್ಕಾಗಿ ಚುನಾವಣೆಯಲ್ಲಿ ಮತದಾನಕ್ಕಾಗಿ ಪ್ರಚಾರ ಮಾಡಲಾಗುತ್ತಿತ್ತು. ಎಡಪಕ್ಷಗಳು ಸ್ಪರ್ಧಿಸದ ಕಡೆಗಳಲ್ಲಿ ಜನವಿರೋಧಿಯಾಗಿರುವ ಬಿಜೆಪಿಯನ್ನು ಸೋಲಿಸುವ ಸಲುವಾಗಿ ಜಾತ್ಯತೀತ ಪಕ್ಷಗಳಿಗೆ ಮತನೀಡಬೇಕೆಂದು ಪಕ್ಷವು ಕರೆಕೊಟ್ಟಿದೆ. ಬಿಜೆಪಿಗೆ ಪರ್ಯಾಯವಾಗಿ ಜಾತ್ಯತೀತ ಪಕ್ಷಗಳನ್ನು ಅಧಿಕಾರಕ್ಕೆ ತರುವುದನ್ನು ಖಚಿತಪಡಿಸಬೇಕೆಂದು ಪಕ್ಷವು ಕೊಟ್ಟ ಕರೆಯನ್ನು ಅನುಷ್ಠಾನಗೊಳಿಸುವ ಸಲುವಾಗಿ ಸಿಪಿಐ(ಎಂ) ಪಕ್ಷದ ದ.ಕ.ಜಿಲ್ಲಾ ಸಮಿತಿಯು ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ.

ದ.ಕ.ಜಿಲ್ಲೆಯಲ್ಲಿರುವ ಪಕ್ಷದ ಎಲ್ಲಾ ವಲಯ ಸಮಿತಿಗಳಿಗೂ, ಶಾಖೆಗಳಿಗೆ ಪಕ್ಷದ ಧೋರಣೆಯನ್ನು ವಿವರಿಸುವ ಕೆಲಸ ನಡೆಯುತ್ತಿದೆ. ಜೊತೆ ಜೊತೆಗೇ ಎಲ್ಲ ವಲಯ ಸಮಿತಿಗಳೂ ಸಾರ್ವಜನಿಕವಾಗಿ ರಾಜಕೀಯ ಸಮಾವೇಶ ನಡೆಸಿ, ಜಿಲ್ಲೆಯಲ್ಲಿ ಮತದಾರರು ಬಿಜೆಪಿಯನ್ನು ಸೋಲಿಸಬಲ್ಲ ಜಾತ್ಯತೀತ ಪಕ್ಷಕ್ಕೆ ಮತನೀಡುವಂತೆ ಜನಜಾಗೃತಿ ಕಾರ್ಯಕ್ರಮ ನಡೆಸುತ್ತಿದೆ.

ಪಕ್ಷದ ನಿಲುಮೆಯನ್ನು ತಿಳಿಸಲು ಜಿಲ್ಲಾ ಮಟ್ಟದ ಪತ್ರಿಕಾಗೋಷ್ಠಿ

ಎಪ್ರಿಲ್ 9 ರಂದು ಪತ್ರಿಕಾಗೋಷ್ಠಿ ನಡೆಸಿ, ಬಿಜೆಪಿ ಸರ್ಕಾರದ ವೈಫಲ್ಯ, ಜನವಿರೋಧಿಯಾದ ಧೋರಣೆಗಳು, ಕೋಮುವಾದಿ ಚಟುವಟಿಕೆಗಳನ್ನು ಪ್ರೋತ್ಸಾಹಿಸಿ ಸೆಕ್ಯುಲಾರ್ ಶಕ್ತಿಗಳನ್ನು ಬೆದರಿಸುವುದು –ಇತ್ಯಾದಿಗಳ ಬಗ್ಗೆ ಪತ್ರಿಕಾಗೋಷ್ಠಿಯಲ್ಲಿ ವಿವರಿಸಲಾಯ್ತು. 2 ಅವಧಿಗಳಲ್ಲಿ ದ.ಕ.ಜಿಲ್ಲೆಯ ಸಂಸದರಾಗಿರುವ ನಳಿನ್ ಕುಮಾರ್ ಕಟೀಲ್ ಕೇಂದ್ರದ ಅಭಿವೃದ್ಧಿ ಯೋಜನೆಗಳನ್ನು ಜಾರಿಗೊಳಿಸುವಲ್ಲಿ ವಿಳಂಬ ನೀತಿ ಅನುಸರಿಸುತ್ತಿರುವುದನ್ನು ಖಂಡಿಸಲಾಯಿತು. ಮೇಲುಸೇತುವೆ, ಟೋಲ್‌ಗೇಟುಗಳನ್ನೊಳಗೊಂಡ ರಾಷ್ಟ್ರೀಯ ಕರಾವಳಿ ಹೆದ್ದಾರಿ ಇನ್ನೂ ಅಪೂರ್ಣವಾಗಿಯೇ ಉಳಿದಿದೆ. ಜಿಲ್ಲೆಯ ದೊಡ್ಡ ಸಂಖ್ಯೆಯ ಬೀಡಿ ಕಾರ್ಮಿಕರ ಬದುಕಿಗೆ ಅಪಾಯಕಾರಿಯಾದ ಕೋಟ್ಪಾ ಕಾಯಿದೆಯ ಅನುಷ್ಠಾನವನ್ನು ತಡೆಹಿಡಿಯಲು ಅವರು ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಮಂಗಳೂರು ವಿಮಾನ ನಿಲ್ದಾಣವನ್ನು ನಿರ್ವಹಣೆಗೆಂದು ಉದ್ಯಮಿ ಅದಾನಿಗೆ ಬಿಟ್ಟುಕೊಡಲಾಯಿತು. ನವಮಂಗಳೂರು ಬಂದರು ಮತ್ತು ಮಂಗಳೂರು ರೈಲ್ವೇ ನಿಲ್ದಾಣದ ನಿರ್ವಹಣೆಯನ್ನು ಖಾಸಗಿಯವರಿಗೆ ನೀಡುವ ಸಿದ್ಧತೆಗಳಾಗುತ್ತಿವೆ. ಜಿಲ್ಲೆಯ ಪ್ರತಿಷ್ಠಿತ ವಿಜಯಾ ಬ್ಯಾಂಕನ್ನು ಬ್ಯಾಂಕ್ ಆಫ್ ಬರೋಡಾದಲ್ಲಿ ವಿಲೀನಗೊಳಿಸಿದ್ದನ್ನೂ ನಳಿನ್ ಕುಮಾರ್ ತಡೆಯಲು ಯತ್ನಿಸಲಿಲ್ಲ. ಈ ನಿಟ್ಟಿನಲ್ಲಿ ಸಂಸದ ನಳಿನ್ ಕುಮಾರ್ ಕಟೀಲ್ ಅವರ ವೈಫಲ್ಯವನ್ನು ಪತ್ರಿಕಾಗೋಷ್ಠಿಯಲ್ಲಿ ಮನಗಾಣಿಸಲಾಯಿತು.

ಬಿಜೆಪಿ ವಿರೋಧಿ ಮತಗಳು ಛಿದ್ರವಾಗುವುದನ್ನು ತಡೆಯಲು ದ.ಕ. ಕ್ಷೇತ್ರದಲ್ಲಿ ಈ ಸರ್ತಿ ಸಿಪಿಐ(ಎಂ) ಪಕ್ಷ ಸ್ಪರ್ಧಿಸದೇ ಇರುವುದರಿಂದ ಅವರಿಗೆ ಸಮಸ್ಪರ್ಧಿಯಾಗಿ ಕಣದಲ್ಲಿರುವ ಜಾತ್ಯತೀತ ಪಕ್ಷಕ್ಕೆ ಜನತೆ ಮತ ಕೊಡುವಂತೆ ಸಿಪಿಐ(ಎಂ) ದ.ಕ. ಜಿಲ್ಲೆಯಲ್ಲಿ ಸ್ವತಂತ್ರ ಪ್ರಚಾರ ಮಾಡಲಿದೆ ಎಂಬುದನ್ನು ತಿಳಿಸಲಾಯಿತು. ಸಿಪಿಐ(ಎಂ) ದ.ಕ. ಜಿಲ್ಲಾ ಸಮಿತಿ ಕಾರ್ಯದರ್ಶಿ ವಸಂತ ಆಚಾರಿ ವಿವರ ನೀಡಿದರು. ಜಿಲ್ಲಾ ಸೆಕ್ರೆಟಾರಿಯಟ್ ಸದಸ್ಯರಾದ ಜೆ.ಬಾಲಕೃಷ್ಣ ಶೆಟ್ಟಿ, ಯಾದವ ಶೆಟ್ಟಿ, ಕೃಷ್ಣಪ್ಪ ಸಾಲ್ಯಾನ್, ಯು.ಬಿ.ಲೋಕಯ್ಯ, ಸುನಿಲ್ ಕುಮಾರ್ ಬಜಾಲ್, ವಾಸುದೇವ ಉಚ್ಚಿಲ್ ಉಪಸ್ಥಿತರಿದ್ದರು.

ಅಲ್ಲಲ್ಲಿ ರಾಜಕೀಯ ಸಮಾವೇಶಗಳು

ಬೆಳ್ತಂಗಡಿ:

ಎಪ್ರಿಲ್ 7 ರಂದು ಬೆಳ್ತಂಗಡಿಯಲ್ಲಿ ನಡೆದ ರಾಜಕೀಯ ಸಮಾವೇಶದಲ್ಲಿ ಸಿಪಿಐ(ಎಂ) ದ.ಕ. ಜಿಲ್ಲಾ ಕಾರ್ಯದರ್ಶಿ ವಸಂತ ಆಚಾರಿ ಪ್ರಧಾನ ಭಾಷಣ ಮಾಡಿದರು. ಸಿಪಿಐ(ಎಂ) ಬೆಳ್ತಂಗಡಿ ತಾಲೂಕು ಕಾರ್ಯದರ್ಶಿ, ಸಭೆಯ ಅಧ್ಯಕ್ಷತೆ ವಹಿಸಿದ ತಾಲೂಕು ಸಮಿತಿ ಸದಸ್ಯ ವಸಂತ ನಡ ಕೂಡಾ ಮಾತನಾಡಿದರು. ಪಕ್ಷದ ತಾಲೂಕು ಸಮಿತಿ ಸದಸ್ಯರು, ಪಕ್ಷದ ಸದಸ್ಯರು ಹಾಗೂ ಹಿತೈಷಿಗಳು ಸಮಾವೇಶದಲ್ಲಿ ಭಾಗವಹಿಸಿದ್ದರು.

ಗುರುಪುರ:

ಎಪ್ರಿಲ್ 7 ರಂದು ಗುರುಪುರ ಕೈಕಂಭದಲ್ಲಿ ಪಕ್ಷದ ಗುರುಪುರ ವಲಯ ರಾಜಕೀಯ ಸಮಾವೇಶ ನಡೆಯಿತು. ಈ ಸಮಾವೇಶವನ್ನು ಉದ್ಘಾಟಿಸಿ ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯ ಜೆ.ಬಾಲಕೃಷ್ಣ ಶೆಟ್ಟಿ, ದ.ಕ.ಜಿಲ್ಲಾ ಸೆಕ್ರೆಟಾರಿಯಟ್ ಸಮಿತಿ ಸದಸ್ಯ ಯು.ಬಿ.ಲೋಕಯ್ಯ, ಗುರುಪುರ ವಲಯ ಸಮಿತಿ ಕಾರ್ಯದರ್ಶಿ ಸದಾಶಿವ ದಾಸ್ ಮಾತನಾಡಿದರು. ಪಕ್ಷದ ಸದಸ್ಯರು, ಹಿತೈಷಿಗಳು ಭಾಗವಹಿಸಿದ್ದರು.

ಮೂಡಬಿದರೆ:

ಎಪ್ರಿಲ್ 8 ರಂದು ಮೂಡಬಿದರೆಯಲ್ಲಿ ನಡೆದ ಪಕ್ಷದ ರಾಜಕೀಯ ಸಮಾವೇಶದಲ್ಲಿ ಪಕ್ಷದ ಸದಸ್ಯರು ಹಿತೈಷಿಗಳಲ್ಲದೆ ಸಾರ್ವಜನಿಕರೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಸಮಾವೇಶದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಉಪಾಧ್ಯಕ್ಷರಾದ ಮಾರುತಿ ಮಾನ್ಪಡೆ, ಸಿಪಿಐ(ಎಂ) ದ.ಕ.ಜಿಲ್ಲಾ ಕಾರ್ಯದರ್ಶಿ ವಸಂತ ಆಚಾರಿ ಮಾತನಾಡಿದರು.

ಮಾರುತಿ ಮಾನ್ಪಡೆಯವರು ಮಾತನಾಡುತ್ತಾ, ದೇಶದಲ್ಲಿ ತಲೆ ಎತ್ತಿ ನಿಂತಿರುವ ಭಯೋತ್ಪಾದನೆ ಮತ್ತು ಕೋಮುವಾದಿ ಪಕ್ಷವನ್ನು ಎದುರಿಸಲು ರಾಹುಲ್ ಗಾಂಧಿಯಿಂದ ಸಾಧ್ಯವಿಲ್ಲ. ಅದು ಕಮ್ಯೂನಿಸ್ಟ್ ಪಕ್ಷದಿಂದ ಮಾತ್ರ ಸಾಧ್ಯ. ಅದಕ್ಕಾಗಿ ಸಿಪಿಐ(ಎಂ) ಕಾರ್ಯಕರ್ತರು ದುಡಿಯಬೇಕು.

ಹಿಂದುಗಳನ್ನು ಸಿಪಿಐ(ಎಂ) ವಿರೋಧಿಸುವುದಿಲ್ಲ. ಹಿಂದುತ್ವವನ್ನು ಮಾತ್ರ ವಿರೋಧಿಸುತ್ತೇವೆ. ಹಿಂದುತ್ವದ ಹೆಸರಿನಲ್ಲಿ ಬಿಜೆಪಿ ಹೆಣದ ಮೇಲೆ ರಾಜಕೀಯ ಮಾಡುತ್ತಿದೆ. ಸಂವಿಧಾನ ಉಳಿಯಬೇಕಾದರೆ ಬಿಜೆಪಿ ಸೋಲಲೇಬೇಕು ಎಂದು ಮಾರುತಿ ಮಾನ್ಪಡೆ ಕರೆ ನೀಡಿದರು.

ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯ ಯಾದವ ಶೆಟ್ಟಿ, ಸಿಪಿಐ(ಎಂ) ಮೂಡಬಿದ್ರಿ ವಲಯ ಕಾರ್ಯದರ್ಶಿ ರಮಣಿ ಮೂಡಬಿದ್ರಿ ಮತ್ತಿತರ ಮುಖಂಡರು ವೇದಿಕೆಯಲ್ಲಿದ್ದರು. ●

ವರದಿ: ವಾ.ಉ.



ಲೋಕಸಭೆ ಚುನಾವಣೆ–2019; ಕಾರ್ಮಿಕ ಸನ್ನದು ಬಿಡುಗಡೆ

1991ರಿಂದ ನವ ಉದಾರಿವಾದಿ ನೀತಿಗಳ ವಿರುದ್ಧ ನಡೆದಿರುವ ಜಂಟಿ ಹೋರಾಟಗಳ ಮುಂದುವರಿದ ಭಾಗವಾಗಿ ರಾಷ್ಟ್ರದ ಕಾರ್ಮಿಕರ ಬೇಡಿಕೆಗಳ ಸನ್ನದನ್ನು ಕೇಂದ್ರ ಕಾರ್ಮಿಕ ಸಂಘಟನೆಗಳು ಜಂಟಿಯಾಗಿ 12 ಎಪ್ರಿಲ್ 2019 ರಂದು ಮಂಗಳೂರಿನಲ್ಲಿ, ಸುನೀಲ್‌ಕುಮಾರ್ ಬಜಾಲ್ ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ, ಜೆ. ಬಾಲಕೃಷ್ಣ ಶೆಟ್ಟಿ ಸಿಐಟಿಯು ದ.ಕ. ಜಿಲಾಧ್ಯಕ್ಷರು, ಎಚ್.ವಿ. ರಾವ್ ಎಐಟಿಯುಸಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ, ಕರುಣಾಕರ್ ಎಐಟಿಯುಸಿ ಜಿಲ್ಲಾ ಕಾರ್ಯದರ್ಶಿ, ಸೀತಾರಾಮ್ ಬೆರಿಂಜ ಎಐಟಿಯುಸಿ ಜಿಲ್ಲಾ ಉಪಾಧ್ಯಕ್ಷರು, ಬೊಂಡಾಲ ಚಿತ್ತರಂಜನ್ ಶೆಟ್ಟಿ ಐಎನ್‌ಟಿಯುಸಿ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳು ಭಾಗವಹಿಸಿ ಬಿಡುಗಡೆ ಮಾಡಿದ್ದರು. ●

ಕಾರ್ಮಿಕ ವರ್ಗದ ಬದುಕನ್ನು ನಾಶಗೈದ ನರೇಂದ್ರ ಮೋದಿ ಸರಕಾರ ಮತ್ತೆ ಅಧಿಕಾರಕ್ಕೇರದಂತೆ ತಡೆಯಲು ಕಾರ್ಮಿಕ ವರ್ಗದ ಪಣ



ಕಳೆದ 5 ವರ್ಷಗಳ ಹಿಂದೆ ಅಧಿಕಾರಕ್ಕೇರಿದ ನರೇಂದ್ರ ಮೋದಿ ಸರಕಾರವು ಜನತೆಗೆ ನೀಡಿದಂತಹ ಘೋಷಣೆಗಳಾದ ಅಚ್ಛೇ ದಿನ್, ಸಬ್ಕಾ ಸಾಥ್ ಸಬ್ಕಾ ವಿಕಾಸ್, ಕಪ್ಪು ಹಣ ವಾಪಸ್ ಪ್ರತಿಯೊಬ್ಬರ ಖಾತೆಗೆ 15 ಲಕ್ಷ ಹಣ, ಬೆಲೆಯೇರಿಕೆ ನಿಯಂತ್ರಣ ಮುಂತಾದ ಬಣ್ಣ ಬಣ್ಣದ ಘೋಷಣೆಗಳೆಲ್ಲಾ ಇಂದು ಹಸಿ ಹಸಿ ಸುಳ್ಳುಗಳೆಂದು ಸಾಬೀತಾಗಿದೆ. ಒಳ್ಳೆಯ ದಿನಗಳು ಬಂದಿರುವುದು ಟಾಟಾ, ಬಿರ್ಲಾ, ಅಂಬಾನಿ, ಅಧಾನಿಗಳಿಗೆ ಹೊರತು ಈ ದೇಶದ ಜನಸಾಮಾನ್ಯರಿಗಲ್ಲ. ಜೀವನಾವಶ್ಯಕ ವಸ್ತುಗಳ ಬೆಲೆಗಳು ದಿನದಿಂದ ದಿನಕ್ಕೆ ಏರುತ್ತಿದೆ. ಕಾರ್ಮಿಕರ ಪರವಾದ ಕಾನೂನುಗಳನ್ನು ಮಾಲೀಕರ ಪರವಾಗಿ ತಿದ್ದುಪಡಿ ಮಾಡುವ ಮೂಲಕ ಕನಿಷ್ಠ ಕೂಲಿ, ಸಾಮಾಜಿಕ ಭದ್ರತೆ, ಪಿಂಚಣಿ ಮುಂತಾದ ಸವಲತ್ತುಗಳನ್ನು ಇನ್ನಿಲ್ಲವಾಗಿಸಲು ಪ್ರಯತ್ನಿಸುತ್ತಿದೆ. ಇಂತಹ ಕಾರ್ಮಿಕ ವಿರೋಧಿ ಸರಕಾರವನ್ನು ಮತ್ತೆ ಅಧಿಕಾರಕ್ಕೇರದಂತೆ ತಡೆಯಲು ಇಡೀ ದೇಶದ ಕಾರ್ಮಿಕ ವರ್ಗ ಒಂದಾಗಬೇಕೆಂದು ಎಂದು ಸಿಐಟಿಯು ರಾಜ್ಯ ಉಪಾಧ್ಯಕ್ಷರಾದ ವಸಂತ ಆಚಾರಿಯವರು ಕಾರ್ಮಿಕರಿಗೆ ಕರೆ ನೀಡಿದರು. ಅವರು ಬಂದರು ಪ್ರದೇಶದ ಮಹಿಳಾ ಹಮಾಲಿ ಕಾರ್ಮಿಕರ ಸಮಾವೇಶವನ್ನುದ್ದೇಶಿಸಿ ಮಾತನಾಡುತ್ತಿದ್ದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಸಿಐಟಿಯು ದ.ಕ.ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಮಾತನಾಡುತ್ತಾ, ಕಳೆದ 25 ವರ್ಷಗಳಿಂದ ದ.ಕ.ಜಿಲ್ಲೆಯಲ್ಲಿ ಗೆದ್ದು ಬಂದಂತಹ ಬಿಜೆಪಿ ಸಂಸದರು, ಅದರಲ್ಲೂ ಕಳೆದ 10 ವರ್ಷಗಳಿಂದ ಇರುವ ನಳೀನ್ ಕುಮಾರ್ ಕಟೀಲ್ ರವರು ಜಿಲ್ಲೆಯ ಅಭಿವೃದ್ಧಿಗೆ ಕಿಂಚಿತ್ತೂ ಗಮನ ನೀಡಲಿಲ್ಲ, ಬದಲಾಗಿ ಜಿಲ್ಲೆಯ ಶಾಂತಿ ನೆಮ್ಮದಿಗೆ ಭಂಗ ಮಾಡುತ್ತಾ ಜಿಲ್ಲೆಗೆ ಬೆಂಕಿ ಹಚ್ಚುವುದಾಗಿ ಬಹಿರಂಗ ಹೇಳಿಕೆ ನೀಡುವ ಮೂಲಕ ಜಿಲ್ಲೆಯ ಜನತೆ ತಲೆ ತಗ್ಗಿಸುವಂತೆ ಮಾಡಿದ್ದಾರೆ. ಯಾವುದೇ ಒಂದು ಗಮನ ಸೆಳೆಯುವಂತಹ, ಜಿಲ್ಲೆಯ ಯುವಜನರಿಗೆ ಉದ್ಯೋಗ ಸೃಷ್ಟಿಸುವಂತಹ ಒಂದೇ ಒಂದು ಯೋಜನೆಯನ್ನು ತರಲು ಅಸಾಧ್ಯವಾದ ನಾಲಾಯಕ್ ಸಂಸದರನ್ನು ಈ ಬಾರಿ ಮನೆಗೆ ಕಳುಹಿಸಲು ಕಾರ್ಮಿಕ ವರ್ಗ ತೀರ್ಮಾನಿಸಬೇಕಾಗಿದೆ ಹಾಗೂ ಜಾತ್ಯಾತೀತ ಶಕ್ತಿಗಳ ಗೆಲುವಿಗೆ ಶ್ರಮಿಸಬೇಕಾಗಿದೆ ಎಂದು ಹೇಳಿದರು.

ಸಭೆಯ ಅಧ್ಯಕ್ಷತೆಯನ್ನು ಬಂದರು ಹಮಾಲಿ ಕಾರ್ಮಿಕರ ಸಂಘದ ಅಧ್ಯಕ್ಷರಾದ ಅಹಮ್ಮದ್ ಭಾವರವರು ವಹಿಸಿದ್ದರು. ವೇದಿಕೆಯಲ್ಲಿ ಸಂಘದ ಮುಖಂಡರಾದ ಸುಲೋಚನಾ, ಕುಶಾಲಾಕ್ಷಿ, ಮುಕ್ತಾ, ಸುಶೀಲಾ, ಗಿರಿಜಾ ಮುಂತಾದವರು ಉಪಸ್ಥಿತರಿದ್ದರು. ●



ಅಸಂಘಟಿತ ಕಾರ್ಮಿಕರಿಗೆ ಹೆಚ್ಚಿನ ಸವಲತ್ತು–ಸುಳ್ಳು ಸುದ್ದಿ

ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರಕಾರವು ಅಸಂಘಟಿತ ಕಾರ್ಮಿಕರಿಗೆ ಹಲವಾರು ಸೌಲಭ್ಯ ನೀಡಿದೆ ಹಾಗೂ ಶೋಭಾ ಕರಂದ್ಲಾಜೆಯವರು ಅಸಂಘಟಿತ ಕಾರ್ಮಿಕರ ಕಲ್ಯಾಣಕ್ಕೆ ನಿರಂತರವಾಗಿ ಶ್ರಮಿಸಿದ್ದಾರೆ ಎಂದು ಬಿ.ಜೆ.ಪಿ. ಜಿಲ್ಲಾಧ್ಯಕ್ಷರು ನೀಡಿದ ಪತ್ರಿಕಾ ಹೇಳಿಕೆಯು ಸತ್ಯಕ್ಕೆ ದೂರವಾಗಿದೆ ಎಂದು ಸಿ.ಪಿ.ಐ.(ಎಂ.) ಜಿಲ್ಲಾ ಕಾರ್ಯದರ್ಶಿ ಹಾಗೂ ಸಿ.ಐ.ಟಿ.ಯು. ರಾಜ್ಯ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ ತಿಳಿಸಿದ್ದಾರೆ.

ಅಂಗನವಾಡಿ ನೌಕರರು ಸೇರಿದಂತೆ ವಿವಿಧ ಸರಕಾರಿ ಯೋಜನೆಗಳಲ್ಲಿ ಕೆಲಸ ಮಾಡುತ್ತಿರುವವರನ್ನು ಕಾರ್ಮಿಕರೆಂದು ಪರಿಗಣಿಸಲು ಪ್ರಧಾನಮಂತ್ರಿಗಳೇ ಭಾಗವಹಿಸಿದ್ದ ಭಾರತ ಕಾರ್ಮಿಕ ಸಮ್ಮೇಳನದಲ್ಲಿ ತೀರ್ಮಾನ ಆಗಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ. ದೇವೇಗೌಡರು ಪ್ರಧಾನಮಂತ್ರಿಯಾಗಿದ್ದ ಸಂದರ್ಭದಲ್ಲಿ ಎಡ ಪಕ್ಷಗಳ ಒತ್ತಾಯದಿಂದ ಕಟ್ಟಡ ಕಾರ್ಮಿಕ ಕಾನೂನು ಹಾಗೂ ಸೆಸ್ ಕಾನೂನು ಜಾರಿಗೆ ಬಂದು, ಪಿಂಚಣಿ,



ವಿದ್ಯಾರ್ಥಿ ವೇತನ, ಮದುವೆಗೆ ಸಹಾಯ, ಮರಣ ಪರಿಹಾರ, ಆಸ್ಪತ್ರೆ ಖರ್ಚು ಇತ್ಯಾದಿ ಸಿಗುತ್ತಿವೆ. ಮೋದಿಯವರ ಸರಕಾರ 9 ಕಾಯಿದೆಗಳನ್ನು ಸೇರಿಸಿ, ಒಂದೇ ಕಾನೂನು ಮಾಡುವ ಹೆಸರಿನಲ್ಲಿ ಕಟ್ಟಡ ಕಾರ್ಮಿಕರಿಗೆ ಸವಲತ್ತುಗಳು ಸಿಗದಂತೆ ಮಾಡುವ ಹುನ್ನಾರ ನಡೆಸಿದೆ.

ಉದ್ಯೋಗ ಖಾತ್ರಿ ಯೋಜನೆಯಡಿ ಅನುದಾನ ಕಡಿತಗೊಳಿಸಿ, ಗ್ರಾಮೀಣ ಪ್ರದೇಶದ ಮಹಿಳೆಯರಿಗೆ ಕೆಲಸ ಇಲ್ಲದಂತೆ ಮಾಡುತ್ತಿದೆ. ಬಿ.ಎಸ್.ಎನ್.ಎಲ್. ಗುತ್ತಿಗೆ ಕಾರ್ಮಿಕರಿಗೆ 6–7 ತಿಂಗಳಿನಿಂದ ವೇತನ ನೀಡಿಲ್ಲ. ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆಯ (ಐ.ಎಲ್.ಒ.) 204ನೇ ಶಿಫಾರಸ್ಸಿಗೆ ವಿರುದ್ಧವಾಗಿ ಕೆಲಸದ ಯಾವುದೇ ಭದ್ರತೆ ಇಲ್ಲದ "ನಿಗದಿತ ಕಾಲಾವಧಿ ಉದ್ಯೋಗ" (ಎಫ್.ಟಿ.ಇ.) ಕ್ಕೆ ಅವಕಾಶ ನೀಡಿದೆ. ಖಾಯಂ ಕೆಲಸಗಾರರ ಬದಲಿಗೆ ಗುತ್ತಿಗೆ ಕಾರ್ಮಿಕರನ್ನು ಹೆಚ್ಚಿಗೆ ಮಾಡಿದೆ. ಬೀಡಿ ಕಾರ್ಮಿಕರಿಗೆ ಪರ್ಯಾಯ ಉದ್ಯೋಗ ನೀಡದೆ ತಂಬಾಕು ನಿಷೇದ ಕಾಯಿದೆ ಜಾರಿಗೊಳಿಸಿರುವುದರಿಂದ ಲಕ್ಷಾಂತರ ಬೀಡಿ ಕಾರ್ಮಿಕರು ಉದ್ಯೋಗ ಹೀನರಾಗಿದ್ದಾರೆ.

ಚುನಾವಣೆ ದಿನಾಂಕ ನಿಗದಿಯಾಗಿರುವ ಕೆಲವೇ ದಿನಗಳ ಮೊದಲು ಘೋಷಿಸಿದ ಅಸಂಘಟಿತ ಕಾರ್ಮಿಕರ ಪಿಂಚಣಿ ಯೋಜನೆಯಿಂದ ಈಗ ದುಡಿಯುತ್ತಿರುವ ಯಾವುದೇ ಕಾರ್ಮಿಕರಿಗೆ ಲಾಭವಿಲ್ಲ. ಅದಕ್ಕೆ ಯಾವುದೇ ಕಾನೂನು ಬೆಂಬಲವಿಲ್ಲ. 40 ವರ್ಷ ದಾಟಿರುವ ಕಾರ್ಮಿಕರು ಸದಸ್ಯರಾಗಿ ನೋಂದಾವಣಿ ಮಾಡುವಂತಿಲ್ಲ. ಅದೊಂದು ಟೊಳ್ಳು ಘೋಷಣೆಯಾಗಿದೆ.

ಮೋದಿಯವರ ಸರಕಾರವು ಅಸಂಘಟಿತ ಕಾರ್ಮಿಕರ 'ಮರಣ ಶಾಸನ' ವನ್ನು ಬರೆಯುತ್ತಿದೆ ಎಂದರೆ ತಪ್ಪಾಗಲಾರದು. ಅಸಂಘಟಿತ ಕಾರ್ಮಿಕರಿಗೆ ಸಹಾಯ ಮಾಡುವುದರ ಬದಲಾಗಿ ದೊಡ್ಡ ಉದ್ದಿಮೆದಾರರಿಗೆ ಸಹಾಯ ಮಾಡುತ್ತಿದೆ ಎಂದು ಸಿ.ಪಿ.ಐ.(ಎಂ). ಆಪಾದಿಸಿದೆ.

ಇಂತಹ ಸರಕಾರವನ್ನು ಕಿತ್ತೊಗೆಯಲು ಉಡುಪಿ–ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದಲ್ಲಿ ಬಿ.ಜೆ.ಪಿ. ಅಭ್ಯರ್ಥಿ ಶೋಭಾ ಕರಂದ್ಲಾಜೆ ಅವರನ್ನು ಸೋಲಿಸಬೇಕು ಎಂದು ಸಿ.ಪಿ.ಐ.(ಎಂ.) ಉಡುಪಿ ಜಿಲ್ಲಾ ಸಮಿತಿ ಮತದಾರರಲ್ಲಿ ಮನವಿ ಮಾಡಿದೆ.

–ಬಾಲಕೃಷ್ಣ ಶೆಟ್ಟಿ

ಪ್ರಜಾಪ್ರಭುತ್ವ ಗಟ್ಟಿಗೊಳಿಸಲು ಎಡ ಯುವಜನರು ಮತ ಚಲಾಯಿಸಿ: ಎಸ್ಎಫ್ಐ

ಸ್ವಾತಂತ್ರ್ಯ ನಂತರ ನಡೆಯುತ್ತಿರುವ 17ನೇ ಮಹತ್ವದ ಲೋಕಸಭಾ ಚುನಾವಣೆ ಇದಾಗಿದ್ದು ಈ ಚುನಾವಣೆಯಲ್ಲಿ ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸಲು ವಿದ್ಯಾರ್ಥಿ–ಯುವಜನರು ಎಡ ಜಾತ್ಯಾತೀತ ಪಕ್ಷಗಳಿಗೆ ಮತ ಚಲಾಯಿಸಿ ಎಂದು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್ಎಫ್ಐ) ಉತ್ತರ ಕನ್ನಡ ಜಿಲ್ಲಾ ಸಮಿತಿಯು ವಿದ್ಯಾರ್ಥಿ ಯುವಜನತೆಗೆ ಕರೆ ನೀಡಿದೆ.

ಪ್ರಜಾಪ್ರಭುತ್ವದಲ್ಲಿ ಪ್ರಜೆಗಳೆ ಪ್ರಭುಗಳು ಹಾಗಾಗಿ ದೇಶದ ಸಂವಿಧಾನದ ಆಶಯಗಳನ್ನು ಈಡೇರಿಸುವ ಮತ್ತು ಸ್ವಾತಂತ್ರ್ಯ ಹೋರಾಟಗಾರರು ಕಂಡ ಕನಸಿನ ಭಾರತ ಕಟ್ಟುವ, ಪ್ರಜಾಸತ್ತಾತ್ಮಕ ಹಕ್ಕುಗಳ ರಕ್ಷಿಸುವ ಪಕ್ಷಗಳನ್ನು ಆಯ್ಕೆ ಮಾಡುವುದು ಅವಶ್ಯಕವಾಗಿದೆ. ವಿಜೃಂಭಿಸುತ್ತಿರುವ ಕೋಮುವಾದ, ಜಾತಿ ಜನಾಂಗೀಯ ಕಲಹ, ಭ್ರಷ್ಟಾಚಾರ, ಭಯೋತ್ಪಾದನೆ, ಸ್ತ್ರೀಯರು ಅಸಮಾನತೆ, ಲಿಂಗ ತಾರತಮ್ಯ, ಪೊಳ್ಳು ದೇಶಭಕ್ತಿಯ ಸೋಗಲಾಡಿತನ, ಮಿತಿಮೀರಿದ ನಿರುದ್ಯೋಗ ಸಮಸ್ಯೆ, ಆರ್ಥಿಕ ಬಿಕ್ಕಟ್ಟು, ಕೃಷಿ ಬಿಕ್ಕಟ್ಟು, ಸಾರ್ವಜನಿಕ ಉದ್ಯಮವನ್ನು ಖಾಸಗೀಕರಣ ಮಾಡುತ್ತಿರುವ ದಿವಾಳಿತನದ ಆರ್ಥಿಕ ನೀತಿ, ವರ್ಗ ಅಂತರ ಹೆಚ್ಚಸುತ್ತಿರುವ ಬಂಡವಾಳಶಾಹಿ ಮುಕ್ತ ಮಾರುಕಟ್ಟೆ ನೀತಿ, ಇವುಗಳನ್ನು ತೊಡೆದು ಹಾಕಿ ಹೊಸ ಭರವಸೆಯ ಬೆಳಕು ಚೆಲ್ಲುವ ಜನಪರ ಆರ್ಥಿಕ ನೀತಿ ಜಾರಿಗೆ ತರುವ ಸರ್ಕಾರವನ್ನು ರಚಿಸುವಂತಹ ಪಕ್ಷಗಳನ್ನು ಆಯ್ಕೆ ಮಾಡಬೇಕು ಎಂದು ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್ಎಫ್ಐ) ಸಂಘಟನೆ ವಿದ್ಯಾರ್ಥಿ–ಯುವಜನರಿಗೆ ಕರೆ ನೀಡುತ್ತದೆ.

ಉತ್ತರ ಕನ್ನಡ ಜಿಲ್ಲೆಯ ಕೆನರಾ ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಪ್ರಜಾಪ್ರಭುತ್ವದ ಮೂಲ ಸ್ತಂಭ ಸಂವಿಧಾನವನ್ನೇ ಬದಲಾಯಿಸುವ ಹೇಳಿಕೆ ನೀಡಿದವರು ಈ ಕ್ಷೇತ್ರದ ಪ್ರಮುಖ ಅಭ್ಯರ್ಥಿಯಾಗಿದ್ದು ಅವರಿಗೆ ತಕ್ಕ ಉತ್ತರ ನೀಡುವ ಕಾಲ ಬಂದಿದೆ.

ಸಂವಿಧಾನ ದೇಶದ ಎಲ್ಲಾ ಜನತೆಗೆ ಸಮಾನ ಅವಕಾಶ ಸಮಾನ ಹಕ್ಕುಗಳನ್ನು ಸಮಾಜಿಕ ನ್ಯಾಯವನ್ನು ಒದಗಿಸುವ ಆಶಯ ಹೊಂದಿದೆ. ಆದರೆ ಅದನ್ನು ಜಾರಿ ಮಾಡದೆ ಅದನ್ನು ಬದಲಾಸುತ್ತೇವೆ ಬದಲಾಸಲಿಕ್ಕಾಗಿಯೇ ತಾವು ಬಂದಿರುವುದು ಎಂದು ಹೇಳಿಕೆ ನೀಡಿದವರು ಈಗ ಚುನಾವಣೆ ಬರುತ್ತಿದ್ದಂತೆ ಸಂವಿಧಾನ ಬದಲಾಯಿಸುವುದು ತುಂಬಾ ಕಷ್ಟ ಎಂದು ಹೇಳಿಕೆ ನೀಡುತ್ತಿದ್ದಾರೆ. ಇದು ಚುನಾವಣೆಯ ಗಿಮಿಕ್ ಆಗಿದ್ದು ಯುವಜನತೆ ಇದನ್ನು ಅರ್ಥ ಮಾಡಿಕೊಳ್ಳಬೇಕು ಮತ್ತು ಸಂವಿಧಾನ ವಿರೋಧಿಗಳಿಗೆ ತಕ್ಕ ಉತ್ತರ ನೀಡಬೇಕು.

ಉಚಿತ ಶಿಕ್ಷಣದ ಕನಸು ನನಸಾಗಿಲ್ಲ, ಶಿಕ್ಷಣ ಕ್ಷೇತ್ರಕ್ಕೆ ನೀಡುತ್ತಿದ್ದ ಅನುದಾನದಲ್ಲಿ ಕಡಿತ ಮಾಡಲಾಗಿದೆ. ಉನ್ನತ ಶಿಕ್ಷಣ ಹಣ ಇದ್ದವರ ಸ್ವತ್ತಾಗಿದೆ. ಇರುವ ಯುಜಿಸಿಯನ್ನು ರದ್ದು ಮಾಡಿ. ಅದನ್ನು ರಾಜಕೀಯಕರಣಗೊಳ್ಳಿಸಲಾಗುತ್ತಿದೆ. ವಿಪರಿತ ಖಾಸಗಿ ಶಿಕ್ಷಣ ಸಂಸ್ಥೆಗಳು ಮತ್ತು ವಿದೇಶಿ ವಿಶ್ವವಿದ್ಯಾಲಯಗಳು ಸ್ಥಾಪನೆಯಿಂದ ಶಿಕ್ಷಣ ಅದರಲ್ಲೂ ಉನ್ನತ ಶಿಕ್ಷಣ ಕ್ಷೇತ್ರವು ಮಾರಾಟದ ವಸ್ತು ಆಗಿದೆ. ಇರುವ ಸರ್ಕಾರಿ ವಿಶ್ವವಿದ್ಯಾಲಯಗಳಿಗೆ ಮೂಲಭೂತ ಸೌಕರ್ಯಗಳು ಇಲ್ಲ. ಅಭಿವೃದ್ಧಿ ಬಗ್ಗೆ ಮಾತಾಡುವವರಿಗೆ ಯಾವುದು ಅಭಿವೃದ್ಧಿ ಎಂಬ ಸ್ಪಷ್ಟ ಪರಿಕಲ್ಪನೆ ಇಲ್ಲವಾಗಿದೆ. ಹಿಂದೆ ನೀಡಿದ್ದ ಯಾವ ಭರವಸೆಯನ್ನು ಹಿಂದಿನ ಸರ್ಕಾರ ಈಡೇರಿಸಿಲ್ಲ.

ಸರ್ಕಾರವನ್ನು ಪ್ರಶ್ನಿಸಿದರೆ ದೇಶದ್ರೋಹಿ ಎಂಬ ಪಟ್ಟ ಕಟ್ಟುತ್ತಾರೆ. ಇದನ್ನು ಇಂದಿನ ಯುವಜನತೆ ಯೋಚಿಸಬೇಕಿದೆ.

ಮೊಬೈಲ್ ನಲ್ಲಿ ಪಬ್ ಜಿ ಆಡುವುದೇ ಯುದ್ಧ ಅಲ್ಲ. ಇದನ್ನು ಇವತ್ತಿನ ಯುವಜನತೆ ಅರ್ಥ ಮಾಡಿಕೊಳ್ಳಬೇಕು. ಯುದ್ಧ ಎಂದರೆ ಹಾನಿ ನಾಶ ಎಂಬುದು ಗಡಿಯಲ್ಲಿ ಇದ್ದವರಿಗೆ ಮಾತ್ರ ಗೊತ್ತು. ಹಾಗಾಗಿ ಯುದ್ಧದ ಬಗ್ಗೆ ಮಾತನಾಡುವಾಗಲು ವಿದ್ಯಾರ್ಥಿ ಯುವಜನತೆ ಎಚ್ಚರಿಕೆ ವಹಿಸಬೇಕು.

ಭಾರತ ಕೃಷಿ ಪ್ರಧಾನ ರಾಷ್ಟ್ರವಾಗಿದೆ ಹಾಗಾಗಿ ಕೃಷಿಯೋಗ್ಯ ಆರ್ಥಿಕ ನೀತಿ ತರಬೇಕು ಸ್ವಾಮಿನಾಥನ್ ವರದಿ ಜಾರಿ ಮಾಡಬೇಕು. ವಿದ್ಯಾರ್ಥಿಗಳಿಗೆ ಉಚಿತ & ಉನ್ನತ ಶಿಕ್ಷಣ ನೀಡಲು ಕೋಠಾರಿ ಆಯೋಗದ ಶಿಫಾರಸ್ಸುನ್ನು ಜಾರಿಗೆ ತರಬೇಕು. ಪ್ರಜಾಸತ್ತಾತ್ಮಕ ಹಕ್ಕುಗಳ ರಕ್ಷಿಸಲು ಸಂವಿಧಾನವನ್ನು ಎತ್ತಿ ಹಿಡಿಯಬೇಕು. ಖಾಸಗಿ ರಂಗದಲ್ಲೂ ಮಿಸಲಾತಿ ನೀಡಬೇಕು. ಕುಡಿಯುವ ನೀರಿನ ಸಮಸ್ಯೆಗಳನ್ನು ಬಗೆಹರಿಸಬೇಕು ಮಹಿಳೆಯರಿಗೆ ಎಲ್ಲಾ ಕ್ಷೇತ್ರದಲ್ಲಿ ಸಮಾನ ಹಕ್ಕುಗಳ ಮೀಸಲಾತಿಯನ್ನು ನೀಡಬೇಕು. ಮೂಲಭೂತ ಸೌಕರ್ಯಗಳನ್ನು ಒದಗಿಸುವ ಕಾರ್ಯ ತೀರಾ ಅಗತ್ಯವಿದೆ. ಪ್ರಾದೇಶಿಕ ಅಸಮಾನತೆ ಹೋಗಲಾಡಿಸಬೇಕು.

ಒಟ್ಟಾರೆ ಸಂವಿಧಾನ ವಿರೋಧಿಗಳಿಗೆ ಮತ ನೀಡದೆ ವಿದ್ಯಾರ್ಥಿ–ಯುವಜನ–ರೈತ–ಕಾರ್ಮಿಕ–ಮಹಿಳೆಯರ ಪ್ರಜಾಸತ್ತಾತ್ಮಕ ಹಕ್ಕುಗಳ ರಕ್ಷಣೆ ಮಾಡುವಂತಹ ಎಡ, ಜಾತ್ಯಾತೀತ ಪಕ್ಷಗಳಿಗೆ ತಮ್ಮ ಅಮೂಲ್ಯವಾದ ಮತವನ್ನು ನೀಡಬೇಕು ಎಂದು ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್ಎಫ್ಐ) ಸಂಘಟನೆ ಕರೆ ನೀಡಿದೆ. ●

ಬಿಜೆಪಿ ಸೋಲಿಸಲು ಡಿವೈಎಫ್ಐ ಕರೆ

ನರೇಂದ್ರ ಮೋದಿ ಸರಕಾರದ ಐದು ವರ್ಷಗಳ ಆಡಳಿತ ದೇಶವನ್ನು ಎಲ್ಲಾ ರಂಗಗಳಲ್ಲಿಯೂ ಹಿಂದಕ್ಕೆ ತಳ್ಳಿದೆ. ಕಾರ್ಪೊರೇಟ್ ಕಂಪನಿಗಳ ಪರವಾದ ಆರ್ಥಿಕತೆಯೊಂದಿಗೆ ಮತೀಯ ದ್ವೇಷದ ಕೋಮುವಾದಿ ಅಜೆಂಡಾವನ್ನು ಜೋಡಿಸಿ ನಡೆಸಿದ ಆಡಳಿತದಿಂದ ದೇಶದ ಭವಿಷ್ಯವೇ ಅಪಾಯಕ್ಕೆ ಸಿಲುಕಿದೆ. ರೈತರು, ಕಾರ್ಮಿಕರ ಬದುಕು ಶೋಚನೀಯವಾಗಿದ್ದರೆ, ನಿರುದ್ಯೋಗದ ಪ್ರಮಾಣ ನಾಲಕ್ಕು ದಶಕದಲ್ಲೇ ಅತ್ಯಂತ ಹೆಚ್ಚಾಗಿದೆ. ವರ್ಷಕ್ಕೆ ಎರಡು ಕೋಟಿ ಉದ್ಯೋಗ ಸೃಷ್ಟಿಯ ಭರವಸೆಯನ್ನು ನಂಬಿ ಕಳೆದ ಚುನಾವಣೆಯಲ್ಲಿ ನರೇಂದ್ರ ಮೋದಿಯವರನ್ನು ಬೆಂಬಲಿಸಿದ್ದ ದೇಶದ ಯುವಜನತೆ ಇಂದು ಇರುವ ಉದ್ಯೋಗಗಳನ್ನು ಕಳೆದುಕೊಂಡು ಬೀದಿಗೆ ಬಂದಿದ್ದಾರೆ. ಅಂತಹ ಹತಾಶ ಯುವಜನರನ್ನು ಧರ್ಮ, ದೇಶಭಕ್ತಿಯ ಹುಸಿ ಉನ್ಮಾದದಲ್ಲಿ ಕೆಡವಿ ಬಿಜೆಪಿ ಮತ್ತೊಮ್ಮೆ ಚುನಾವಣೆಯಲ್ಲಿ ಗೆಲುವು ಸಾಧಿಸಲು ಹೊರಟಿದೆ. ಯುವಜನತೆ ಯಾವ ಕಾರಣಕ್ಕೂ ಇಂತಹ ದಿಕ್ಕು ತಪ್ಪಿಸುವ ಸುಳ್ಳಿನ ಪ್ರಚಾರಗಳಿಗೆ ಬಲಿ ಬೀಳದೆ ಈ ಬಾರಿಯ ಚುನಾವಣೆಯಲ್ಲಿ ನಿರುದ್ಯೋಗದ ವಿರುದ್ಧ ಮತ ಚಲಾಯಿಸಬೇಕು, ಆ ಮೂಲಕ ಯುವಜನ ವಿರೋಧಿ ಬಿಜೆಪಿಯನ್ನು ಸೋಲಿಸಬೇಕು ಎಂದು ಡಿವೈಎಫ್ಐ ದಕ್ಷಿಣ ಕನ್ನಡ ಜಿಲ್ಲಾ ಸಮಿತಿ ಯುವಜನರಲ್ಲಿ ವಿನಂತಿಸುತ್ತದೆ.

ನರೇಂದ್ರ ಮೋದಿ ಸರಕಾರ ಹೊಸ ಉದ್ಯೋಗ ಸೃಷ್ಟಿಸುವ ಬದಲಿಗೆ ಇರುವ ಉದ್ಯೋಗಗಳನ್ನೇ ಕಡಿತಗೊಳಿಸುತ್ತಿದೆ. ಕೇಂದ್ರ ಸರಕಾರದ ವಿವಿಧ ಇಲಾಖೆಗಳ ಅಡಿಯಲ್ಲಿ ಲಕ್ಷಾಂತರ ಉದ್ಯೋಗಗಳು ಖಾಲಿ ಬಿದ್ದಿದ್ದು ಇವುಗಳನ್ನು ಭರ್ತಿ ಮಾಡದೆ ಉದ್ಯೋಗಾಕಾಂಕ್ಷಿ ಯುವಜನರಿಗೆ ನೇರವಾಗಿ ಅನ್ಯಾಯವೆಸಗಲಾಗಿದೆ. ಟೆಲಿಕಾಂ, ಬ್ಯಾಂಕಿಂಗ್ ಸೇರಿದಂತೆ ಸಾರ್ವಜನಿಕ ರಂಗದ ಉದ್ಯಮಗಳಲ್ಲಿ ಹುದ್ದೆಗಳ ಸಂಖ್ಯೆಯನ್ನು ಗಣನೀಯ ಸಂಖ್ಯೆಯಲ್ಲಿ ಕಡಿತಗೊಳಿಸಲಾಗುತ್ತಿದೆ. ಲಾಭದಾಯಕ ಸಾರ್ವಜನಿಕ ರಂಗದ ಉದ್ಯಮಗಳನ್ನು ದುರ್ಬಲಗೊಳಿಸಲಾಗುತ್ತಿದೆ. ಕಾರ್ಮಿಕ ನೀತಿಗಳನ್ನು ಕಾರ್ಪೊರೇಟ್ ಕಂಪೆನಿಗಳಿಗೆ ಪೂರಕವಾಗಿ ಬದಲಾಯಿಸಲಾಗುತ್ತಿದೆ. ಇದರಿಂದ ಇರುವ ಉದ್ಯೋಗಗಳೂ ಅರೆ ಕಾಲಿಕ, ಗುತ್ತಿಗೆ, ಹೊರ ಗುತ್ತಿಗೆ ಹೆಸರಿನ ಅರೆ ಉದ್ಯೋಗಗಳಾಗಿ ಮಾರ್ಪಟ್ಟಿವೆ. ಈ ರೀತಿಯ ನೀತಿಗಳಿಂದ ಬಹುದೊಡ್ಡ ಸಂಖ್ಯೆಯ ಯುವಜನರು ಉದ್ಯೋಗ ವಂಚಿತರಾಗಿ ಭವಿಷ್ಯದ ಬಗ್ಗೆ ಆತಂಕಿತರಾಗಿದ್ದಾರೆ. ನೂರು ಖಾಲಿ ಇರುವ ಡಿ ಗ್ರೂಪ್, ಗುಮಾಸ್ತ ಹುದ್ದೆಗಳಿಗೆ ನೇಮಕಾತಿಗೆ ಅರ್ಜಿ ಆಹ್ವಾನಿಸಿದರೆ ಉನ್ನತ ಶಿಕ್ಷಣ ಪಡೆದವರೂ ಸೇರಿ ಲಕ್ಷಾಂತರ ಯುವಜನತೆ ಅರ್ಜಿ ಸಲ್ಲಿಸುವ ಪ್ರಸಂಗಗಳು ನಡೆಯುತ್ತಿದ್ದು ಇದು ನಿರುದ್ಯೋಗದ ಕರಾಳತೆಯನ್ನು, ಮೋದಿ ಸರಕಾರದ ವೈಫಲ್ಯವನ್ನು ಎತ್ತಿ ತೋರಿಸುತ್ತದೆ.

ದಕ್ಷಿಣ ಕನ್ನಡದ ಪರಿಸ್ಥಿತಿಯೂ ಇದಕ್ಕೆ ಹೊರತಾಗಿಲ್ಲ. ಕೊಲ್ಲಿ ರಾಷ್ಟ್ರಗಳಲ್ಲಿ ಉದ್ಯೋಗವಕಾಶದ ಕೊರತೆ, ಆರ್ಥಿಕ ಹಿಂಜರಿತಗಳಿಂದ ಜಿಲ್ಲೆಯಲ್ಲಿಯೂ ನಿರುದ್ಯೋಗದ ಸಮಸ್ಯೆ ವ್ಯಾಪಕವಾಗಿದೆ. ಸಂಸದ ನಳಿನ್‌ಕುಮಾರ್ ಕಟೀಲ್ ಸ್ಥಳೀಯವಾಗಿ ಉದ್ಯೋಗ ಸೃಷ್ಟಿಸುವ ಉದ್ಯಮಗಳನ್ನು, ಕೈಗಾರಿಕೆಗಳನ್ನು ಸ್ಥಾಪಿಸುವ ಕನಿಷ್ಟ ಪ್ರಯತ್ನವನ್ನೂ ಮಾಡಿಲ್ಲ. ಉದ್ಯೋಗವನ್ನೇ ಸೃಷ್ಟಿಸದ, ಪರಿಸರಕ್ಕೆ ಮಾರಕವಾದ ಎಮ್ಆರ್‌ಪಿಎಲ್ ವಿಸ್ತರಣೆಗಷ್ಟೇ ಗಮನ ನೀಡಿದ್ದಾರೆ. ಎಸ್‌ಇಜಡ್ ಗೆ ಭೂಮಿ ನೀಡಿದ ಕುಟುಂಬಗಳ ಅರ್ಹರಲ್ಲಿ ಹೆಚ್ಚಿನವರಿಗೆ ಈವರೆಗೂ ನೇಮಕಾತಿ ನಡೆಯದೆ ಅವರ ಬದುಕೂ ಅತಂತ್ರವಾಗಿದೆ. ಮೀನುಗಾರಿಕೆ, ಪ್ರವಾಸೋದ್ಯಮ ಮುಂತಾದ ಸಾಂಪ್ರದಾಯಿಕ ಕ್ಷೇತ್ರಗಳಲ್ಲಿಯೂ ಉದ್ಯೋಗ ಸೃಷ್ಟಿಸುವ ಅಪಾರ ಅವಕಾಶಗಳಿದ್ದರೂ ಸಂಸದ ನಳಿನ್‌ಕುಮಾರ್ ಕಟೀಲ್ ನಿರಾಸಕ್ತಿ, ದೂರದೃಷ್ಟಿಯ ಕೊರತೆಯಿಂದ ಜಿಲ್ಲೆ ಉದ್ಯೋಗ ಸೃಷ್ಟಿಯಲ್ಲಿ ಹಿನ್ನಡೆ ಸಾಧಿಸಿದೆ. ಯುವಜನರು ಉದ್ಯೋಗ ಅವಕಾಶಗಳಿಲ್ಲದೆ ಪರದಾಡುತ್ತಿದ್ದಾರೆ. ಇಂತಹ ಅಸಹಾಯಕ ಯುವಕರನ್ನು ಮತೀಯ ಭಾವನೆಯನ್ನು ಕೆರಳಿಸಿ ದಾರಿ ತಪ್ಪಿಸಿದ್ದೇ ನಳಿನ್ ಕುಮಾರ್ ಕಟೀಲರ ಸಾಧನೆ.

ಈ ಎಲ್ಲಾ ವೈಫಲ್ಯ, ಯುವಜನ ವಿರೋಧಿ ಆಡಳಿತವನ್ನು ಸೋಲಿಸುವುದು, ಉದ್ಯೋಗ ಸೃಷ್ಟಿಯ ಒತ್ತಡವನ್ನು ಮುಂದಿನ ಸರಕಾರದ ಆದ್ಯತೆಯಾಗುವಂತೆ ನೋಡಿಕೊಳ್ಳುವುದು ಯುವಜನರ ರಾಜಕೀಯ ಕರ್ತವ್ಯವಾಗಿದೆ. ಆ ಹಿನ್ನಲೆಯಲ್ಲಿ ದಕ್ಷಿಣ ಕನ್ನಡ ಕ್ಷೇತ್ರದ ಮತದಾರರು, ಪ್ರಧಾನವಾಗಿ ಯುವಜನರು ಬಿಜೆಪಿಯ ಅಭ್ಯರ್ಥಿ ನಳಿನ್ ಕುಮಾರ್ ಕಟೀಲ್ ರನ್ನು ಸೋಲಿಸಬೇಕು ಎಂದು ಡಿವೈಎಫ್ಐ ಮನವಿ ಮಾಡುತ್ತದೆ. ಅದೇ ಸಂದರ್ಭದಲ್ಲಿ ಬಿಜೆಪಿ ವಿರೋಧಿ ಮತಗಳು ವಿಭಜನೆಯಾಗದಂತೆ ಎಚ್ಚರ ವಹಿಸಬೇಕು. ಬಿಜೆಪಿಗೆ ಈಗ ಪ್ರಬಲ ಸ್ಪರ್ಧೆ ಒಡ್ಡಿರುವ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಮಿಥುನ್ ರೈ ಅವರನ್ನು ಬೆಂಬಲಿಸಬೇಕು ಎಂದು ಯುವಜನರಲ್ಲಿ ವಿನಂತಿಸುತ್ತದೆ.

ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದವರು.

ಬಿ.ಕೆ ಇಮ್ತಿಯಾಜ್ ಡಿವೈಎಫ್ಐ ಜಿಲ್ಲಾದ್ಯಕ್ಷರು, ಸಂತೋಷ್ ಬಜಾಲ್ ಡಿವೈಎಫ್ಐ ಜಿಲ್ಲಾ ಕಾರ್ಯದರ್ಶಿ, ನಿತಿನ್ ಕುತ್ತಾರ್ ಜೊತೆ ಕಾರ್ಯದರ್ಶಿ, ಮನೋಜ್ ವಾಮಂಜೂರು ಕೋಶಾಧಿಕಾರಿ, ನವೀನ್ ಕೊಂಚಾಡಿ ಜಿಲ್ಲಾ ಉಪಾದ್ಯಕ್ಷರು, ರಫೀಕ್ ಹರೇಕಳ, ಸಾಧಿಕ್ ಕಣ್ಣೂರು. ●

ಅತಿಥಿ ಅಂಕಣ



ಡಾ. ವಿನಯ ಒಕ್ಕುಂದ

ಈ ಪುಟ್ಟ ಹಳ್ಳಿಯ ಜನರು, ಯಾರನ್ನು ನಂಬಿದ್ದರೋ ಆರಾಧಿಸುತ್ತಿದ್ದಾರೋ ಅವರ ಬಗ್ಗೆ– ಅವರೇನು ಮಾಡಿದರು ಹೇಳಿ?– ಅಂತ ಪ್ರಶ್ನಿಸಿದರೆ, ಇದೆಲ್ಲ ಕೇಳಬೇಕಾದ ಪ್ರಶ್ನೆಯೇ ಅಲ್ಲ ಎಂದು ಗಾಬರಿಯಾದರಂತೆ. ನಾನು ವಿದ್ಯಾರ್ಥಿಗಳಿಗಂದೆ – ಇನ್ನೂ 3 ದಿನ ಇರ್ಬೇಕು. ಬಹಳ ಕೆದಕಬೇಡಿರೋ ಎಂದು. ಆದರೆ ಕೆಲವರಾದರೂ ಬಿಲ ತೋಡುವ ಉಗುರು ಬೆಳೆಸಿಕೊಂಡವರ ಹಾಗೆ ಖುಷಿಯಾಗಿದ್ದರು. ಈ ಜನರಿಗೆ, ದೇಶದ ಕೆಲವರಾದರೂ ತಾವು ಆರಾಧಿಸುವವರನ್ನು ವಿರೋಧಿಸುತ್ತಾರೆ ಮತ್ತು ವಿರೋಧಕ್ಕೆ ಕಾರಣಗಳು ಹೀಗಿವೆ – ಎಂದು ತಿಳಿಸಬೇಕಾದ ವಿದ್ಯುನ್ಮಾನ ಮಾಧ್ಯಮಗಳ ಮೌನದ ರಾಜಕಾರಣ ತಿಳಿಯುವಂತಿರಲಿಲ್ಲ. ದೇಶದ ಕಲಾವಿದರು, ಬರಹಗಾರರು, ಸಿನಿಮಾ ನಿರ್ದೇಶಕರು, ವಿಜ್ಞಾನಿಗಳು ಯಾಕಾಗಿ ಗಾಬರಿಯಾಗಿದ್ದಾರೆಂಬುದನ್ನು ಮಾಧ್ಯಮಗಳು ತಿಳಿಸಬೇಕಿತ್ತು. ಮಾಧ್ಯಮದ ಹಂಗಿಲ್ಲದೆ ಜನರಿಗೆ ಕೆಲ ಸತ್ಯವನ್ನು ತಿಳಿಸುವುದು ಹೇಗೆ?

ಮಾಧ್ಯಮಗಳ ಮಾತು ಮತ್ತು ಮೌನ

ಕಳೆದ ವಾರ ದಾಂಡೇಲಿಯ ಸಮೀಪದ ಪುಟ್ಟ ಊರೊಂದರಲ್ಲಿ ಎನ್.ಎಸ್.ಎಸ್. ಕ್ಯಾಂಪಿನ ಮಕ್ಕಳೊಂದಿಗೆ ದಿನ ಕಳೆಯುವ ಸಂದರ್ಭ ಒದಗಿತ್ತು. ದಾಂಡೇಲಿಯಿಂದ ಹತ್ತು ಹನ್ನೆರಡು ಮೈಲಿ ದೂರದ ಊರು, ಕಾಡು ಕಂಡಿದ್ದೇವೆ ಬಿಡು– ಎಂಬ ನಮ್ಮ ಹೆಮ್ಮೆಯನ್ನು ಮುರಿದಿಟ್ಟಿತ್ತು. ಅಲ್ಲಿದ್ದದ್ದು 40–50 ಮನೆಗಳು. ಒಂದು 200 ಜನಸಂಖ್ಯೆ ಮತ್ತೆ ಮುಂದೆ 4–5 ಮೈಲು ದಾಟಿದರೆ ಅಂತಹದೇ ಇನ್ನೊಂದು ಊರು. ಇನ್ನೂ ಚಿಕ್ಕದು. ಅಲ್ಲಿಗೆ (ಆ ದಿಕ್ಕಿನ) ಜನವಸತಿ ಮುಕ್ತಾಯ. ಊರ ಕೋಳಿಗಳನ್ನೂ ಓಡಾಡೋ ಜಿಂಕೆ, ನರಿಗಳನ್ನೂ ಒಟ್ಟಿಗೇ ಗಣತಿ ಮಾಡಬಹುದು. ಅಂತಹ ಊರಿಗೆ ಕ್ಯಾಂಪಿನ 60 ಮಕ್ಕಳನ್ನು, ಬಂದು ಹೋಗುವ 20–30 ಮಕ್ಕಳನ್ನು ಕಟ್ಟಿಕೊಂಡು ಹೋಗಿ ರಾಷ್ಟ್ರೀಯ ಸೇವಾ ಯೋಜನೆಯ ಧ್ವಜ ಏರಿಸಿ ನಿಂತಾಗಿತ್ತು. ಮೊಬೈಲ್ ನೆಟ್‌ವರ್ಕ್ ಇಲ್ಲದ ಊರಿಗೆ ಸೇರಿ ನಮ್ಮ ಮಕ್ಕಳು ಬೇಸ್ತು ಬಿದ್ದಿದ್ದರು. ಇಂತಹ ಊರಿಗೆ ನಮ್ಮ ಕಾಲೇಜಿನ ಎನ್.ಎಸ್.ಎಸ್. ಘಟಕ ನುಗ್ಗಲು ಕಾರಣವಾಗಿದ್ದು, ಆ ಊರಿನ ಇಬ್ಬರು ವಿದ್ಯಾರ್ಥಿಗಳು ಕಾಲೇಜಿನಲ್ಲಿ ಅಂತಿಮ ವರ್ಷ ಕಲಿಯುತ್ತಿದ್ದರು. ಆ ಊರಿನ ಕಿರಿಯ ಪ್ರಾಥಮಿಕ ಶಾಲೆಯ ಮುಖ್ಯಗುರುಗಳು, ತಮ್ಮ ಮನೆಗೆ ಬಂಧುಗಳನ್ನು ಆಹ್ವಾನಿಸುವವರಂತೆ – ಶಾಲೆಯಲ್ಲಿ ಕ್ಯಾಂಪ್ ವಸತಿ ಮಾಡಿ ಎಲ್ಲ ಬಗೆಯ ಸಹಕಾರಕ್ಕೂ ಸಿದ್ಧರಿದ್ದೇವೆ ಎಂದು ಆಹ್ವಾನಿಸಿದ್ದರು. ಈ ಎಲ್ಲದರ ಸರಿಬೆರಕೆಯಿಂದಾಗಿ ಕ್ಯಾಂಪ್ ಯಶಸ್ವಿಯಾಯಿತು. ಮಕ್ಕಳು ಹೊಸ ಲೋಕ ಕಂಡು ಬಂದವರಂತಿದ್ದರು.

ಊರ ಒಂದು ತುದಿಯಲ್ಲೀಗ ಅತ್ಯಾಧುನಿಕ ರೆಸಾರ್ಟ್ ತಲೆಯೆತ್ತಿದೆ. ಆ 'ಪುಣ್ಯ'ದಿಂದಲೇ ಊರು ಗೋಲ ಗೋಲ ಸುತ್ತಿ ಇಳಿಯುವ ಮಾರಗಲ ಡಾಂಬರು ರಸ್ತೆಯನ್ನು ಕಾಣುತ್ತಿದೆ. ಈ ರಸ್ತೆ ಕಾಮಗಾರಿ ಜನರ ಪ್ರಕಾರ – ವಿಧಾನಸಭೆ ಚುನಾವಣೆ ಕಾಲದಿಂದ ನಡೆದೇ ಇದೆ. ಲೋಕಸಭೆ ಚುನಾವಣೆಯೊಂದಿಗೆ ಮುಕ್ತಾಯವಾಗಬಹುದೆಂದು ಸದಾಶಯವಿದೆ. ಊರ ಜನರು ಅರೆಬರೆ ಕನ್ನಡ ಮತ್ತು ವಿಶಿಷ್ಟ ಮರಾಠಿ ಮಾತನಾಡುವ ಗೌಳಿಗರು. ಮನೆಯ ಜನರಿಗಿಂತ ಕೊಟ್ಟಿಗೆಯ ದನಕರ ಹೆಚ್ಚಿರುವವರು. ಮಗ್ಗುಲಿಗೇ ಹರಿಯುತ್ತಿರುವ ಕಾಳಿನದಿಯ ನೀರಿನಿಂದ ಫಸಲು ಚಿಂತೆಯಿಲ್ಲದ ಬೇಸಾಯಗಾರರು. ಕಾಳಿನದಿ ನೀರು ಕಲುಷಿತಗೊಂಡು (ಪೇಪರ್ ಮಿಲ್ ತ್ಯಾಜ್ಯದಿಂದ) ಹರಿಯುತ್ತಿರುವುದರಿಂದ ಕುಡಿವ ನೀರಿಗೂ, ಮನೆ ಬಳಕೆಯ ನೀರಿಗೂ ಒದ್ದಾಡುತ್ತಿರುವವರು. ಇಂತಹ ಜನರೊಂದಿಗೆ ನಮ್ಮ ವಿದ್ಯಾರ್ಥಿಗಳು ಹೊಕ್ಕು ಬಳಕೆ ಮಾಡಿಕೊಂಡು, ಮಾಹಿತಿ ಕಲೆಹಾಕುತ್ತಿದ್ದರು. ನಾವು ಮುಂಜಾನೆ 5 ರಿಂದ ರಾತ್ರಿಯವರೆಗೂ ವಿದ್ಯಾರ್ಥಿಗಳನ್ನು ಎಂಗೇಜ್ ಇಡಬೇಕಿತ್ತು. ಅವರಲ್ಲಿ ಸಂಶೋಧನಾತ್ಮಕ ಪ್ರವೃತ್ತಿ ಬೆಳೆಸಲೂ ಇದೊಂದು ಅವಕಾಶವಾಗಿತ್ತು. ಹಾಗಾಗಿ 5–6 ಬಗೆಯ ಪ್ರೊಜೆಕ್ಟ್ ಪ್ಲಾನ್ ಹಾಕಿ ಸರ್ವೆ ಮಾಡಿ ಬರಲು ಕಳುಹಿಸಿದ್ದೆವು. ನಮ್ಮ ಮಕ್ಕಳು ಅರೆಗನ್ನಡ ಅರೆಮರಾಠಿಯಲ್ಲಿ ಜನರೊಂದಿಗೆ ಹರಟೆ ಹೊಡೆದರು. ಮಾತು ಎದುರಿರೋ ಎಲೆಕ್ಷನ್ ಬಗ್ಗೂ ತಿರುತಿರುಗಿ ಪ್ರವೇಶಿಸುತ್ತಿತ್ತಂತೆ 'ನಿಮಗೆ ಏನು ಬೇಕು?' –ಎಂದು ಜನರಿಗೆ ಕೇಳಿದರೆ, 'ಓಯ್ ಕೊಡುವವ ಮ್ಯಾಲಕ್ಕ ಅದಾನ್' ಎಂದು ಚೆಂದಾಗಿ ನಕ್ಕ ಹಿರಿಯರಿದ್ದಾರೆ. ರಸ್ತೆ... ಕುಡಿಯೋ ನೀರು ಎಂದು ಅನುಮಾನಿಸುತ್ತ ಹೇಳಿದವರಿದ್ದಾರೆ. 'ನಾವು ಹೋಗಿ ಅವರನ್ನು ಡಿಸ್ಟರ್ಬ ಮಾಡ್ದಿದ್ರೆ ಅವ್ರು ಹ್ಯಾಪಿಯಾಗೇ ಇರ್ತಾರೆ' – ಎಂದು ಕನ್ನಡ ಚೆನ್ನಾಗಿ ಬರದ ವಿದ್ಯಾರ್ಥಿನಿಯೊಬ್ಬಳು ಶರಾ ಬರೆದಳು.

ಈ ವಿದ್ಯಾರ್ಥಿಗಳು – ಓಟು ಯಾರಿಗೆ ಹಾಕ್ತೀರಾ? ಎಂದು ಕೇಳಿದ್ದಾರೆ. ಕೈಯಲ್ಲಿ ಮೈಕ್ ಇಲ್ಲದೆಯೂ ಟಿ.ವ್ಹಿ.ಯವರ ಗತ್ತಿನಲ್ಲಿ. ಅವರಲ್ಲಿ ಕೆಲವರು ಮಾತ್ರ ಸ್ಪಂದಿಸಿದ್ದಾರೆ. ಹೆಣ್ಣುಮಕ್ಕಳಂತೂ "ನಮ್ಮ ಗಂಡಸರು ನಿರ್ಧಾರ ಮಾಡ್ತಾರೆ" ಅಂತ ನಿರಾಳವಾಗಿ ಅವರ ಭಾಷೆಯಲ್ಲಿ ಉತ್ತರಿಸಿದ್ದಾರೆ. ಗಂಡಸರು ನಿರ್ಧಾರ ಮಾಡಬೇಕಾದವರು. ಅವರ ನಿರ್ಧಾರ ಸರಿಯಾಗಿರುತ್ತದೆ. ನಮಗೆ, ಹೆಂಗಸರಿಗೆ ಅದು ವಿಚಾರ ಮಾಡುವ ಸಂಗತಿಯೇ ಅಲ್ಲ ಅಂತ ಗಟ್ಟಿ ನಂಬಿದ್ದಾರೆ. ಹೆಣ್ಣು ಜೀವದೊಳಗೆ ಗಂಡುಚಿಂತನೆ ಮೊರೆಯುತ್ತಿರುವುದಕ್ಕೆ ಇದೊಂದು ಉದಾಹರಣೆಯ ಸೇರ್ಪಡೆಯಷ್ಟೇ. ಒಂದೊಮ್ಮೆ ನಾವು, ಮಹಿಳಾ ಸಮಾನತೆಯ ಪ್ರಶ್ನೆಯನ್ನು ಸರಳವಾಗಿ ವಿಶ್ಲೇಷಣೆ ಮಾಡಿ, ಮಹಿಳಾ ಸಂವೇದನೆ ಮತ್ತು ಜೈವಿಕತೆಗೆ ತಳಕು ಹಾಕಿಕೊಂಡರೆ ಗಂಡು ಶ್ರೇಷ್ಠತೆಯ ಚಿಂತನೆಯೇ ರಾರಾಜಿಸುವುದು. ಇದು ಮುಂದೆ ನಡೆಯಬಹುದಾದ ಅಪಾಯವಲ್ಲ. ಈಗಾಗಲೇ ಮನುಷ್ಯ ನಾಗರಿಕತೆಯು ರೂಪಿಸಿಕೊಂಡು ತಂದ ಬಹುತೇಕ ಕ್ಷೇತ್ರಗಳಲ್ಲಿ ನಡೆದಿರುವುದು. ಭಾರತದ ರಾಜಕೀಯ ಕ್ಷೇತ್ರವೂ ಇದಕ್ಕೆ ಹೊರತಲ್ಲ.

ನಮ್ಮ ವಿದ್ಯಾರ್ಥಿಗಳ ನೋಟದ ಪ್ರಕಾರ– ಈ ಊರಿನ ಜನ ಗೌಳಿಗರಾದ್ದರಿಂದ ಅವರಿಗೆ ಜಾತಿ–ಧರ್ಮಗಳ ದ್ವೇಷದ ಅಂತಃಕಲಹದ ಕಷ್ಟವಿಲ್ಲ. ಹಾಗಾಗಿ ಇಲ್ಲಿ ಉರಿಮುಸುಡಿಯ ದೈವಗಳ ಪೋಸ್ಟರು ಅವರಗಳ ಸೈಕಲ್ಲು, ಸ್ಕೂಟರ್‌ಗಳ ಮೇಲೆ ಕಾಣುವುದಿಲ್ಲ. ಈ ಬುಡಕಟ್ಟು ಸಮುದಾಯವನ್ನು, ಅವರ ಬದುಕಿನ ವಿನ್ಯಾಸವನ್ನು ಕದಡುವ, ಎಸ್.ಸಿ. – ಎಸ್.ಟಿ. ಸೌಲಭ್ಯಗಳನ್ನು ಕೊಡಿಸುವ ಅಮಿಷದಲ್ಲಿ ಒಳತೆಗೆದುಕೊಳ್ಳುವ ನಿರಂತರ ಪ್ರಯತ್ನವೂ ನಡೆದಿದೆ. ಆದರೆ, ಸದ್ಯದ ಚುನಾವಣೆಯಲ್ಲಿ ತಮ್ಮ ಅಭ್ಯರ್ಥಿಯ ಆಯ್ಕೆಯನ್ನವರು – ಟಿ.ವ್ಹಿ.ಯ ಜಾಹೀರಾತು ಸುದ್ದಿ ಬಿತ್ತರಗಳ ಆಧಾರಗಳ ಮೇಲೆ ಮಾಡುವವರಿದ್ದಾರೆ. ಈ ಪುಟ್ಟ ಪುಟ್ಟ ಹಂಚಿನ ಮನೆಗಳಲ್ಲಿ ಸಣ್ಣ–ದೊಡ್ಡ ಟಿ.ವ್ಹಿ.ಗಳು ಮನೆಯ ಘನಸ್ತಿಕೆಯ ಸೂಚಕದಂತೆ ಆರೂಢವಾಗಿವೆ. ದಿನಕ್ಕೆ 4–5 ಬಾರಿ ವಿದ್ಯುತ್ ಕೈಕೊಡುವುದು ಸಂಪ್ರದಾಯವಾದರೂ ಮನೆಯ ಮಂದಿ ಟಿ.ವ್ಹಿ. ಮುಂದೆ ಕೂಡುವ ಪದ್ಧತಿಗೇನೂ ತೊಂದರೆಯಾಗಿಲ್ಲ. ಕನ್ನಡ, ಹಿಂದಿ, ಮರಾಠಿ ಮೂರೂ ಭಾಷೆಯ ಚಾನೆಲ್‌ಗಳು ಬೇರೆ ಬೇರೆ ಮನೆಗಳಲ್ಲಿ ಓಡುತ್ತವೆ. ಊರಿಗೆ ಕಿರಿಯ ಪ್ರಾಥಮಿಕ ಶಾಲೆ ಬಂದು 23 ವರ್ಷವಾದ್ದರಿಂದ ಕಲಿತ ಮಕ್ಕಳು ಇರುವ ಮನೆಗಳಲ್ಲಿ ಕನ್ನಡ; ಮರಾಠಿ ಸೀಮೆಯಿಂದ ಬಂದ ಸೊಸೆಯರಿದ್ದರೆ ಮರಾಠಿ ಹೀಗೆ – ತರಹೇವಾರಿ ಆಯ್ಕೆಗಳು. ಯಾರ ಮನೆಗೂ ದಿನಪತ್ರಿಕೆಗಳು ಬರುವುದಿಲ್ಲ. ಅಸಲಿಗೆ, ಹಾಗೆ ಓದುವ ರೂಢಿಯೇ ಇಲ್ಲ. ಜಗತ್ತಿನೊಂದಿಗೆ ಅವರಿಗಿರುವ ಏಕಮೇವ ಕೊಂಡಿ ಈ ದೂರದರ್ಶನ ಎಂಬ ಮಾಧ್ಯಮ.

ಈ ಅಪ್ಪಟ ಹಳ್ಳಿಗರಿಗೆ, ಮಾಧ್ಯಮಗಳಲ್ಲಿ ಬರುವುದೂ ಸುಳ್ಳಾಗಿರಬಹುದೆಂದು ಗೊತ್ತಿಲ್ಲ. ಸುದ್ದಿಯೆಂದು ತಾವು ಕೇಳುತ್ತಿರುವುದು ಯಾವುದೋ ಪಕ್ಷದ, ಯಾವುದೋ ರಾಜಕೀಯ ಬಂಡವಾಳಶಾಹಿಯು ಹಣ ತೊಡಗಿಸಿದ ಉದ್ದಿಮೆಯ ಭಾಗವೆಂದು ತಿಳಿದಿಲ್ಲ. ಹಾಗಾಗಿ, ಅಲ್ಲಿ ಪ್ರಸಾರಗೊಳ್ಳುವುದು ಸ್ವಹಿತದ ಅಭಿಪ್ರಾಯ ಹುಟ್ಟುಹಾಕುವ ಉಪಾಯ ಎಂದು ಅರ್ಥವಾಗುವುದಿಲ್ಲ. ಮಾಧ್ಯಮಗಳಲ್ಲೀಗ ಕಾಸಿಗಾಗಿ ಸುದ್ದಿ ಬಿತ್ತರಗೊಳ್ಳುತ್ತದೆ ಎಂಬ ಅಂದಾಜಿಲ್ಲ. ಯಾವುದು ನಿರ್ಭೀತಿಯಿಂದ ರಾಜಾರೋಷವಾಗಿ ಹೇಳಲ್ಪಡುತ್ತದೋ ಅದು ಸತ್ಯವೇ ಆಗಿರುತ್ತದೆ ಎಂಬ ನಂಬಿಕೆ. ಯಾರ ಚಿತ್ರ, ಯಾರ ಭಾಷಣ, ಯಾರ ಕುರಿತ ಜಾಹೀರಾತು ಮರಳಿ, ಮರಳಿ ಪ್ರಸಾರವಾಗುತ್ತದೆಯೋ ಅವರು ನಿಜವಾಗಲೂ ಭಾರತದ ಬಡ ಜನರನ್ನು ಉದ್ಧರಿಸಲು ಅವತರಿಸಿದ ದೇವರೆಂದೇ ತಿಳಿಯುತ್ತಾರೆ. ನಮ್ಮ ವಿದ್ಯಾರ್ಥಿಯೊಬ್ಬ ಕೇಳಿದನಂತೆ – ಕೆಲವು ಹೆಸರುಗಳನ್ನು 'ಇವರೂ ಚುನಾವಣೆಗೆ ನಿಂತಿದ್ದಾರೆ ಗೊತ್ತೇ?' ಅವರು ನಕ್ಕು ಇಲ್ಲವೆಂಬಂತೆ ತಲೆ ಆಡಿಸದರಂತೆ. ನಿಜವಾಗಿಯೂ ಜನರ ಬಗ್ಗೆ ಕಳಕಳಿ ಇರುವವರು, ಸೋಲಿನ ಅಪಮಾನವನ್ನು ಅನುಭವಿಸಲು ಸಿದ್ಧರಾಗಿ ಸ್ವಂತ ದುಡಿಮೆಯ, ಸ್ನೇಹಿತರ ಹಣವೊಂದಿಷ್ಟು ಖರ್ಚು ಮಾಡಿ ಸ್ಪರ್ಧಿಸುತ್ತಿದ್ದಾರೆ. ಎಡಪಂಥೀಯ ಬದ್ಧತೆಯ ಪ್ರಗತಿಪರರಿದ್ದಾರೆ. ಅವರುಗಳ ಬಗ್ಗೆ ಮಾಧ್ಯಮಗಳು ಯಾವ ಸುದ್ದಿಯನ್ನೂ ಬಿತ್ತರಿಸುವುದಿಲ್ಲ. ಹಾಗಾಗಿ ಈ ಮೂಲೆ ಮುಡುಕಿನ ಜೀವಗಳಿಗದು ತಲುಪುವುದಿಲ್ಲ. ಮಾಧ್ಯಮಗಳ ಪ್ರಭಾವ ಹೇಗಿತ್ತೆಂದರೆ – ಜನರಿಗೆ ತಮ್ಮ ಕ್ಷೇತ್ರದ ಉಮೇದುವಾರರನ್ನು ಬಿಟ್ಟರೆ, ಗೊತ್ತಿರುವುದು ಮಂಡ್ಯ ಕ್ಷೇತ್ರವೇ. ಅದೂ ತಮ್ಮ ಕ್ಷೇತ್ರದ ಉಮೇದುವಾರರಿಗಿಂತಲೂ ಹೆಚ್ಚು. ಇದೆಂಥ ವಿಪರ್ಯಾಸ?

ಈ ಪುಟ್ಟ ಹಳ್ಳಿಯ ಜನರು, ಯಾರನ್ನು ನಂಬಿದ್ದರೋ ಆರಾಧಿಸುತ್ತಿದ್ದಾರೋ ಅವರ ಬಗ್ಗೆ– ಅವರೇನು ಮಾಡಿದರು ಹೇಳಿ? – ಅಂತ ಪ್ರಶ್ನಿಸಿದರೆ, ಇದೆಲ್ಲ ಕೇಳಬೇಕಾದ ಪ್ರಶ್ನೆಯೇ ಅಲ್ಲ ಎಂದು ಗಾಬರಿಯಾದರಂತೆ. ನಾನು ವಿದ್ಯಾರ್ಥಿಗಳಿಗಂದೆ – ಇನ್ನೂ 3 ದಿನ ಇರ್ಬೇಕು. ಬಹಳ ಕೆದಕಬೇಡಿರೋ ಎಂದು. ಆದರೆ ಕೆಲವರಾದರೂ ಬಿಲ ತೋಡುವ ಉಗುರು ಬೆಳೆಸಿಕೊಂಡವರ ಹಾಗೆ ಖುಷಿಯಾಗಿದ್ದರು. ಈ ಜನರಿಗೆ, ದೇಶದ ಕೆಲವರಾದರೂ ತಾವು ಆರಾಧಿಸುವವರನ್ನು ವಿರೋಧಿಸುತ್ತಾರೆ ಮತ್ತು ವಿರೋಧಕ್ಕೆ ಕಾರಣಗಳು ಹೀಗಿವೆ – ಎಂದು ತಿಳಿಸಬೇಕಾದ ವಿದ್ಯುನ್ಮಾನ ಮಾಧ್ಯಮಗಳ ಮೌನದ ರಾಜಕಾರಣ ತಿಳಿಯುವಂತಿರಲಿಲ್ಲ. ದೇಶದ ಕಲಾವಿದರು, ಬರಹಗಾರರು, ಸಿನಿಮಾ ನಿರ್ದೇಶಕರು, ವಿಜ್ಞಾನಿಗಳು ಯಾಕಾಗಿ ಗಾಬರಿಯಾಗಿದ್ದಾರೆಂಬುದನ್ನು ಮಾಧ್ಯಮಗಳು ತಿಳಿಸಬೇಕಿತ್ತು. ಮಾಧ್ಯಮದ ಹಂಗಿಲ್ಲದೆ ಜನರಿಗೆ ಕೆಲ ಸತ್ಯವನ್ನು ತಿಳಿಸುವುದು ಹೇಗೆ? ಕಾಳಿನದಿ ಮೊದಲೇ ಕಪ್ಪು . . . ಈಗಂತೂ ವಿಷಯುಕ್ತ ರಾಸಾಯನಿಕವನ್ನು ಬೆರೆತೂ ಬೆರೆತೂ ಮಲೆತು ಹೋಗಿದೆ. ಒಜ್ಜೆ ಮೈಹೊತ್ತು ಹರಿಯುತ್ತಿರುವ ನದಿಯನ್ನು ನೋಡುತ್ತ ನಿಂತೆ, ಬಹಳ ಹೊತ್ತು. ಆ ನೀರು ಹೀರಿಯೂ ಔಷಧೀಯ ಸತ್ವವನ್ನು ತೊನೆದು ತೂಗುವ ಕಾಡಿನ ಕಡೆ ಮನಸ್ಸಿನಲ್ಲೇ ನಮಸ್ಕರಿಸಿ. ●

ಚುನಾವಣಾ ವಿಷಯಗಳ ಬಗ್ಗೆ ಫೇಸ್ ಬುಕ್ ಲೈವ್



ಚುನಾವಣೆ ಸಮಯದಲ್ಲಿ ಮಾಧ್ಯಮಗಳಲ್ಲಿ ಭಾವನಾತ್ಮಕ ವಿವಾದಾತ್ಮಕ ವಿಷಯಗಳ ಬಗ್ಗೆ ಚರ್ಚೆ ವಾಗ್ವಾದ ನಡೆಯುತ್ತದೆಯೇ ಹೊರತು, ನಿಜವಾದ ಜನರನ್ನು ಬಾಧಿಸುವ ವಿಷಯಗಳ ಬಗ್ಗೆ ಅಲ್ಲ. ಇದನ್ನು ಸ್ವಲ್ಪವಾದರೂ ಸರಿಪಡಿಸುವ ಉದ್ದೇಶದಿಂದ ಸಿಪಿಐಎಂ ಕರ್ನಾಟಕ ಸಾಮಾಜಿಕ ಮಾಧ್ಯಮ ತಂಡ CPIM Karnataka ಫೇಸ್ ಬುಕ್ ಪುಟದಲ್ಲಿ ಇಂತಹ ವಿಷಯಗಳ ಬಗ್ಗೆ ಫೇಸ್ ಬುಕ್ ಲೈವ್ ಮೂಲಕ ಪ್ರತಿ ದಿನ ಒಂದು ವಿಷಯದ ಬಗ್ಗೆ ಸಂವಾದ ಏರ್ಪಡಿಸಿತ್ತು. ಈ ವರೆಗಿನ ಸಂವಾದಕ್ಕೆ ಉತ್ತಮ ಪ್ರತಿಕ್ರಿಯೆ ದೊರೆತಿದ್ದು, ಇದು ಕರ್ನಾಟಕದಲ್ಲಿ ಎರಡನೇ ಸುತ್ತಿನ ಚುನಾವಣೆ ಪ್ರಚಾರ ಅವಧಿಯವರೆಗೆ ಮುಂದುವರೆಯಲಿದೆ. ಇದನ್ನು ಎಲ್ಲರೂ ತಾವೂ ಕೇಳಿ, ಇತರ ಮಿತ್ರರನ್ನು ಕೇಳು ಆಹ್ವಾನ ಶೇರ್ ಮೂಲಕ ಮಾಡಬೇಕು. ಈ ವರೆಗಿನ ಸಂವಾದದ ವಿಡಿಯೋಗಳೂ ಸಹ CPIM Karnataka ಫೇಸ್ ಬುಕ್ ಪುಟದಲ್ಲಿ ಈಗಲೂ ಇವೆ. ಅವನ್ನು ಕೇಳಬಹುದು. ಪ್ರತಿ ಸಂವಾದಕ್ಕೆ ಸರಾಸರಿ 1500 ವಿಡಿಯೋ ವ್ಯೂ ಮತ್ತು 6 ಸಾವಿರ ಪೋಸ್ಟ್ ರೀಚ್ ಆಗಿದೆ. ಕಾ. ಮೀನಾಕ್ಷಿಸುಂದರಂ ಜತೆ ಸಂವಾದಕ್ಕೆ ಅತ್ಯಧಿಕ ಅಂದರೆ 10 ಸಾವಿರ ವಿಡಿಯೋ ವ್ಯೂ ದಾಟಿ, 50 ಸಾವಿರ ಪೋಸ್ಟ್ ರೀಚ್ ಸಾಧಿಸಿದೆ. ಈ ವರೆಗೆ ಆದ ಮತ್ತು ಇನ್ನು ಆಗಬೇಕಿರುವ ಸಂವಾದಗಳ ಪಟ್ಟಿ ಕೆಳಗಿದೆ:


ಈ ವರೆಗಿನ ಸಂವಾದಗಳು

1. ಎಡ ಬದಲಿ ಯಾಕೆ ? ಏನು? ಹೇಗೆ ? : ಯು. ಬಸವರಾಜ್(ಏ.1)
2. ಎಲ್ಲಾ ಕಾರ್ಮಿಕರಿಗೆ 18 ಸಾವಿರ ರೂ. ಕನಿಷ್ಟ ಕೂಲಿ ಆರ್ಥಿಕ ಬೆಳವಣಿಗೆಗೆ ಪೂರಕ : ವಿ.ಜೆ.ಕೆ. ನಾಯರ್(ಏ.2)
3. ಉದ್ಯೋಗ ಖಾತ್ರಿ ಯೋಜನೆಯ ಸಾಮಾಜಿಕ–ಆರ್ಥಿಕ ಮಹತ್ವ : ನಿತ್ಯಾನಂದಸ್ವಾಮಿ (ಏ.3)
4. ರೈತ ಆತ್ಮಹತ್ಯೆಗಳನ್ನು ತಡೆಯಲು ಕೃಷಿ ಬೆಂಬಲ ಬೆಲೆ ಮತ್ತು ಸಾಲ ಮನ್ನಾ : ಮಾರುತಿ ಮಾನ್ಪಡೆ (ಏ.4)
5. ದೇಶದ ನವರತ್ನಗಳನ್ನು ಮೂರು ಕಾಸಿಗೆ ಮಾರುತ್ತಿರುವ 'ದೇಶದ್ರೋಹಿ' ಸರಕಾರ (ಎಚ್.ಎ.ಎಲ್–ಬಿಇಎಂಎಲ್ ಮಾರಾಟ ಉದಾಹರಣೆ) : ಮೀನಾಕ್ಷಿ ಸುಂದರಂ (ಏ.5)
6. ನೋಟು ನಿಷೇಧ ಪ್ರಮಾದವಲ್ಲ, ಜನತೆಯ ಮೇಲೆ ಬಹು–ಆಯಾಮಗಳ ದಾಳಿ: ಆರ್.ಶ್ರೀನಿವಾಸ್ (ಏ.6)
7. ಮಹಿಳಾ ವಿರೋಧಿ ಬಿಜೆಪಿ ಸರಕಾರ : ವಿಮಲಾ (ಏ.7)
8. ಸಾಂವಿಧಾನಿಕ ಪ್ರಜಾಪ್ರಭುತ್ವ ಮತ್ತು ಒಕ್ಕೂಟ ತತ್ವದ ಮೇಲೆ ದಾಳಿ : ಜಿಎನ್. ನಾಗರಾಜ್ (ಏ.8)
9. ಕರ್ನಾಟಕದಲ್ಲಿ ಭೂಮಿಯ ಪ್ರಶ್ನೆ ಮತ್ತು ಪರಿಹಾರಕ್ಕಾಗಿ ಹೋರಾಟಗಳು : ಬಯ್ಯಾರೆಡ್ಡಿ (ಏ. 9)
10. ಬರಪೀಡಿತ ಜಿಲ್ಲೆಗಳು ಮತ್ತು ಶಾಶ್ವತ ನೀರಾವರಿ ಯೋಜನೆ : ಜಿ.ವಿ.ಶ್ರೀರಾಮರೆಡ್ಡಿ ಬರಪೀಡಿತ ಜಿಲ್ಲೆಗಳು ಮತ್ತು ಶಾಶ್ವತ ನೀರಾವರಿ ಯೋಜನೆ : ಜಿ.ವಿ.ಶ್ರೀರಾಮರೆಡ್ಡಿ (ಏ. 10 ಬೆಳಿಗ್ಗೆ)
11. ಕೋಮುವಾದದ ಕರಾಳ ಮುಖಗಳು : ಗುರುಶಾಂತ್ (ಏ. 10 ಸಂಜೆ)
12. ಕಾರ್ಮಿಕ ಕಾನೂನುಗಳ ಕಾರ್ಮಿಕ–ವಿರೋಧಿ ತಿದ್ದುಪಡಿ ಜನ–ವಿರೋಧಿ : ಕೆ.ಎನ್, ಉಮೇಶ್ (ಏ. 11)
13. ಅಸಂಘಟಿತ ಕಾರ್ಮಿಕರ ಸಮಸ್ಯೆಗಳು ಮತ್ತು ಪರಿಹಾರ : ಯಮುನಾ ಗಾಂವ್ಕರ್ (ಏ. 12)
14. ರಾಷ್ಟ್ರೀಯ ಭದ್ರತೆ ಮತ್ತು ಭಯೋತ್ಪಾದನೆ ನಿಗ್ರಹದಲ್ಲಿ ಮೋದಿ ವೈಫಲ್ಯ : ಪ್ರಕಾಶ್ (ಏ. 13)

ಮುಂಬರಲಿರುವ ಸಂವಾದಗಳು

15. ಚಿಕ್ಕಬಳ್ಳಾಪುರ ಕ್ಷೇತ್ರದ ಸಮಸ್ಯೆಗಳು, ಸಿಪಿಐ(ಎಂ) ಹೋರಾಟಗಳು, ಸಾಧನೆಗಳು : ವರಲಕ್ಷ್ಮಿ
16. ಮೋದಿ ಸರಕಾರದ ದಲಿತ ವಿರೋಧಿ ಹೆಜ್ಜೆ ಗುರುತುಗಳು : ಮಹಾಂತೇಶ್
17. ಬಿಜೆಪಿಯ ಮುಸ್ಲಿಂ–ದ್ವೇಷದ ರಾಜಕಾರಣದ ಕರಾಳ ರೂಪಗಳು : ಸೈಯದ್ ಮುಜೀಬ್
18. ನಿರುದ್ಯೋಗದ ಪ್ರಶ್ನೆ: ಮುನೀರ್ ಕಾಟಿಪಳ್ಳ
19. ಕರ್ನಾಟಕದಲ್ಲಿ ಸಿಪಿಐ(ಎಂ) ಹೋರಾಟಗಳ ಚರಿತ್ರೆ : ವಸಂತ ಆಚಾರಿ
20. ಮಹದಾಯಿ ವಿವಾದ ಮತ್ತು ಬೂರ್ಜ್ವಾ ಪಕ್ಷಗಳ ದೊಂಬರಾಟ : ಬಿ.ಎಸ್ ಸೊಪ್ಪಿನ
21. ರಾಜ್ಯದ ಅಸಮಾನ ಬೆಳವಣಿಗೆ ಮತ್ತು ಪ್ರತ್ಯೇಕತೆಯ ಕೂಗು : ಗುರುರಾಜ ದೇಸಾಯಿ

17ನೇ ಲೋಕಸಭಾ ಚುನಾವಣೆ : ಸಮಾನ ನೆಲೆಯಲ್ಲಿ ಸ್ಪರ್ಧೆಯ ಖಾತರಿ ಇಲ್ಲ



ಅಂಪಾಯರ್‌ಗಳಿಗೂ ಸಮತಳ ಬೇಕಲ್ಲವೇ ಎಂದು ಕೇಳಬೇಕಾದ ದುಸ್ಥಿತಿ
–ವ್ಯಂಗ್ಯಚಿತ್ರ: ಸಂದೀಪ್ ಅಧ್ವರ್ಯು, ಟೈಂಸ್ ಆಫ್ ಇಂಡಿಯ

ಚುನಾವಣೆ ಪ್ರಕ್ರಿಯೆ ಜಾರಿಯಲ್ಲಿರುವಾಗ ರಾಜಕೀಯ ಪಕ್ಷಗಳಿಗೆ ಸ್ಪರ್ಧೆಗೆ ಸಮಾನ ನೆಲೆಯನ್ನು ಮತ್ತು ಮುಕ್ತ–ನ್ಯಾಯಸಮ್ಮತ ಚುನಾವಣೆಗಳನ್ನು ಚುನಾವಣಾ ಆಯೋಗ ಖಾತರಿ ಪಡಿಸಬೇಕು. ಆದರೆ ಇದನ್ನು ಕುರಿತಂತೆ, ಆದಾಯ ತೆರಿಗೆ ಇಲಾಖೆಯ ಅಕ್ರಮ ಬಳಕೆ ಕುರಿತಂತೆ, ಚುನಾವಣೆ ಆಯೋಗವು ತೋರಿಸುತ್ತಿರುವ ಅರೆಮನಸ್ಸಿನ ಪ್ರತಿಕ್ರಿಯೆಯು ಆಳುವ ಪಕ್ಷ ಮತ್ತು ಸ್ವತಃ ಪ್ರಧಾನ ಮಂತ್ರಿಯಿಂದ ಆಗಿರುವ ಮಾದರಿ ನೀತಿ ಸಂಹಿತೆಯ ನಗ್ನ ಉಲ್ಲಂಘನೆ ಬಗ್ಗೆ ಅದರ ಈಗಿನ ಧೋರಣೆಗೆ, ಅದರ 'ವಿಶ್ವಾಸಾರ್ಹತೆಯ ಬಿಕ್ಕಟ್ಟಿಗೆ' ಅನುಗುಣವಾಗಿಯೇ ಇದೆ. ಚುನಾವಣೆ ಆಯೋಗದ ಪ್ರಸ್ತುತ ದುಸ್ಥಿತಿ, ಆದಾಯ ತೆರಿಗೆ ಇಲಾಖೆಯ ದುರ್ಬಳಕೆ, ದೇಶದ ಸಂಸ್ಥೆಗಳ ಸ್ವಾತಂತ್ರ್ಯ ಮತ್ತು ವಿಶ್ವಾಸಾರ್ಹತೆಯನ್ನು ಮೋದಿ ಸರಕಾರ ಹೇಗೆ ದುರ್ಬಲಗೊಳಿಸುತ್ತಿದೆ ಎನ್ನುವುದಕ್ಕೆ ಎಚ್ಚರಿಕೆ ಗಂಟೆಯಾಗಿದೆ.



*** ಪ್ರಕಾಶ್ ಕಾರಟ್**

ಚುನಾವಣೆ ಸಂದರ್ಭದಲ್ಲಿ ತನ್ನ ಸಂಕುಚಿತ ರಾಜಕೀಯ ಲಾಭಕ್ಕಾಗಿ ಇನ್ನೂ ಒಂದು ಸರಕಾರಿ ಸಂಸ್ಥೆಯನ್ನು ಅಕ್ರಮವಾಗಿ ಬಳಸಲು ನರೇಂದ್ರ ಮೋದಿ ಸರಕಾರ ಮುಂದಾಗಿದೆ. ಪ್ರತಿಪಕ್ಷಗಳು ಮತ್ತು ಅವುಗಳ ನಾಯಕರ ಮೇಲೆ ಆದಾಯ ತೆರಿಗೆ(ಐ.ಟಿ.) ಇಲಾಖೆಯನ್ನು ಸರಕಾರ ಛೂಬಿಟ್ಟಿದೆ. ಕಳೆದ ಹದಿನೈದು ದಿನಗಳಲ್ಲಿ ರಾಜಕೀಯ ಪಕ್ಷಗಳ ಮುಖಂಡರು, ಬಿಜೆಪಿಯೇತರ ಸರಕಾರಗಳ ಸಚಿವರು, ಈ ಪಕ್ಷಗಳೊಂದಿಗೆ ಸಂಬಂಧ ಹೊಂದಿರುವ ವ್ಯಾಪಾರೋದ್ಯಮಿಗಳು ಮತ್ತು ಬಿಜೆಪಿಯೇತರ ಸರಕಾರಗಳ ಮುಖ್ಯಮಂತ್ರಿಗಳ ಮತ್ತು ಸಚಿವರ ಆಪ್ತರ ಮೇಲೆ ಸರಣಿ ಐಟಿ ದಾಳಿಗಳು ನಡೆದಿವೆ.

ಕರ್ನಾಟಕದಲ್ಲಿ ಜೆಡಿಎಸ್–ಕಾಂಗ್ರೆಸ್ ಸಚಿವರು ಮತ್ತು ನಾಯಕರು, ಆಂಧ್ರ ಪ್ರದೇಶದಲ್ಲಿ ಟಿಡಿಪಿ ನಾಯಕರು ಹಾಗೂ ಸಚಿವರು, ತಮಿಳು ನಾಡಿನಲ್ಲಿ ಒಬ್ಬ ಪ್ರಮುಖ ಡಿಎಂಕೆ ನಾಯಕ ಹಾಗೂ ಪಕ್ಷದ ಖಜಾಂಚಿ ಮತ್ತು ಮಧ್ಯ ಪ್ರದೇಶ ಮುಖ್ಯಮಂತ್ರಿ ಕಮಲ್‌ನಾಥ್‌ರ ಕೆಲವು ಆಪ್ತರ ಮೇಲೆ ಐ.ಟಿ.ದಾಳಿಗಳು ನಡೆದಿವೆ.

ಲೋಕಸಭೆ ಚುನಾವಣೆಗಳ ಅಧಿಕೃತ ಪ್ರಕಟಣೆ ಹೊರಬಿದ್ದ ನಂತರ ಈ ದಾಳಿಗಳು ನಡೆದಿವೆ ಎನ್ನುವುದು ಗಮನಾರ್ಹ. ಚುನಾವಣೆ ಪ್ರಕ್ರಿಯೆ ಜಾರಿಯಲ್ಲಿರುವಾಗ ರಾಜಕೀಯ ಪಕ್ಷಗಳಿಗೆ ಸ್ಪರ್ಧೆಗೆ ಸಮಾನ ನೆಲೆಯನ್ನು ಮತ್ತು ಮುಕ್ತ–ನ್ಯಾಯಸಮ್ಮತ ಚುನಾವಣೆಗಳನ್ನು ಖಾತರಿಪಡಿಸಬೇಕಾದ್ದು ಚುನಾವಣೆ ಆಯೋಗವೇ.

ಅಭ್ಯರ್ಥಿಗಳು ಮತ್ತು ಪಕ್ಷಗಳು ಅಪಾರ ಪ್ರಮಾಣದಲ್ಲಿ ಹಣವನ್ನು ವ್ಯಯಿಸುವ ಒಂದು ಚುನಾವಣೆ ವ್ಯವಸ್ಥೆಯಲ್ಲಿ ಅಕ್ರಮ ಹಣದ ಬಳಕೆಯನ್ನು ನಿಯಂತ್ರಿಸಬಾರದು ಎಂದು ಯಾರೂ ವಾದಿಸುವುದಿಲ್ಲ. ಆದರೆ ಈ ಕೆಲಸ ಮಾಡಬೇಕಿರುವುದು ಚುನಾವಣೆ ಆಯೋಗ. ಚುನಾವಣೆಗಳಲ್ಲಿ ಹಣದ ಹೊಳೆ ಹರಿಯುವುದನ್ನು ತಡೆಯಲು ಸಾಕಷ್ಟು ಪ್ರಮಾಣದಲ್ಲಿ ಅಲ್ಲದಿದ್ದರೂ ಚುನಾವಣೆ ಆಯೋಗವು ಪ್ರಯತ್ನ ನಡೆಸುತ್ತಿದೆ. ಅದು ದಾಳಿಗಳನ್ನು ನಡೆಸಿ ಲೆಕ್ಕಪತ್ರವಿಲ್ಲದ ನಗದನ್ನು ವಶಪಡಿಸಿಕೊಂಡು ಮುಂದಿನ ತನಿಖೆಗಾಗಿ ಐ.ಟಿ. ಅಧಿಕಾರಿಗಳ ವಶಕ್ಕೆ ಒಪ್ಪಿಸುತ್ತಿದೆ.

ಆದರೆ ಮೋದಿ ಸರಕಾರವು ಚುನಾವಣೆ ಆಯೋಗವನ್ನು ಬದಿಗೊತ್ತಿ ಚುನಾವಣೆಗಳಲ್ಲಿ ಬಿಜೆಪಿ ವಿರುದ್ಧ ಹೋರಾಡುತ್ತಿರುವ ಆಯ್ದ ರಾಜಕೀಯ ಪಕ್ಷಗಳನ್ನು ಗುರಿಯಾಗಿಸಿಕೊಂಡು ಐ.ಟಿ. ಇಲಾಖೆ ಮತ್ತು ಕೇಂದ್ರೀಯ ನೇರ ತೆರಿಗೆಗಳ ಮಂಡಳಿಯನ್ನು ಬಳಸಿಕೊಳ್ಳುತ್ತಿದೆ. ಶಂಕಿತ ಲೆಕ್ಕವಿಲ್ಲದ ಹಣವನ್ನು ವಶಪಡಿಸಿಕೊಳ್ಳಲು ಐ.ಟಿ. ಅಧಿಕಾರಿಗಳಿಗೆ ಬಿಜೆಪಿಯೇತರ ರಾಜಕೀಯ ನಾಯಕರು ಮತ್ತು ಸಚಿವರು ಮಾತ್ರವೇ ಸಿಗುತ್ತಿರುವಂತೆ ಕಾಣುತ್ತಿದೆ. ಇದುವರೆಗೆ ಒಬ್ಬನೇ ಒಬ್ಬ ಬಿಜೆಪಿ ನಾಯಕನಾಗಲೀ ಬಿಜೆಪಿ ಅಥವಾ ಅದರ ಮಿತ್ರಪಕ್ಷಗಳನ್ನು ಬೆಂಬಲಿಸುವ ವ್ಯಾಪಾರೋದ್ಯಮಿ ಮೇಲಾಗಲೀ ಚುನಾವಣೆ ಪ್ರಕ್ರಿಯೆ ವೇಳೆ ಐಟಿ ದಾಳಿ ನಡೆದಿಲ್ಲ. .

ಈ ದಾಳಿಗಳು ಎರಡು ಉದ್ದೇಶಗಳನ್ನು ಹೊಂದಿವೆ. ಈ ರಾಜಕೀಯ ಪಕ್ಷಗಳು ಮತ್ತು ಪ್ರತಿಪಕ್ಷಗಳ ಅಭ್ಯರ್ಥಿಗಳಿಗೆ ಚುನಾವಣೆಗಳಲ್ಲಿ ಹಣದ ಹರಿವನ್ನು ತಡೆಯುವುದು ಒಂದನೆಯದು ಹಾಗೂ ಅವರೆಲ್ಲಾ ಭ್ರಷ್ಟರು ಮತ್ತು ತೆರಿಗೆ–ಚೋರರು ಎಂದು ಬಿಂಬಿಸುವುದು ಎರಡನೆಯದು. ಅದಕ್ಕೆ ಪ್ರತಿಯಾಗಿ ಮೋದಿ ಒಬ್ಬ ಭ್ರಷ್ಟಾಚಾರ–ವಿರೋಧಿ ಹೋರಾಟಗಾರ ಎಂಬ ಇಮೇಜನ್ನು ಬೆಳೆಸುವುದು ಕೂಡ ಉದ್ದೇಶವಾಗಿದೆ. ಚುನಾವಣೆ ಪ್ರಚಾರ ಸಭೆಗಳಲ್ಲಿ ಮೋದಿ ತತ್‌ಕ್ಷಣವೇ ಈ ದಾಳಿಗಳನ್ನು ಪ್ರಸ್ತಾವಿಸಿದ್ದನ್ನು ಗಮನಿಸಬಹುದು. 'ದೊಡ್ಡ ಜನರ' ಮನೆಗಳಲ್ಲಿ ಹೇಗೆ ಕಂತೆಗಟ್ಟಲೆ ಹಣ ಸಿಕ್ಕಿದೆ ನೋಡಿದಿರಾ ಎಂದು ಮೋದಿ ತನ್ನ ಭಾಷಣಗಳಲ್ಲಿ ಹೇಳಿದ್ದಾರೆ. .

ಐ.ಟಿ. ಇಲಾಖೆಯ ಈ ರೀತಿಯ ದುರ್ಬಳಕೆಗೆ ಚುನಾವಣೆ ಆಯೋಗದ ಪ್ರತಿಕ್ರಿಯೆ ತುಂಬಾ ದುರ್ಬಲವಾಗಿದೆ. ಅದು ಕೇಂದ್ರ ಕಂದಾಯ ಇಲಾಖೆಗೆ ಪತ್ರವೊಂದನ್ನು ಬರೆದು "ಚುನಾವಣೆ ಅವಧಿಯಲ್ಲಿನ ಕಾರ್ಯಾಚರಣೆಗಳು ತಟಸ್ಥವಾಗಿರಬೇಕು, ನಿಷ್ಪಕ್ಷಪಾತವಾಗಿರಬೇಕು ಮತ್ತು ತಾರತಮ್ಯ ರಹಿತವಾಗಿರಬೇಕು ಎಂದು ಬಲವಾಗಿ ಸಲಹೆ" ಮಾಡಿದೆ. ಚುನಾವಣೆಗಳಲ್ಲಿ ಅಕ್ರಮ ಹಣದ ಶಂಕಿತ ಬಳಕೆಯ ಕುರಿತ ಯಾವುದೇ ವಿಚಾರವನ್ನು "ಸೂಕ್ತ ರೀತಿಯಲ್ಲಿ ಮುಖ್ಯ ಚುನಾವಣಾ ಅಧಿಕಾರಿಗಳ ಗಮನಕ್ಕೆ ತರಬೇಕು" ಎಂದೂ ಪತ್ರ ಹೇಳಿದೆ. **ತನ್ನ ನೇರ ಅನುಮತಿಯಿಲ್ಲದೆ ರಾಜಕೀಯ ಮುಖಂಡರ ಮೇಲೆ ದಾಳಿಗಳನ್ನು ನಡೆಸಕೂಡದು ಎಂದು ಕೇಂದ್ರ ಸರಕಾರಕ್ಕೆ ಚುನಾವಣೆ ಆಯೋಗ ಹೇಳಬೇಕಿತ್ತು. ಇದು ಮುಖ್ಯ ಚುನಾವಣೆ ಅಧಿಕಾರಿಗಳಿಗೆ ಸೂಕ್ತ ರೀತಿಯಲ್ಲಿ ಮಾಹಿತಿ ನೀಡುವ ಪ್ರಶ್ನೆಯಲ್ಲ, ಆದರೆ ದಾಳಿ ಮಾಡುವುದಕ್ಕೆ ಮುಂಚಿತವಾಗಿ ಅನುಮತಿ ಪಡೆಯುವ ಪ್ರಶ್ನೆಯಾಗಿದೆ.**

ಆದರೆ ಚುನಾವಣೆ ಆಯೋಗದ ಈ ಅರೆಮನಸ್ಸಿನ ಪ್ರತಿಕ್ರಿಯೆಯು ಆಳುವ ಪಕ್ಷ ಮತ್ತು ಸ್ವತಃ ಪ್ರಧಾನ ಮಂತ್ರಿಯಿಂದ ಆಗಿರುವ ಮಾದರಿ ನೀತಿ ಸಂಹಿತೆಯ (ಎಂಸಿಸಿ) ನಗ್ನ ಉಲ್ಲಂಘನೆ ಬಗ್ಗೆ ಆಯೋಗದ ಈಗಿನ ಧೋರಣೆಗೆ ಅನುಗುಣವಾಗಿಯೇ ಇದೆ. ನಿವೃತ್ತ ನಾಗರಿಕ ಸೇವಾ ಅಧಿಕಾರಿಗಳು ಮತ್ತು ರಾಜತಾಂತ್ರಿಕರ ಒಂದು ಗುಂಪು ರಾಷ್ಟ್ರಪತಿಯವರಿಗೆ ಪತ್ರ ಬರೆದು ನಮ್ಮ ಸಂಸದೀಯ ಪ್ರಜಾಪ್ರಭುತ್ವಕ್ಕೆ ಅತ್ಯಂತ ಮಹತ್ವದ ಸಂಸ್ಥೆಯಾದ ಚುನಾವಣೆ ಆಯೋಗದ "ವಿಶ್ವಾಸಾರ್ಹತೆಯ ಬಿಕ್ಕಟ್ಟಿನ" ಬಗ್ಗೆ ಗಮನ ಸೆಳೆದಿದೆ. ಕಟ್ಟು ನಿಟ್ಟಿನ ಕ್ರಮ ಅಗತ್ಯವಾದ ಎಂಸಿಸಿ ಉಲ್ಲಂಘನೆಯ ಅನೇಕ ಪ್ರಮುಖ ಪ್ರಕರಣಗಳನ್ನು ಈ ಗುಂಪು ಪಟ್ಟಿ ಮಾಡಿದೆ.

ಉಪಗ್ರಹ–ನಿರೋಧಕ ಪರೀಕ್ಷೆ ತನ್ನ ಸಾಧನೆ ಎಂದು ಅಸಾಟ್–ನಂತರ ಮಾಡಿದ ಭಾಷಣದಲ್ಲಿ ಪ್ರಧಾನಿ ಹೇಳಿದ್ದರ ಬಗ್ಗೆ ಆಯೋಗ ಒಂದು ಎಚ್ಚರಿಕೆಯನ್ನೂ ನೀಡಿಲ್ಲ. ಭಾರತೀಯ ಸೇನೆಯನ್ನು "ಮೋದೀಜಿಯ ಸೇನೆ" ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಆದಿತ್ಯನಾಥ ಹೇಳಿದ್ದಕ್ಕೆ ಆಯೋಗದಿಂದ ಬಂದಿದ್ದು ಒಂದು ಸೌಮ್ಯಸ್ವರೂಪದ ಖಂಡನೆಯನ್ನಷ್ಟೇ. **ಆದಿತ್ಯನಾಥರನ್ನು ಒಂದು ನಿರ್ದಿಷ್ಟ ಅವಧಿ ವರೆಗೆ ಸಾರ್ವಜನಿಕ ಪ್ರಚಾರದಿಂದ ನಿರ್ಬಂಧಿಸುವ ಕನಿಷ್ಟ ಕೆಲಸವನ್ನು ಆಯೋಗ ಮಾಡಬೇಕಿತ್ತು. ಆಗಿನಿಂದ ಮೋದಿ ಎಪ್ರಿಲ್ ಒಂದರ ವಾರ್ಧಾ ಭಾಷಣದಲ್ಲಿ ಹಿಂದೂ ಕಾರ್ಡನ್ನು ಬಹು ನಗ್ನವಾಗಿ ಬಳಸಲು ಆರಂಭಿಸಿದ್ದು ಅದರ ವಿರುದ್ಧ ಯಾವುದೇ ಕ್ರಮವನ್ನು ಕೈಗೊಳ್ಳಲಾಗಿಲ್ಲ. ಯಾವುದೇ ಲಂಗುಲಗಾಮಿಲ್ಲದೆ**

‘ಮೋದೀಕೀ ಸೇನಾ’



ವ್ಯಂಗ್ಯಚಿತ್ರ: ಇ.ಪಿ.ಉನ್ನಿ, ಇಂಡಿಯನ್ ಎಕ್ಸ್‌ಪ್ರೆಸ್

ಮೋದಿ, ಬಾಲಾಕೋಟ್ ವೈಮಾನಿಕ ದಾಳಿಯ ಆಧಾರದಲ್ಲಿ ಮತ್ತು ಪುಲ್ವಾಮಾ ಹುತಾತ್ಮರ ಹೆಸರಿನಲ್ಲಿ ಮತಗಳನ್ನು ಕೇಳುವುದನ್ನು ಮುಂದುವರಿಸಿದ್ದಾರೆ.

ನಿವೃತ್ತ ಅಧಿಕಾರಿಗಳು ಬರೆದ ಪತ್ರದಲ್ಲಿನ ಇನ್ನೊಂದು ಅಂಶ ಕೂಡ ಪ್ರಸ್ತುತವಾಗುತ್ತದೆ. ಬಿಜೆಪಿಯೇತರ ಆಡಳಿತವಿರುವ ರಾಜ್ಯಗಳಲ್ಲಿ ಬಿಜೆಪಿ ಮತ್ತದರ ಮಿತ್ರಪಕ್ಷಗಳ ದೂರಿನ ಆಧಾರದಲ್ಲಿ ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳನ್ನು ತಕ್ಷಣಕ್ಕೆ ವರ್ಗಾಯಿಸುವಲ್ಲಿ ಆಯೋಗ ಕ್ರಮ ಕೈಗೊಳ್ಳುತ್ತಿರುವಂತೆ ಕಾಣುತ್ತದೆ. ಆಂಧ್ರ ಪ್ರದೇಶ, ಪಶ್ಚಿಮ ಬಂಗಾಲ ಮತ್ತು ರಾಜಸ್ತಾನದಲ್ಲಿ ಇದು ನಡೆದಿದೆ. ಆದರೆ ತಮಿಳುನಾಡು ಮತ್ತು ಇತರ ಬಿಜೆಪಿ ಆಡಳಿತದ ರಾಜ್ಯಗಳಲ್ಲಿ ಗಂಭೀರ ದೂರುಗಳ ಸಲ್ಲಿಕೆಯಾದರೂ ವರ್ಗಾವಣೆಗೆ ಆದೇಶಗಳನ್ನು ನೀಡಲಾಗಿಲ್ಲ. ತ್ರಿಪುರಾದಲ್ಲಿ ಎಡರಂಗದ ವಿರುದ್ಧ ಅಪಾರ ಪೂರ್ವಗ್ರಹಪೀಡಿತನಾದ ಒಬ್ಬ ಚುನಾವಣಾಧಿಕಾರಿ ವಿರುದ್ಧ ಗಂಭೀರ ದೂರನ್ನು ಸಲ್ಲಿಸಿದ್ದರೂ ಅದನ್ನು ನಿರ್ಲಕ್ಷಿಸಲಾಗಿದೆ.


ಚುನಾವಣೆ ಆಯೋಗದ ಪ್ರಸ್ತುತ ದುಸ್ಥಿತಿ ದೇಶದ ಸಂಸ್ಥೆಗಳ ಸ್ವಾತಂತ್ರ್ಯ ಮತ್ತು ವಿಶ್ವಾಸಾರ್ಹತೆಯನ್ನು ಮೋದಿ ಸರಕಾರ ಹೇಗೆ ದುರ್ಬಲಗೊಳಿಸುತ್ತಿದೆ ಎನ್ನುವುದಕ್ಕೆ ಎಚ್ಚರಿಕೆ ಗಂಟೆಯಾಗಿದೆ.

ಅನು: ವಿಶ್ವ





ವ್ಯಂಗ್ಯಚಿತ್ರಗಳು: ಸತೀಶ ಆಚಾರ್ಯ



ವ್ಯಂಗ್ಯಚಿತ್ರ: ಪಿ.ಮಹಮ್ಮದ್, ವಾರ್ತಾಭಾರತಿ





: ನೆನೆ ಆ ದಿನವ ಓ ದೇಶ ಬಾಂಧವ :
ಜಲಿಯನ್ ವಾಲಾಬಾಗ್ ಹತ್ಯಾಕಾಂಡಕ್ಕೆ 100 ವರ್ಷ

ವ್ಹಿ.ಪಿ. ಕುಲಕರ್ಣಿ ಸಾ॥ ಮುದೇನಕೊಪ್ಪ



ಏಪ್ರೀಲ್ 13, 1919– ಪಂಜಾಬಿನ ಎಲ್ಲ ಸಮುದಾಯದವರು ಒಟ್ಟಾಗಿ ಆಚರಿಸುವ ಬೈಸಾಖಿ ಹಬ್ಬದ ದಿನ. ಅಮೃತಸರದಲ್ಲಿ ನಾಲ್ಕು ದಿನಗಳ ಹಿಂದೆ, ಏಪ್ರಿಲ್ 9(1919) ರಂದು ಕಂಡಿದ್ದ ಹಿಂದೂ–ಮುಸ್ಲಿಂ–ಸಿಖ್ ಐಕ್ಯತೆ ಅಂದು ಇನ್ನೂ ಗಾಢವಾದ ಅಭಿವ್ಯಕ್ತಿ ಕಂಡಿತು. ಎಲ್ಲರೂ–ಸಾಮೂಹಿಕ ಭೋಜನದಲ್ಲಿ ಪಾಲ್ಗೊಂಡು ಸ್ವರ್ಣ ಮಂದಿರದ ಪಕ್ಕದಲ್ಲಿದ್ದ ಜಲಿಯನ್ ವಾಲಾಬಾಗ್ (ಉದ್ಯಾನ) ದತ್ತ ನಡೆದರು. ಅದು ಕಟ್ಟಡಗಳಿಂದ ಸುತ್ತುವರೆದಿದ್ದ ಒಂದು ಕಿರಿಯದಾದ ಪ್ರವೇಶ ದ್ವಾರ ಮಾತ್ರ ತೆರೆದಿದ್ದ ಮೈದಾನ ಮತ್ತು ಉದ್ಯಾನವನ ಆಗಿತ್ತು.

ಏಪ್ರಿಲ್ 13 ರಂದು ಸಂಜೆ ತಮ್ಮ ಪ್ರೀತಿ ಪಾತ್ರ ಮುಖಂಡರಾಗಿದ್ದ ಡಾ॥ ಸತ್ಯಪಾಲ ಮತ್ತು ಡಾ॥ ಸೈಪುದ್ದಿನ್ ಕಿಚಲೂ ಅವರನ್ನು ಬಂಧಿಸಿದಕ್ಕೆ ನಡೆದ ಪ್ರತಿಭಟನಾ ಸಭೆಯಲ್ಲಿ ಸುಮಾರು 20 ಸಾವಿರ ಜನ ಪಾಲ್ಗೊಂಡಿದ್ದರು. ಸಂಜೆ 5 ರ ವೇಳೆ ಬ್ರಿಟೀಷ್ ಬ್ರಿಗೇಡಿಯರ್ ಜನರಲ್ ಡಾಯರ್ ನೇತೃತ್ವದಲ್ಲಿ ಶಸ್ತ್ರ ಸಜ್ಜಿತ ಭದ್ರತಾ ಪಡೆಗಳು ನುಗ್ಗಿ ಬಂದವು. ಇದ್ದ ಒಂದು ಪ್ರವೇಶ ದ್ವಾರವನ್ನು ಅಡ್ಡಗಟ್ಟಿ ಯಾವುದೇ ಮುನ್ಸೂಚನೆ ಇಲ್ಲದೆ ಗುಂಡಿನ ಸುರಿಮಳೆ ಆರಂಭವಾಯಿತು. ಭದ್ರತಾ ಸಿಬ್ಬಂದಿಯ ಬಂದೂಕುಗಳಲ್ಲಿನ ಗುಂಡುಗಳು ಖಾಲಿ ಆಗುವ ತನಕ ಗುಂಡಿನ ಸುರಿಮಳೆ ನಡೆಯಿತು. 1650 ಸುತ್ತು ಗೋಲಿಬಾರ್ ನಡೆಯಿತು ಎನ್ನಲಾಗಿದೆ. ಇಡೀ ಮೈದಾನದಲ್ಲಿ ಹೆಣಗಳ ರಾಶಿ, ನೆತ್ತರ ಕೋಡಿ, ಸುಮಾರು 1000 (ಒಂದು ಸಾವಿರ) ಜನ ಸತ್ತು ಸುಮಾರು 1500 ಜನ ತೀವ್ರ ಗಾಯಾಳುಗಳಾದರು. (ಸರಕಾರದ ಅಂದಾಜು 370 ಸಾವು. 1100 ಜನ ಗಾಯಾಳುಗಳು) ಪಂಜಾಬಿನ ಖ್ಯಾತ ಸಾಹಿತ್ಯಕಾರ ನಾನಕಸಿಂಗ್ ತಮ್ಮ ಒಂದು ನೀಳ್ಗವನದಲ್ಲಿ ಈ ಘಟನೆಯನ್ನು "ಖೂನಿ ಬೈಸಾಕಿ" (ರಕ್ತಸಿಕ್ತ ಬೈಸಾಕಿ) ಎಂದರು. ಈ ಭೀಕರ ಹತ್ಯಾಕಾಂಡ ನಡೆದು ಇಂದಿಗೆ 100 ವರ್ಷಗಳಾದವು. ಈ ಅಮಾನುಷ ಘಟನೆ ಅಂದು ಇಡೀ ದೇಶವನ್ನೇ ಬೆಚ್ಚಿ ಬೀಳಿಸಿತು.

ಅದು ಮಹಾತ್ಮಾಗಾಂಧಿ ಸ್ವಾತಂತ್ರ್ಯ ಆಂದೋಲನದ ನೇತಾರರಾಗಿ ಮೂಡಿ ಬಂದಿದ್ದ ಸಮಯ. 1918 ರಲ್ಲಿ ಪ್ರಥಮ ಜಾಗತಿಕ ಯುದ್ಧ ಮುಗಿದಿತ್ತು. ಬ್ರಿಟಿಷರ ಪರವಾಗಿ ಸೈನ್ಯದಲ್ಲಿದ್ದ ಸಾವಿರಾರು ಭಾರತೀಯ ಸೈನಿಕರು ಕೆಚ್ಚದೆಯಿಂದ ಹೋರಾಡಿದ್ದರು. ಆದರೂ ಯುದ್ಧಾನಂತರ ಸ್ವಯಮಾಡಳಿತ ಹಕ್ಕು ಸಿಗಬಹುದೆಂಬ ದೇಶದ ನಂಬಿಕೆ ಹುಸಿಯಾಯಿತು. ಬದಲಿಗೆ ಸಿಕ್ಕಿದ್ದು ಸ್ವಾತಂತ್ರ್ಯ ಹೋರಾಟವನ್ನು ಹತ್ತಿಕ್ಕಲು "ರೌಲತ್ ಆ್ಯಕ್ಟ್" ಎಂಬ ಕರಾಳ ಶಾಸನ.

1919 ಮಾರ್ಚ ತಿಂಗಳಲ್ಲಿ ಜಾರಿಗೆ ಬಂದ ಕರಾಳ ರೌಲತ್ ಕಾನೂನಿಗೆ ದೇಶಾದ್ಯಂತ ಗಾಂಧೀಜಿ ನೇತೃತ್ವದಲ್ಲಿ ನಡೆಯುತ್ತಿದ್ದ ಚಳುವಳಿಗಳು ಕಾರಣವಾಗಿದ್ದವು. ಬ್ರಿಟಿಷ ನ್ಯಾಯಾಧೀಶ ರೌಲತ್ ನ ಅಧ್ಯಕ್ಷತೆಯಲ್ಲಿ 1917 ರಲ್ಲಿ ಒಂದು ಸಮಿತಿ ರಚಿಸಲಾಯಿತು. 1918 ರಲ್ಲಿ ಈ ಸಮಿತಿಯು ಸರಕಾರಕ್ಕೆ ತನ್ನ ವರದಿ ಸಲ್ಲಿಸಿತು. ಈ ವರದಿಯು ರೌಲತ್ ಕಾಯ್ದೆ ಎಂಬ ಹೆಸರಿನಲ್ಲಿ ಮಾರ್ಚ 1919 ನಲ್ಲಿ ಜಾರಿಗೆ ಬಂತು. ಯಾವುದೇ ವಾರೆಂಟ್ ಇಲ್ಲದೆ ಶಂಕಿತ ಅಪರಾಧಿಗಳ ಸ್ಥಳ ಶೋಧಿಸಿ ಬಂಧಿಸುವದಕ್ಕೆ, ಯಾವುದೇ ವಿಚಾರಣೆ ನಡೆಸದೆ ಶಂಕಿತರನ್ನು ಅನಿರ್ದಿಷ್ಟಕಾಲ ಬಂಧನದಲ್ಲಿಡುವುದಕ್ಕೆ ಈ ಕಾನೂನಿನಿಂದ ಅವಕಾಶವಾಯಿತು.

ಈ ಕರಾಳ ಕಾನೂನನ್ನು ಇಡೀ ದೇಶ ಉಗ್ರವಾಗಿ ಪ್ರತಿಭಟಿಸಿತು. ಆ ವೇಳೆಗೆ ಕಾಂಗ್ರೆಸ್ಸಿನ ಹಾಗೂ ದೇಶದ ನಿರ್ವಿವಾದಿ ನಾಯಕರಾಗಿದ್ದ ಗಾಂಧೀಯವರು ವೈಸರಾಯನ್‌ನಾಗಿದ್ದ ಚೇಮ್ಸ್‌ಫರ್ಡನಿಗೆ ಪತ್ರ ಬರೆದು ಈ ಕರಾಳ ಕಾನೂನನ್ನು ವಾಪಸ್ ಪಡೆಯಬೇಕೆಂದು ಆಗ್ರಹಿಸಿದರು. ಬ್ರಿಟಿಷ ಪ್ರಭುತ್ವ ಇದಾವುದನ್ನು ಗಮನಕ್ಕೆ ತೆಗೆದುಕೊಳ್ಳದೆ ತನ್ನ ದಮನಕಾರಿ ನೀತಿಗೆ ಕಟಿಬದ್ಧವಾಗಿತ್ತು.

ಗಾಂಧೀಯವರು 1919 ರ ಏಪ್ರಿಲ್ 6 ರಂದು ಅಖಿಲ ಭಾರತ ಹರತಾಳ ಮತ್ತು ಕಾಯ್ದೆ ಭಂಗಕ್ಕೆ ಕರೆ ನೀಡಿದರು. ಇಡೀ ಭಾರತ ಒಂದಾಗಿ ಮಹಾತ್ಮರ ಕರೆಗೆ ಓಗೊಟ್ಟಿತು. ಹರತಾಳ ಭಾರೀ ಯಶಸ್ವಿಯಾಯಿತು.

ಇದರಿಂದ ಕುಪಿತಗೊಂಡ ಬ್ರಿಟಿಷ ಸರಕಾರದ ನೀಚ ಹಾಗೂ ರಾಕ್ಷಸಿ ಕೃತ್ಯಗಳು ಪಂಜಾಬಿನಲ್ಲಿ ಹೆಚ್ಚು ಪ್ರಕಟಗೊಂಡವು. ಅಲ್ಲಿನ ಇಬ್ಬರು ಪ್ರಮುಖ ನಾಯಕರಾಗಿದ್ದ ಡಾ॥ ಸತ್ಯಪಾಲ ಹಾಗೂ ಡಾ॥ ಕಿಚಲೂರನ್ನು ಏಪ್ರೀಲ್ 10 ರಂದು ದಸ್ತಗೀರಿ ಮಾಡಿದ್ದು ಜನತೆಯನ್ನು ಕೆರಳಿಸಿತು. ಚಳುವಳಿಗಾರರು ರೊಚ್ಚಿಗೆದ್ದು ಐವರು ಯೂರೋಪಿಯನ್ನರನ್ನು ಕೊಂದು ಕಟ್ಟಡಗಳಿಗೆ ಬೆಂಕಿ ಇಟ್ಟರು. ಪರಸ್ಥಿತಿ ಉಲ್ಬಣಗೊಂಡಿದ್ದರಿಂದ ಜನರಲ್ ಡಾಯರ್‌ನನ್ನು ಪರಿಸ್ಥಿತಿ ನಿಯಂತ್ರಿಸಲು ಅಮೃತಸರಕ್ಕೆ ಕರೆಸಲಾಯಿತು.

ಪಂಜಾಬಿನ ಲೆಫ್ಟಿನೆಂಟ್ ಗೌರ್ನರ್ ಸರ್ ಮೈಕಲ್ ಓಡ್ವಾಯರ್ ಮತ್ತು ಜನರಲ್ ಡಾಯರ್ ಇಬ್ಬರೂ ಕಟ್ಟಾ ಸಾಮ್ರಾಜ್ಯವಾದಿಗಳಾಗಿದ್ದು, ಜನರನ್ನು ಅಮಾನುಷವಾಗಿ ಸದೆ ಬಡಿದರೆ ಭಾರತೀಯರು ಸ್ವಾತಂತ್ರ್ಯ ಆಂದೋಲವನ್ನು ಕೈಬಿಡುತ್ತಾರೆಂದು ನಂಬಿದ್ದರು. ಅಮೃತಸರದಲ್ಲಿ ಯಾವುದೇ ರಾಜಕೀಯ ಸಭೆ, ಮೆರವಣಿಗೆ ನಡೆಸಬಾರದೆಂದು ಡಾಯರ್ ಆದೇಶ ಹೊರಡಿಸಿದ.

ಆದರೆ ಅಮೃತಸರದ ಕಾಂಗ್ರೇಸ್ ನಾಯಕರು ಸರಕಾರದ ದಮನಕಾರಿ ನೀತಿ ಕಾರ್ಯಕ್ರಮವನ್ನು ವಿರೋಧಿಸಲು ಏಪ್ರೀಲ್ 13 ರಂದು ಸಾರ್ವಜನಿಕ ಸಭೆಯನ್ನು ಜಲಿಯನ್ ವಾಲಾಬಾಗ್‌ನಲ್ಲಿ ಏರ್ಪಡಿಸಿದ್ದರು. ಈ ಬೃಹತ್ ಸಭೆಯಲ್ಲಿ 20 ಸಾವಿರ ಜನತೆ ಪಾಲ್ಗೊಂಡಿತ್ತು. ತನ್ನ ಆಜ್ಞೆಯನ್ನು ಉಲ್ಲಂಘಿಸಿ ನೆರೆದ ಜನರನ್ನು ಉಗ್ರವಾಗಿ ಶಿಕ್ಷಿಸಲು, ತಕ್ಕ ಪಾಠ ಕಲಿಸಲು ಡಾಯರ್ ತೀರ್ಮಾನಿಸಿದ. ತನ್ನ ಪಡೆಗಳೊಟ್ಟಿಗೆ ಆಗಮಿಸಿದ ಡಾಯರ್ ಜನರ ಮೇಲೆ ಗುಂಡಿನ ಮಳೆಗರೆಯಲು ಆಜ್ಞಾಪಿಸಿದ.



ಈ ರಾಕ್ಷಸಿ ವರ್ತನೆಯನ್ನು ನಿರೀಕ್ಷಿಸದ ಜನತೆ ಓಡಿ ಹೋಗಲು ಯತ್ನಿಸಿದರೆ ಇದ್ದದೊಂದೇ ಬಾಗಿಲಲ್ಲಿ ಶಸ್ತ್ರ ಸಜ್ಜಿತ ಪಡೆ ನಿಂತಿತ್ತು. ತರಗಲೆಗಳಂತೆ ಜನ ಕೆಳಗುರುಳಿದರು. ಮೈದಾನ ರಕ್ತದಿಂದ ಕೆಂಪಾಯಿತು. ಅಲ್ಲೊಂದು ಭಾವಿ ಇತ್ತು. ಜೀವ ಉಳಿಸಿಕೊಳ್ಳುವ ಭರದಲ್ಲಿ ಆ ಭಾವಿಗೆ ಬಿದ್ದು 120 ಜನ ಪ್ರಾಣ ಕಳೆದುಕೊಂಡರು. ಈ ಭಾವಿಯನ್ನು, ಮೈದಾನದ ಸುತ್ತಲೂ ಇದ್ದ ಕಂಪೌಂಡ ಗೋಡೆ ಮೇಲೆ ಇದ್ದ ಬಂದೂಕಿನ ಗುಂಡುಗಳ ಗುರುತನ್ನು ಇಂದಿಗೂ ಕಾಣಬಹುದು. ನೆರೆದಿದ್ದ ಜನರಲ್ಲಿ ಮಹಿಳೆಯರು, ಮಕ್ಕಳು ಇದ್ದರು.

ಈ ರಾಕ್ಷಸಿ ಕೃತ್ಯ, ಅನಾಗರಿಕ ಹತ್ಯಾಕಾಂಡ ಬ್ರಿಟಿಷರ ಬಗ್ಗೆ ದೇಶದ ಜನರಲ್ಲಿ ಜಿಗುಪ್ಸೆ ಹುಟ್ಟುವಂತೆ ಮಾಡಿತು. ದೇಶಾದ್ಯಾಂತ ಆಕ್ರೋಶ ಬುಗಿಲೆದ್ದಿತು. ಕವಿ ರವೀಂದ್ರರರು ಬ್ರಿಟಿಷರು ತಮಗೆ ಕೊಟ್ಟಿದ್ದ "ಸರ್" ಹುದ್ದೆಯನ್ನು ಮರಳಿಸಿದರು.

ಜಲಿಯನ್ ವಾಲಾಬಾಗ ಘಟನೆ ನಡೆದಾಗ 11 ವರ್ಷದ ಬಾಲಕನಾಗಿದ್ದ ಭಗತಸಿಂಗ್ ಸುದ್ದಿ ಕಿವಿಗೆ ಬೀಳುತ್ತಲೇ ಅಲ್ಲಿಗೆ ಬರಿಗಾಲಲ್ಲೆ ಓಡಿದ. ರಕ್ತಸಿಕ್ತ ಮೈದಾನ ಪ್ರವೇಶಿಸಿದ ಆ ಪುಟ್ಟ ಬಾಲಕ ಬಿಕ್ಕಿ ಬಿಕ್ಕಿ ಅತ್ತ. ಒಂದು ಸೀಸೆಯಲ್ಲಿ ನೆತ್ತರದಿಂದ ತೊಯ್ದ ಮಣ್ಣನ್ನು ತುಂಬಿ ಮನೆ ಕಡೆ ಹೊರಟ. ಈ ಘಟನೆ ಅವನ ಬದುಕಿನ ದಿಕ್ಕನ್ನು ನಿರ್ಧರಿಸಿತ್ತು. (ಈ ನೆತ್ತರದಿಂದ ತೊಯ್ದ ಮಣ್ಣು ತುಂಬಿದ ಸೀಸೆಯನ್ನು ಭಗತಸಿಂಗ್ ಸ್ಮಾರಕ ಸಂಗ್ರಹಾಲಯದಲ್ಲಿ ಕಾಯ್ದು ಇಡಲಾಗಿದೆ).

ಕಟುಕ ಜನರಲ್ ಡಾಯರನ್ ಪಡೆಗಳು ಈ ಹತ್ಯಾಕಾಂಡ ನಡೆಸಿದಾಗ 15 ವರ್ಷದ ಬಾಲಕ ಉದುಮ್‌ಸಿಂಗ್ ಅಲ್ಲಿ ಸ್ವಯಂಸೇವಕನಾಗಿ ಜನರಿಗೆ ಕುಡಿಯುವ ನೀರು ಪೂರೈಸುತ್ತಿದ್ದ. ಗೋಲಿಬಾರಿನ ನಡುವೆ ಹೇಗೂ ಪಾರಾದ. ಆದರೆ ಕಣ್ಣಾರೆ ಕಂಡ ದೃಶ್ಯಗಳು ಆತನ ರಕ್ತ ಕುದಿಯುವಂತೆ ಮಾಡಿದ್ದವು.

ಕಟುಕ ಜನರಲ್ ಡಾಯರ್ 1927 ರಲ್ಲೇ ಸತ್ತಿದ್ದ, ಮೈಕಲ್ ಓಡ್ವಾಯರ್ ಬದುಕಿದ್ದ. ಸರ್ದಾರ ಉದಮ್‌ಸಿಂಗ್ ಲಂಡನಿಗೆ ಹೋಗಿ 1940 ಮಾರ್ಚ 13 ರಂದು ಅಲ್ಲಿ ನಡೆದ ಸಮಾರಂಭವೊಂದರಲ್ಲಿ ಪಾಲ್ಗೊಂಡಿದ್ದ ಓಡ್ವಾಯರ್‌ನನ್ನು ಗುಂಡಿಕ್ಕಿ ಕೊಂದ. 1940 ಜುಲೈ 31 ರಂದು ನಗು ನಗುತ್ತಲೇ ಗಲ್ಲಿಗೇರಿದ.

ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರ: ಸಿಪಿಐ(ಎಂ) ಅಭ್ಯರ್ಥಿಗೆ ಮತ ನೀಡಲು ಕೃಷಿ ಕಾರ್ಮಿಕ ಸಂಘದ ಮನವಿ

ಚಂದ್ರಪ್ಪ ಹೊಸ್ಕೇರಾ

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ಒಂದು ರಾಜಕೀಯ ಪಕ್ಷವಲ್ಲ. ಅದು ಗ್ರಾಮೀಣ ಕೆಲಸಗಾರರ ಒಂದು ಸಮೂಹ ಸಂಘಟನೆ.

ಆದರೆ ಕೃಷಿ ರಂಗದಲ್ಲಿ ಕೂಲಿ ಕೆಲಸ ಮಾಡುವ ಕೃಷಿ ಕಾರ್ಮಿಕರಿಗೆ ಅವರದೇ ಆಗಿರುವ ರಾಜಕೀಯ ಇದೆ. ಅದು ಅವರ ವರ್ಗ ರಾಜಕೀಯ. ಕೂಲಿಕಾರರು ದುಡಿಯುವ ವರ್ಗಕ್ಕೆ ಸೇರಿದವರು. ಕೂಲಿಕಾರರ ವರ್ಗದ ಪರವಾದ ರಾಜಕೀಯ ಪಕ್ಷಗಳನ್ನು ಅವರು ಮತ ನೀಡಿ ಬೆಂಬಲಿಸುತ್ತಾರೆ. ಅವರ ಹಿತವನ್ನು ಕಡೆಗಣಿಸುವ ಪಕ್ಷಗಳನ್ನು ತಿರಸ್ಕರಿಸುತ್ತಾರೆ.

ಬಿಜೆಪಿಯನ್ನು ಸೋಲಿಸಿ:

ದೇಶದ ಐಕ್ಯತೆ, ಕೋಮು ಸೌಹಾರ್ದತೆ, ದೃಷ್ಟಿಯಿಂದ 17 ನೇ ಲೋಕಸಭಾ ಚುನಾವಣೆ ನಮಗೆ ಕೂಲಿಕಾರರಿಗೂ ಬಹಳ ಮಹತ್ವದ ಚುನಾವಣೆಯಾಗಿದೆ. ಹಿಂದೆ ಐದು ವರ್ಷ ಅಧಿಕಾರ ನಡೆಸಿದ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವನ್ನು ಮತ್ತೆ ಅಧಿಕಾರಕ್ಕೆ ತರಬೇಕೊ ಅಥವ ಅದನ್ನು ಅಧಿಕಾರದಿಂದ ಕಿತ್ತೆಸೆಯಬೇಕೊ ಎಂಬುವುದನ್ನು ಕೂಲಿಕಾರರು ತಮ್ಮ ಹಿತ ದೃಷ್ಟಿಯಿಂದ ನಿರ್ಣಯಿಸಬೇಕಾಗಿದೆ.

ಐದು ವರ್ಷ ಅಧಿಕಾರ ನಡೆಸಿದ ಬಿಜೆಪಿ ಸರ್ಕಾರ ವಿಶ್ವಾಸಕ್ಕೆ ಅರ್ಹವಲ್ಲದ, ವಚನ ಭ್ರಷ್ಟ ಸರ್ಕಾರ. 2014ರ ಲೋಕಸಭಾ ಚುನಾವಣೆಯಲ್ಲಿ ಪ್ರಧಾನಿಯಾಗಿ ಆಯ್ಕೆಯಾದ ಮೋದಿಯವರು ಜನತೆಗೆ ಕೊಟ್ಟ ಯಾವ ಒಂದು ಭರವಸೆಯನ್ನೂ ಈಡೇರಿಸಿಲ್ಲ. ವಿದೇಶಗಳಲ್ಲಿ ಬಚ್ಚಿಡಲಾದ ಕಪ್ಪುಹಣವನ್ನು ವಾಪಸ್ ತರಲಿಲ್ಲ. ಪ್ರತಿಯೊಬ್ಬನ ಖಾತೆಗೆ ರೂ 15 ಲಕ್ಷ ಜಮಾ ಮಾಡುವ ಭರವಸೆ ಈಡೇರಿಸಿಲ್ಲ. ವರ್ಷಕ್ಕೆ ಎರಡು ಕೋಟಿ ಉದ್ಯೋಗಗಳನ್ನು ಸೃಷ್ಟಿಸಿ ನಮ್ಮ ನಿರುದ್ಯೋಗಿ ಯುವಜನರಿಗೆ ಉದ್ಯೋಗ ಒದಗಿಸುವ ಪ್ರಯತ್ನ ಮಾಡಲಿಲ್ಲ. ರೈತರ ಸಾಲ ಮನ್ನಾ ಮಾಡಲಿಲ್ಲ. ರೈತರ ಫಸಲಿಗೆ ನ್ಯಾಯವಾದ ಬೆಂಬಲ ಬೆಲೆ ನೀಡಲಿಲ್ಲ. ಈಗ ಬಿಜೆಪಿ ತಮ್ಮ ಪ್ರಣಾಳಿಕೆಯಲ್ಲಿ ಮತ್ತೆ ಹೊಸ ಭರವಸೆಗಳನ್ನು ನೀಡಿ ಇನ್ನೊಂದು ಬಾರಿ ನಮಗೆ ಅಧಿಕಾರ ಕೊಡಿ ಎಂದು ಅಂಗಲಾಚುತ್ತಿದೆ. ಇಂತಹ ವಚನಭ್ರಷ್ಟ ಸರ್ಕಾರದ ಮೇಲೆ ವಿಶ್ವಾಸವಿಡುವ ತಪ್ಪನ್ನು ಕೂಲಿಕಾರರು ಮಾಡಲಾರರು.

ದೇಶದ ಕೃಷಿ ಕೂಲಿಕಾರರು ಹಲವು ಬಾರಿ ದೆಹಲಿಯಲ್ಲಿ ಮತ್ತು ರಾಜ್ಯದ ರಾಜಧಾನಿಗಳಲ್ಲಿ ಪ್ರತಿಭಟನೆಗಳನ್ನು ನಡೆಸಿ ಕೃಷಿ ಕೂಲಿಕಾರರಿಗಾಗಿ ಒಂದು ಸಮಗ್ರಹ ಕಾನೂನನ್ನು ಅಂಗೀಕರಿಸುವಂತೆ ಒತ್ತಾಯಿಸುತ್ತಾ ಬಂದಿದ್ದಾರೆ. ಮೋದಿ ಸರ್ಕಾರ ಕೂಲಿಕಾರರ ಬಗ್ಗೆ ಸ್ವಲ್ಪವೂ ಕಾಳಜಿ ತೋರಲಿಲ್ಲ. ಕೂಲಿಗಾರರ ಯಾತನಾಮಯ ವಲಸೆಯನ್ನು ತಡೆಯಲು ಇರುವಂತಹ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆ ಕಟ್ಟು ನಿಟ್ಟಾಗಿ ಜಾರಿಗೆ ತರುವ ಇಚ್ಛಾಶಕ್ತಿ ತೋರಲಿಲ್ಲ. ಉದ್ಯೋಗ ಖಾತ್ರಿ ಯೋಜನೆ ಗಾಗಿ ನೀಡುವ ಅನುದಾನವನ್ನೂ ಹೆಚ್ಚಿಸಲು ಮುಂದಾಗಲಿಲ್ಲ. ಸಕಾಲದಲ್ಲಿ ರಾಜ್ಯಗಳಿಗೆ ಅನುದಾನ ಬಿಡುಗಡೆ ಮಾಡದೆ, ಕೂಲಿಕಾರರಿಗೆ ತಿಂಗಳಗಟ್ಟಲೆ ಕೂಲಿ ಹಣ ಸಂದಾಯ ಮಾಡದೆ ಪರದಾಡುವಂತೆ ಮಾಡಿದ್ದಾರೆ. ಆದ್ದರಿಂದ ಕೂಲಿಕಾರರು ಯಾವುದೇ ಮುಲಾಜಿಲ್ಲದೆ ಈ ಸಲ ಬಿಜೆಪಿಯನ್ನು ಸೋಲಿಸಬೇಕು ಎಂದು ಸಂಘದ ರಾಜ್ಯ ಸಮಿತಿ ಕರೆ ನೀಡಿದೆ.

ಕೋಮುವಾದವನ್ನು ಹಿಮ್ಮೆಟ್ಟಿಸಿರಿ:

ಬಿಜೆಪಿ ಸರ್ಕಾರ ಕಳೆದ ಐದು ವರ್ಷಗಳಲ್ಲಿ ಶ್ರೀಮಂತರನ್ನು ಶ್ರೀಮಂತರಾಗಿಸಿದೆ. ಬಡವರನ್ನು ಇನ್ನೂ ಬಡವರನ್ನಾಗಿ ಮಾಡಿದೆ. ಶೇಕಡ ಒಂದರಷ್ಟು ಇರುವ ಆಗರ್ಭ ಶ್ರೀಮಂತರ ಆಸ್ತಿ ಶೇಕಡಾ 70 ರಷ್ಟು ಹೆಚ್ಚಾಗಿದೆ. ಕೃಷಿ ಉತ್ಪನ್ನ ಕುಸಿದಿದೆ. ರೈತರ ಸಾಲ ಹೆಚ್ಚಾಗಿದೆ. ಕೂಲಿಕಾರರ ವಲಸೆ ತೀವ್ರವಾಗಿದೆ. ಆದಿವಾಸಿಗಳನ್ನು ಮತ್ತು ಇತರ ಭೂರಹಿತ ಬಡವರನ್ನು ಬಗರ್ ಹುಕ್ಕುಂ ಸಾಗುವಳಿ ಭೂಮಿಯಿಂದ ಹೊರದಬ್ಬುವ ಪ್ರಯತ್ನ ನಡೆಯುತ್ತಿದೆ.

ನಿರುದ್ಯೋಗ ಉಲ್ಬಣಗೊಂಡಿದೆ. ಬೆಲೆಗಳು ಗಗನಕ್ಕೇರಿವೆ. ಸಮರ್ಪಕ ರೇಷನ್ ವ್ಯವಸ್ಥೆ ಇಲ್ಲ. ಇದರಿಂದಾಗಿ ಬಡವರ ಆಕ್ರೋಶ ಸ್ಫೋಟಗೊಳ್ಳುವ ಪರಿಸ್ಥಿತಿ ನಿರ್ಮಾಣ ಆಗಿದೆ. ಜನರು ಸರ್ಕಾರದ ವಿರುದ್ಧ ದಂಗೆ ಹೇಳುವ ಪರಿಸ್ಥಿತಿ ಬೆಳೆದು ಬರುವಂತೆ ಕಾಣುತ್ತಿದೆ.

ಇದನ್ನು ಗಮನಿಸಿದ ಸರಕಾರವನ್ನು ಬೆಂಬಲಿಸುತ್ತಿರುವ ಬಂಡವಾಳಿಗರು ಕೋಮುಗಲಭೆಗಳಿಗೆ ಕುಮ್ಮಕ್ಕು ನೀಡುತ್ತಿದ್ದಾರೆ. ಗೋರಕ್ಷಣೆ ಹೆಸರಿನಲ್ಲಿ ದಲಿತ, ಅಲ್ಪಸಂಖ್ಯಾತರ ಜನಸಮೂಹಗಳ ಮೇಲೆ ದಾಳಿ ಮಾಡಲಾಗುತ್ತಿದೆ. ಮಂದಿರ ವಿವಾದವನ್ನು ಮತ್ತೆ ತೀವ್ರಗೊಳಿಸಲಾಗುತ್ತದೆ. ಮುಸ್ಲಿಂ ಹೆಸರು ಗಳಿರುವ ಕೆಲವು ಸ್ಥಳಗಳ ಹೆಸರುಗಳನ್ನು ಬದಲಾಯಿಸಿ ಕೋಮು ದ್ವೇಷವನ್ನು ಹರಡಲಾಗುತ್ತಿದೆ.

ಕೋಮುದಂಗೆಗಳಿಂದ ನಿತ್ಯ ದುಡಿಯುವ ಬಡವರಿಗೆ ಜೀವನ ನಿರ್ವಹಣೆ ಕಷ್ಟವಾಗುತ್ತದೆ. ಕೂಲಿಕಾರರಿಗೆ ಶಾಂತಿ ಬೇಕು ಯುದ್ಧ ಬೇಡ. ಯುದ್ಧದಿಂದ ಯಾವುದೇ ಸಮಸ್ಯೆಗಳನ್ನು ಇತ್ಯರ್ಥಪಡಿಸಲು ಸಾಧ್ಯವಿಲ್ಲ. ಕೋಮುದ್ವೇಷವನ್ನು ಬೆಳೆಸಿ ರಾಜಕೀಯ ಲಾಭ ಪಡೆಯುವ ಬಿಜೆಪಿಯನ್ನು ಸೋಲಿಸುವುದು ಅಗತ್ಯವಿದೆ. ದಲಿತರ ಮೇಲೆ ದೌರ್ಜನ್ಯಗಳು ಹೆಚ್ಚಾಗಿವೆ. ಮಹಿಳೆಯರಿಗೆ ಬಿಜೆಪಿ ಸರ್ಕಾರದಲ್ಲಿ ರಕ್ಷಣೆಯೇ ಇಲ್ಲದಂತಾಗಿದೆ.

ಜಾತ್ಯತೀತ ಸರ್ಕಾರ ರಚನೆಯಾಗಲಿ :

ಕೋಮುವಾದಿ ಸರ್ಕಾರವನ್ನು ಅಧಿಕಾರದಿಂದ ಕೆಳಗಿಳಿಸಿ ಕೇಂದ್ರದಲ್ಲಿ ಒಂದು ಜಾತ್ಯಾತೀತ ಸರ್ಕಾರವನ್ನು ಅಧಿಕಾರಕ್ಕೆ ತರಲು ಸಾಧ್ಯವಾಗಬೇಕು. ಬಿಜೆಪಿಯನ್ನು ವಿರೋಧಿಸುವ ಜಾತ್ಯಾತೀತ

ಪುಟ 14 ಕ್ಕೆ









ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಬಾಗೇಪಲ್ಲಿಯ ಮಿಟ್ಟೇಮರಿಯಲ್ಲಿ ಸಿಪಿಐ(ಎಂ) ಅಭ್ಯರ್ಥಿ ಎಸ್. ವರಲಕ್ಷ್ಮಿಯವರ ಪರ ನಡೆದ ರೋಡ್ ಶೋ...



ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ದೇವನಹಳ್ಳಿಯಲ್ಲಿ ಬೈಕ್ ರ್‍ಯಾಲಿ ಮೂಲಕ ರೋಡ್ ಶೋ

ರೈತ ವಿರೋಧಿ – ಕೋಮುವಾದಿ ಬಿಜೆಪಿಯನ್ನ ಸೋಲಿಸಿ, ಎಡ ಮತ್ತು ಜಾತ್ಯಾತೀತ ಪಕ್ಷಗಳನ್ನು ಬೆಂಬಲಿಸಿ

ಜಿ.ಸಿ. ಬಯ್ಯಾರೆಡ್ಡಿ, ರಾಜ್ಯ ಅಧ್ಯಕ್ಷರು

ಕೃಷಿ ಹಾಗೂ ದೇಶವನ್ನ ಸಂರಕ್ಷಿಸಿರಿ–ರೈತ ಚಳುವಳಿಯನ್ನು ಬಲಪಡಿಸಿರಿ

ಏಪ್ರಿಲ್ 2019 ರಲ್ಲಿ ನಡೆಯಲಿರುವ ಲೋಕಸಭಾ ಚುನಾವಣೆ, ದೇಶದಲ್ಲಿ ಕೃಷಿಯನ್ನೇ ನಂಬಿ ಜೀವನವನ್ನು ನಡೆಸುತ್ತಿರುವ 'ಅನ್ನದಾತ'ರ ಭವಿಷ್ಯ ನಿರ್ಧರಿಸುವ ತುಂಬಾ ಮಹತ್ವದ ಚುನಾವಣೆಯಾಗಿದೆ. ದೇಶ ಹಿಂದೆಂದೂ ಕಂಡರಿಯದ ಗಂಭೀರ ಕೃಷಿ ಬಿಕ್ಕಟ್ಟನ್ನು ಎದುರಿಸುತ್ತಿದೆ. ಈ ಕೃಷಿ ಬಿಕ್ಕಟ್ಟನ್ನು ಸಣ್ಣ ಪುಟ್ಟ ಕ್ರಮಗಳಿಂದ ಪರಿಹರಿಸಲು ಸಾಧ್ಯವಿಲ್ಲ ಬದಲಿಗೆ ತುಂಬಾ ದೃಡವಾದ ಮತ್ತು ನಿರ್ಣಾಯಕವಾದ ಹಾಗೂ ಸಮಗ್ರವಾದ ಕ್ರಮಗಳನ್ನು ಕೈಗೊಳ್ಳಬೇಕಿದೆ. ಇಂತಹ ಕ್ರಮಗಳನ್ನು ಕೈಗೊಳ್ಳುವ ಇಚ್ಛಾಶಕ್ತಿಯನ್ನು ಬಿಜೆಪಿಯ ಮೋದಿ ಸರ್ಕಾರ ತೋರಲಿಲ್ಲ ಮಾತ್ರವಲ್ಲಾ, ಅದು ಕೃಷಿ ಮತ್ತು ಕೃಷಿಕರ ಬಿಕ್ಕಟ್ಟನ್ನು ಇನ್ನಷ್ಟು ಆಳಗೊಳಿಸಿದುದು ಈ ಐದು ವರ್ಷದ ಅನುಭವವಾಗಿದೆ.

ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣದ ನೀತಿಗಳ ಫಲವಾಗಿ ಜನರ ಆದಾಯ ಹೆಚ್ಚುತ್ತಿಲ್ಲ ಬದಲಿಗೆ, ಪೆಟ್ರೋಲ್–ಡೀಸೆಲ್ ದರ ಏರಿಕೆ, ಸರಕು ಸಾಗಣೆ ಮತ್ತು ಬಸ್ ದರ ಏರಿಕೆ. ಅಗತ್ಯ ಆಹಾರ ಧಾನ್ಯ ಮತ್ತಿತ್ತರೆ ವಸ್ತುಗಳ ಬೆಲೆಗಳು ಗಗನ ಮುಖಿಯಾಗಿ ಸಂಕಟಕ್ಕೀಡು ಮಾಡಿವೆ. ಇದರೊಂದಿಗೆ ಬೀಜ, ರಾಸಾಯನಿಕ ಗೊಬ್ಬರ, ಕ್ರಿಮಿನಾಶಕ ಇತ್ಯಾದಿ ಕೃಷಿ ಲಾಗುವಾಡುಗಳ ಬೆಲೆ ಏರಿಕೆಯಾಗುತ್ತಲೇ ಇವೆ. ಅಗತ್ಯ ವಸ್ತು ಮತ್ತು ಕೃಷಿ ಲಾಗುವಾಡುಗಳನ್ನು ಪಡೆಯಲು ಬಹುತೇಕರಿಗೆ ಬ್ಯಾಂಕ್‌ಗಳು ಅಗತ್ಯ ಸಾಲ ನೀಡುತ್ತಿಲ್ಲ. ಇದರಿಂದಾಗಿ, ರೈತರು, ಕೂಲಿಕಾರರು, ಕಸುಬುದಾರರು, ಸಾಲಕ್ಕಾಗಿ ದುಬಾರಿ ಬಡ್ಡಿ – ಚಕ್ರಬಡ್ಡಿ ಪಡೆಯುವ ಖಾಸಗಿ ಸಾಹುಕಾರರನ್ನು ಅವಲಂಬಿಸುವಂತಾಗಿದೆ. ಇಂತಹ ಸಂಕಷ್ಟದಲ್ಲಿಯೂ ಕೃಷಿಯಲ್ಲಿ ತೊಡಗಿಕೊಂಡರೂ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ಇಲ್ಲವಾಗಿದೆ. ಜೊತೆಗೆ ನಿರಂತರವಾದ ಮಳೆಯ ಅಭಾವವು ರೈತ–ಕೂಲಿಕಾರರನ್ನು ಬರಗಾಲದ ಬಾಧೆಗೆ ದೂಡಿದೆ. ಎಲ್ಲದರಿಂದಾಗಿ ತೀವ್ರ ನಷ್ಟಕ್ಕೆ ಒಳಗಾದ ಬಹುತೇಕ ರೈತರು, ಕೂಲಿಕಾರರು ಸಾಲದ ಸುಳಿಗೆ ಸಿಕ್ಕಿ ನರಳುತ್ತಿದ್ದಾರೆ. ಖಾಸಗಿ ಸಾಲದ ಬಾಧೆಯಿಂದ ಲಕ್ಷಾಂತರ ರೈತರು ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ಹಲವು ಬಡವರು ಹಸಿವಿನ ಸಾವುಗಳಿಗೆ ತುತ್ತಾಗುತ್ತಿದ್ದಾರೆ.ಇದ್ದ ಬದ್ದ ಆಸ್ತಿಗಳನ್ನೆಲ್ಲ ಖಾಸಗಿ ಬಡ್ಡಿ ಸಾಹುಕಾರರ ಮತ್ತು ಭೂ ಮಾಲೀಕರ ಸಾಲಕ್ಕೆ ಮಾರಾಟ ಮಾಡಿ ಲಕ್ಷ ಲಕ್ಷ ಕುಟುಂಬಗಳು ನಗರಗಳಿಗೆ ವಲಸೆ ನಡೆದಿವೆ.

ಈ ಎಲ್ಲದರ ಪರಿಹಾರಕ್ಕಾಗಿ, ಡಾ॥ ಎಂ.ಎಸ್. ಸ್ವಾಮಿನಾಥನ್ ವರದಿಯನ್ವಯ ಬೆಂಬಲ ಬೆಲೆಯ ಖಾತರಿ, ರೈತರು, ಕೂಲಿಕಾರರ ಸಾಲ ಮನ್ನಾ, ವಲಸೆ ತಡೆಗೆ ಉದ್ಯೋಗ ಖಾತರಿ ಯೋಜನೆ ಸಮರ್ಪಕ ಜಾರಿ ಇತ್ಯಾದಿ ಶುಭ ದಿನಗಳ ಘೋಷಣೆ ನೀಡಿ ಅಧಿಕಾರಕ್ಕೆ ಬಂದ ಬಿಜೆಪಿಯ ಮೋದಿ ಸರ್ಕಾರ, ಈ ಎಲ್ಲಾ ಭರವಸೆಗಳನ್ನು ಗಾಳಿಗೆ ತೂರಿ ದೇಶದ ರೈತರು ಮತ್ತು ಕೃಷಿ ಕೂಲಿಕಾರರಿಗೆ ಮಹಾ ದ್ರೋಹವನ್ನು ಬಗೆದಿದ್ದಾರೆ. ಕೃಷಿ ಉತ್ಪನ್ನಗಳ ಉತ್ಪಾದನಾ ವೆಚ್ಚಕ್ಕೆ ಶೇ. 50 ರಷ್ಟು ಲಾಭಂಶ ಸೇರಿಸಿ ಬೆಂಬಲ ಬೆಲೆ ನಿಗದಿ ಮಾಡುವುದನ್ನ ತಿರಸ್ಕರಿಸಿದ್ದಾರೆ. ಗ್ರಾಮೀಣರ ವಲಸೆ ತಡೆಗೆ ಜಾರಿಗೆ ತಂದಿದ್ದ ಉದ್ಯೋಗ ಖಾತ್ರಿ ಯೋಜನೆಗೆ ಅಗತ್ಯ ಹಣಕಾಸನ್ನು ನೀಡುತ್ತಿಲ್ಲ ಮಾತ್ರವಲ್ಲಾ, ಬಾಕಿ ಕೂಲಿ ಹಣವನ್ನ ತಿಂಗಳುಗಳು ಕಳೆದರೂ ಪಾವತಿಸುತ್ತಿಲ್ಲ. ಕೂಲಿಯನ್ನ 600 ರೂಪಾಯಿಗಳಿಗೆ ಮತ್ತು ಕೆಲಸವನ್ನು 200 ದಿನಗಳಿಗೆ ವಿಸ್ತರಿಸುತ್ತಿಲ್ಲ. ಅಲ್ಲಿನ ಭ್ರಷ್ಟಾಚಾರವನ್ನ ತಡೆಯಲು ಕ್ರಮ ವಹಿಸುತ್ತಿಲ್ಲ ಬದಲಿಗೆ ಇಡೀ ಯೋಜನೆಯನ್ನ ದುರ್ಬಲಗೊಳಿಸಲು ಯತ್ನಿಸಿದೆ.

ಬಡವರು, ದಲಿತರು, ಮಹಿಳೆಯರಿಗೆ ನಿವೇಶನ ಮತ್ತು ಕೃಷಿಗಾಗಿ ನೀಡಬೇಕಾದ ಕೋಟ್ಯಾಂತರ ಎಕರೆ ಸರ್ಕಾರಿ ಜಮೀನುಗಳನ್ನು ಬಹುರಾಷ್ಟ್ರೀಯ ಕಂಪನಿಗಳಿಗೆ ಉಚಿತವಾಗಿ ನೀಡಲು, ಭೂ ಬ್ಯಾಂಕುಗಳಿಗೆ ಸೇರ್ಪಡೆ ಮಾಡಲಾಗುತ್ತಿದೆ. ಆದಿವಾಸಿಗಳು ಮತ್ತು ಇತರೆ ಅರಣ್ಯವಾಸಿಗಳಿಗೆ ಅರಣ್ಯ ಹಕ್ಕನ್ನು ನೀಡದೆ, ದೊಡ್ಡ ದೊಡ್ಡ ಕಂಪನಿಗಳ ಗಣಿಗಾರಿಕೆಗೆ ನೀಡಲಾಗುತ್ತಿದೆ. ಕಾರ್ಪೋರೇಟ್ ಕಂಪನಿಗಳಿಗೆ ನೀಡಲು ರೈತರ ಒಪ್ಪಿಗೆ ಇಲ್ಲದೆ ಕೋಟ್ಯಾಂತರ ಎಕರೆ ಬಲವಂತದ ಭೂಸ್ವಾಧೀನಕ್ಕೆ ಕ್ರಮ ವಹಿಸಿದೆ. ಕೋಟ್ಯಾಂತರ ಎಕರೆ ಬೀಳು ಭೂಮಿ ಅಭಿವೃದ್ಧಿ ಪಡಿಸಲು ರೈತರಿಗೆ ಅಗತ್ಯ ನೆರವು ನೀಡದೇ, ಕಾರ್ಪೋರೇಟ್ ಕಂಪನಿಗಳ ಗುತ್ತಿಗೆ ಬೇಸಾಯಕ್ಕೆ ಕೊಡಲಾಗುತ್ತದೆ.



ಮುಕ್ತ ವ್ಯಾಪಾರ ಒಪ್ಪಂದದ ಮೂಲಕ ವಿದೇಶಿ ಕಂಪನಿಗಳ ಅಗ್ಗ ದರದ ಕೃಷಿ ಉತ್ಪನ್ನಗಳನ್ನು ದೇಶದ ಮಾರುಕಟ್ಟೆಗೆ ಲಗ್ಗೆ ಹಾಕಲು ಬಿಟ್ಟು, ರೈತರ ಕೃಷಿ ಉತ್ಪನ್ನಗಳಿಗೆ ಬೆಲೆ ಸಿಗದಂತೆ ಮಾಡಲಾಗಿದೆ. 60 ವಯಸ್ಸು ದಾಟಿದ ರೈತರು, ಕೃಷಿ ಕೂಲಿಕಾರರು,ಕಸಬುದಾರರಿಗೆ ಮಾಸಿಕ ಕನಿಷ್ಠ 6000 ರೂ. ಪಿಂಚಣಿ ನೀಡಿಕೆಯನ್ನು ಪರಿಗಣಿಸಿಲ್ಲ.

ಈ ಎಲ್ಲಾ ಜನ ವಿರೋಧಿ ನಿಲುಮೆಗಳಿಂದಾಗಿ ಗ್ರಾಮೀಣ ಪ್ರದೇಶದಲ್ಲಿ ಒಂದು ಕಡೆ ದೊಡ್ಡ ರೀತಿಯ ಬಡತನ ಇನ್ನೊಂದು ಕಡೆ ಕೆಲವೆ ಜನರ ಕೈಯಲ್ಲಿ ಶ್ರೀಮಂತಿಕೆ ಬೆಳೆದು, ಬಡವರು, ದಲಿತರು, ಮಹಿಳೆಯರು, ಅಲ್ಪಸಂಖ್ಯಾತರ ಮೇಲಿನ ಶ್ರೀಮಂತರ ದೌರ್ಜನ್ಯಗಳು ಹೆಚ್ಚುತ್ತಿವೆ..

ಈ ಎಲ್ಲಾ ಅಂಶಗಳ ಬಗ್ಗೆ ವಿಶೇಷವಾಗಿ ಎಲ್ಲಾ ಕೃಷಿ ಉತ್ಪನ್ನಗಳಿಗೆ "ಉತ್ಪಾದನಾ ವೆಚ್ಚ"ದ ಮೇಲೆ ಕನಿಷ್ಠ ಶೇ. 50 ರಷ್ಟು ಲಾಭವನ್ನು ಸೇರಿಸಿದ 'ಬೆಂಬಲ ಬೆಲೆ ಖಾತರಿ ಕಾಯ್ದೆ' ಮತ್ತು ಸಾಲ ಬೇಕೆನ್ನುವ ರೈತರು ಮತ್ತು ಕೃಷಿ ಕೂಲಿಕಾರರಿಗೆ ಕಡ್ಡಾಯವಾಗಿ ಬ್ಯಾಂಕ್ ಸಾಲವನ್ನು ನೀಡುವ ಹಾಗೂ ವಿಶೇಷ ಸಂದರ್ಭಗಳಲ್ಲಿ ಸಾಲ ಮನ್ನಾ, ಬಡ್ಡಿ ಮನ್ನಾ ಮಾಡುವ ಶಾಶ್ವತ ವ್ಯವಸ್ಥೆಗಾಗಿ 'ಋಣ ಮುಕ್ತ ಕಾಯ್ದೆ'ಗಳ ಖಾಸಗಿ ಮಸೂದೆಗಳನ್ನು ರೈತರ ಪರವಾಗಿ ಪಾರ್ಲಿಮೆಂಟ್‌ನಲ್ಲಿ ಮಂಡಿಸಿ, ಈ ಬಗ್ಗೆ ಚರ್ಚೆ ಮಾಡುವುದರಕ್ಕೆ ಪಾರ್ಲಿಮೆಂಟಿನ ವಿಶೇಷ ಅಧಿವೇಶನವನ್ನು ಕರೆಯಲು ಒತ್ತಾಯ ಮಾಡಿ, ಲಕ್ಷ ಲಕ್ಷ ರೈತರು, ಕೂಲಿಕಾರರು ದೇಶದಾದ್ಯಂತ ಹೋರಾಟಗಳನ್ನು, ವಿಶೇಷವಾಗಿ ಪಾರ್ಲಿಮೆಂಟ್ ಮುಂದೆ ಧರಣಿ ನಡೆಸಿದರೆ, ರೈತ ಪ್ರತಿನಿಧಿಗಳನ್ನು ಕರೆದು ಮಾತನಾಡುವ ಕನಿಷ್ಠ ಸೌಜನ್ಯವನ್ನು ಮೋದಿ ಸರ್ಕಾರ ತೋರಿಸಲಿಲ್ಲ. ಬದಲಿಗೆ, ಹೋರಾಟ ನಿರತ ಮಧ್ಯಪ್ರದೇಶದ ರೈತರ ಮೇಲೆ ಗೋಲಿಬಾರ್ ನಡೆಸಿ ಐವರು ರೈತರನ್ನು ಕೊಂದಿದೆ.

ಕಳೆದ ಐದು ವರ್ಷಗಳ ಕಾಲ, ರೈತರು, ಕೃಷಿ ಕೂಲಿಕಾರರು, ಇತರೆ ದುಡಿಯುವ ಜನ ವಿಭಾಗಗಳ ದುಃಖ ದುಮ್ಮಾನಗಳಿಗೆ ಸ್ಪಂದಿಸದ ಮೋದಿಯವರು, ಅಂಬಾನಿ, ಅದಾನಿಯಂತಹ ದೊಡ್ಡ ದೊಡ್ಡ ಬಂಡವಾಳಶಾಹಿಗಳಿಗೆ ಲಕ್ಷ ಲಕ್ಷ ಕೋಟಿ ರೂ.ಗಳ ಸಾಲಮನ್ನಾ ಮಾಡಿ, ತೆರಿಗೆ ವಿನಾಯಿತಿ ನೀಡಿದ್ದಾರೆ ಮಾತ್ರವಲ್ಲಾ, ಬ್ಯಾಂಕಿಗೆ ನೀಡಬೇಕಾದ ಲಕ್ಷಾಂತರ ಕೋಟಿ ರೂ. ಗಳ ಸಾಲವನ್ನು ಹಿಂತಿರುಗಿ ಬರಲಾರದ ಬಾಕಿ ಎಂದು ಬರೆದುಕೊಂಡಿದ್ದಾರೆ. ಇಂತವರ ಜೊತೆ ಲಕ್ಷ ಲಕ್ಷ ಕೋಟಿ ರೂ.ಗಳನ್ನು ಲಪಟಾಯಿಸುವ ವ್ಯಾಪಾರಿ ಒಪ್ಪಂದಗಳನ್ನು ಕುದುರಿಸುವುದರಲ್ಲಿ ಸಂಪೂರ್ಣವಾಗಿ ನಿರತರಾಗಿದ್ದರು. ರೈತರ ಉದ್ದಾರಕ್ಕಾಗಿ ಎಂದ 'ಪ್ರಧಾನ ಮಂತ್ರಿ ಫಸಲ್ ಭೀಮ ಯೋಜನೆ'ಯು ಅಂಬಾನಿ ಇತ್ಯಾದಿ ಬಹುರಾಷ್ಟ್ರೀಯ ಕಂಪನಿಗಳಿಗೆ ಸೂಪರ್ ಲಾಭಗಳನ್ನು ಮಾಡಿಕೊಟ್ಟಿದೆ. ಮಹಾರಾಷ್ಟ್ರದ ಪರ್ಬಾನಿ ಜಿಲ್ಲೆಯ ರೈತರು ಕಟ್ಟಿದ ಕಂತಿನ ಹಣ 19 ಕೋಟಿ ರೂ., ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಟ್ಟಿದ ಕಂತಿನ ಹಣ 144 ಕೋಟಿ ರೂ. ಸೇರಿ 163 ಕೋಟಿ ರಿಲಯನ್ಸ್ ಕಂಪನಿಗೆ ಪಾವತಿ ಮಾಡಿದರೆ, ಬೆಳೆ ನಷ್ಟಕ್ಕೆ ರೈತರಿಗೆ ನೀಡಿದ ಬೆಲೆ ವಿಮೆಯ ಮೊತ್ತ ಕೇವಲ ಮೂವತ್ತು ಕೋಟಿ ರೂ. ಗಳು ಮಾತ್ರವೇ ಆಗಿವೆ. ಕಂಪನಿಯ ಲಾಭ 133 ಕೋಟಿ ರೂ. ಇದು ಒಂದು ಜಿಲ್ಲೆಯ ಕಥೆಯಾದರೆ, ಇಡೀ ದೇಶದಲ್ಲಿ ಎಷ್ಟು ಸಾವಿರ ಕೋಟಿ ರೂ.ಲೂಟಿ ಮಾಡಿರಬಹುದೆಂದು ಊಹಿಸಬಹುದಾಗಿದೆ. ಇದು 'ಚೌಕಿದಾರ' ಮೋದಿಯ ದೇಶ ರಕ್ಷಣೆಯ ಮಾದರಿ.

ದೇಶದ ಖಜಾನೆಗೆ ಲಾಭ ಮಾಡಿಕೊಡುತ್ತಿದ್ದ ಸಾರ್ವಜನಿಕ ರಂಗದ ದೊಡ್ಡ ದೊಡ್ಡ ಕೈಗಾರಿಕೆಗಳನ್ನ ವಿಮಾನ ನಿಲ್ದಾಣಗಳನ್ನು ಇವರ ಲೂಟಿಗೆ ತೆರೆದಿರುವುದಲ್ಲದೆ, ದೇಶದ ರಕ್ಷಣೆಗೆ ಅಪಾಯವನ್ನುಟು ಮಾಡುವ ರಕ್ಷಣಾ ಸಾಮಾಗ್ರಿಗಳ ತಯಾರಿಕೆಯನ್ನು ಅಮೇರಿಕದ ಬಂಡವಾಳದಾರರಿಗೆ ವಹಿಸಿಕೊಡಲಾಗುತ್ತಿದೆ.

ತಾನು ಭಷ್ಟನಾಗುವುದಿಲ್ಲ ಮತ್ತು ಭಷ್ಟಚಾರ ಮಾಡಲು ಬಿಡುವುದಿಲ್ಲ ಎಂದು ಪ್ರಚಾರ ಗಿಟ್ಟಿಸಿದ ಮೋದಿಯವರು ಅರವತ್ತು ಸಾವಿರ ಕೋಟಿ ರೂಗಳ ರಫೆಲ್ ಯುದ್ಧ ವಿಮಾನ ಖರೀಧಿ ಹಗರಣದ ಆರೋಪ ಹೊತ್ತಿದ್ದಾರೆ. ವಿದೇಶಿ ಹಾಗೂ ಸ್ವದೇಶಿ ಬಂಡವಾಳದಾರರಿಂದ ರಾಜಕೀಯ ಪಕ್ಷಗಳಿಗೆ ಚುನಾವಣಾ ಬಾಂಡುಗಳ ಮೂಲಕ ಸಾವಿರಾರು ಕೋಟಿ ರೂಗಳ ನೆರವು ಪಡೆಯಲು ಅನುಕೂಲ ಮಾಡುವ ಮೂಲಕ ಭ್ರಷ್ಟಾಚಾರವನ್ನು ಕಾನೂನು ಬದ್ಧಗೊಳಿಸಿದ್ದಾರೆ.

ಇಂತಹ ಜನ ಹಾಗೂ ರೈತ ವಿರೋಧಿ ನೀತಿಗಳಿಂದಾಗಿ ದೇಶದಾದ್ಯಂತ ಜನ ಹಾಗೂ ರೈತ ಚಳುವಳಿಯ ವ್ಯಾಪಕಗೊಳ್ಳುತ್ತಿರುವುದನ್ನು ತಡೆಯಲು, ದೇಶದ ಹಲವೆಡೆ ರೈತ ಸಂಘಟನೆಯ ಮೇಲೆ ತೀವ್ರ ಧಾಳಿಯನ್ನು ನಡೆಸಲಾಗಿದೆ. ಸಂಘದ ಕಛೇರಿಗಳನ್ನ ಸುಡಲಾಗುತ್ತಿದೆ. ಕಾರ್ಯಕರ್ತರನ್ನ ಕೊಲ್ಲಲಾಗುತ್ತಿದೆ.

ಅದೇ ರೀತಿ ಜನಚಳುವಳಿಯನ್ನ ಮುರಿಯಲು ಕೋಮುವಾದವನ್ನ ಪ್ರೋತ್ಸಾಹಿಸಲಾಗುತ್ತಿದೆ. "ಧರ್ಮ" "ಜಾತಿ"ಗಳ ಹೆಸರಿನಲ್ಲಿ ವಿಭಜನೆ ಮಾಡಲು ತುಂಬಾ ವ್ಯವಸ್ಥಿತವಾದ ಪಿತೂರಿಗಳನ್ನು ಸರ್ಕಾರವೇ ಬೆಂಬಲಿಸುತ್ತಿದೆ. ಇಂತಹ ಪಿತೂರಿಗಳು ದೇಶದ ಐಕ್ಯತೆ, ಸಮಗ್ರತೆಗೆ ಬೆದರಿಕೆಯಾಗಿವೆ. ಅಲ್ಲದೆ ರಾಜಕೀಯ ಉದ್ದೇಶಗಳಿಗಾಗಿ "ಗೋ" ರಕ್ಷಣೆಯ ಹೆಸರಿನಲ್ಲಿ ಹೈನುಗಾರರು ಮತ್ತು ದಲಿತರ ಮೇಲೆ ಮಾರಾಣಾಂತಿಕ ಹಲ್ಲೆ ನಡೆಸಲು ಗೋ ಸಂರಕ್ಷಕ ಕ್ರಿಮಿನಲ್ ಗ್ಯಾಂಗುಗಳಿಗೆ ಅನುವು ಮಾಡಲಾಗಿದೆ. ಪಶುಸಂಗೋಪನೆ ಮತ್ತು ಹೈನುಗಾರಿಕೆಯಲ್ಲಿ ತೊಡಗಿರುವ ಅಸಂಖ್ಯಾತ ರೈತರಿಗೆ ಇದು ಭಾರಿ ನಷ್ಟವನ್ನು ಉಂಟುಮಾಡುತ್ತಿದೆ. ಕೋಮುವಾದಿ ಕ್ರಿಮಿನಲ್ ಗ್ಯಾಂಗುಗಳು ಜನತೆಯ ಇತರೆ ಪ್ರಜಾಸತ್ತಾತ್ಮಕ ಹಕ್ಕುಗಳಾದ ಮತಾಂತರದ ಹಕ್ಕು, ಆಹಾರದ ಹಕ್ಕು, ಬದುಕುವ ಹಕ್ಕು, ಉದ್ಯೋಗ ಹಾಗೂ ಮೀಸಲಾತಿಯ ಹಕ್ಕು, ವೈವಾಹಿಕ ಹಕ್ಕು, ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕು ಮುಂತಾದವುಗಳ ಮೇಲೆ ಅವ್ಯಾಹತವಾಗಿ ಧಾಳಿ ಮಾಡಲು ಮತ್ತು ಕೊಲೆಗೈಯಲು ಬಿಡಲಾಗಿದೆ. ಇದರಿಂದಾಗಿ ದೇಶದ ಪ್ರಜಾಸತ್ತಾತ್ಮಕ ವ್ಯವಸ್ಥೆಗೆ ಮತ್ತು ಸೌಹಾರ್ದತೆಗೆ ಭಂಗ ಉಂಟಾಗಿದೆ.

ಮೋದಿ ಸರ್ಕಾರ ತನ್ನ ಕೊನೆಯ ದಿನಗಳಲ್ಲಿ ವರ್ಷಕ್ಕೆ 6,000 ರೂ. ರೈತರಿಗೆ ನೆರವು ನೀಡುವಂತಹ ಯೋಜನೆಯೊಂದನ್ನು ಘೋಷಣೆ ಮಾಡಿ ತಾನು ರೈತ ಪರವೆಂದು ತೋರಿಸಲು ಹೊರಟಿದೆ. ಈ ಚುನಾವಣೆಯಲ್ಲಿ ಸೋಲುವ ಭೀತಿಯಿಂದಾಗಿ ರೈತರ ಮತಗಳಿಸುವ ದುರುದ್ದೇಶದಿಂದ ಈ ಆಮಿಷ.

ಇಂಥ ನೀತಿಗಳ ಮೂಲಕ ದೇಶದ ಅಸಂಖ್ಯಾತ ರೈತರು ಮತ್ತು ಕೃಷಿ ಕೂಲಿಕಾರರನ್ನು ಕೃಷಿ ರಂಗದಿಂದ ಹೊರಹಾಕಿ, ಇಡೀ ಕೃಷಿ ಕ್ಷೇತ್ರವನ್ನು ಕಾರ್ಪೋರೇಟ್‌ಕರಣ ಮಾಡಲು ಹೊರಟಿದೆ. ಈ ರೈತ ವಿರೋಧಿ ನೀತಿಗಳ ವಿರುದ್ಧ ರೈತರು ಮತ್ತು ಕೃಷಿ ಕೂಲಿಕಾರರು ದೊಡ್ಡ ರೀತಿಯಲ್ಲಿ ಸಿಡಿದೇಳಬೇಕಿದೆ. ಚಳುವಳಿಗಳನ್ನು ಬಲಪಡಿಸಬೇಕಾಗಿದೆ.

ಈ ಹಿನ್ನೆಲೆಯಲ್ಲಿ ರೈತರು, ಕೃಷಿ ಕೂಲಿಕಾರರು ಮತ್ತು ಗ್ರಾಮೀಣ ಬಡವರನ್ನೂ ಸಂಪೂರ್ಣ ನಿರ್ಲಕ್ಷಿಸಿದ್ದು ಮಾತ್ರವಲ್ಲದೆ ಅಂಬಾನಿ, ಅದಾನಿಯಂತಹ ಶ್ರೀಮಂತರ ಸೇವೆಯಲ್ಲಿ ಸಂಪೂರ್ಣವಾಗಿ ನಿರತವಾಗಿದ್ದ ಮತ್ತು ಸೌಹಾರ್ದತೆಗೆ ಹಾಗೂ ಜಾತ್ಯಾತೀತ ಪ್ರಜಾಸತ್ತಾತ್ಮಕ ವ್ಯವಸ್ಥೆಗೆ ದಕ್ಕೆಯಾಗಿರುವ ಬಿಜೆಪಿಯನ್ನು ನಿರ್ಣಾಯಕವಾಗಿ ಸೋಲಿಸಬೇಕೆಂದು ಮತ್ತು ಎಡ ಪಕ್ಷಗಳ ಅಭ್ಯರ್ಥಿಗಳನ್ನು ಗೆಲ್ಲಿಸಬೇಕೆಂದು ಮತ್ತು ಕೇಂದ್ರದಲ್ಲಿ ಒಂದು ಜಾತ್ಯಾತೀತ ಪರ್ಯಾಯ ಸರ್ಕಾರದ ರಚನೆ ಸಾಧ್ಯವಾಗುವಂತೆ ಮಾಡಬೇಕೆಂದು ರೈತರು ಮತ್ತು ಕೂಲಿಕಾರರಲ್ಲಿ ರೈತ ಸಂಘ ವಿನಂತಿಸುತ್ತದೆ. •




'ಹಾವು ಹಲ್ಲಿಗಳಿಗೆಲ್ಲಾ ಕಣ್ಣು ಕೊಟ್ಟ ದೇವರು – ಎರೆಹುಳುವಿಗೇಕೆ ಕಣ್ಣು ಕೊಡಲಿಲ್ಲ' !!!

–ಕಣ್ಣಿನ ವಿಕಾಸದ ಕಥೆ–

ಆರ್. ರಾಮಕೃಷ್ಣ

ಜ್ಞಾನ ವಿಜ್ಞಾನ



"ಭಗವಂತನ ಸೃಷ್ಟಿಯೇ ವಿಚಿತ್ರ. ಅವನು ಹಾವಿಗೆ ಕಣ್ಣು ಕೊಟ್ಟ, ಆದರೆ ಕಾಲು ಕೊಡಲಿಲ್ಲ. ಅದೇ ಥರ ಸಹಸ್ರಪದಿ ಹುಳುವಿಗೆ ಸಾವಿರ ಕಾಲು ಕೊಟ್ಟ, ಆದರೆ ಕಣ್ಣು ಕೊಡಲಿಲ್ಲ." ಎಂದು ಜನ ಸಾಮಾನ್ಯರು ಯೋಚಿಸುವುದು, ಮಾತನಾಡಿಕೊಳ್ಳುವುದು ಇದೆ. ಇದೇ ರೀತಿಯಾಗಿ ನಾವು **'ಹಾವು ಹಲ್ಲಿಗಳಿಗೆಲ್ಲಾ ಕಣ್ಣು ಕೊಟ್ಟ ದೇವರು – ಎರೆಹುಳುವಿಗೇಕೆ ಕಣ್ಣು ಕೊಡಲಿಲ್ಲ' !!!**

ಎಂದು ಯೋಚಿಸಬಹುದು. ಹಾವು, ಮೀನು, ಹಕ್ಕಿಗಳಿಗೆಲ್ಲ ಕಣ್ಣಿವೆ. ಆದರೆ ಎರೆ ಹುಳುವಿಗೆ ಏಕೆ ಕಣ್ಣಿಲ್ಲ ಎಂದೂ ನಾವು ಚಿಂತಿಸಬಹುದು.

"ಮಾನವ ದೇಹವು ಮೂಳೆ ಮಾಂಸದ ತಟಿಕೆ
ಅದರ ಮೇಲಿದೆ ತೊಗಲಿನ ಹೊದಿಕೆ."


ಇದೊಂದು ಜನಪ್ರಿಯ ಚಿತ್ರಗೀತೆ. ಅಷ್ಟೆ ಅಲ್ಲ. ಮನುಷ್ಯನ ದೇಹ–ಬದುಕು ಮುಂತಾದವುಗಳ ಕುರಿತು ಇರುವ ಇದೊಂದು ತತ್ವಪದದಂತಹ ಹಾಡು ಕೂಡ. ಕಣ್ಣು ಹೇಗೆ ವಿಕಾಸವಾಗಿರಬಹುದು.. ಎಂಬ ಪ್ರಶ್ನೆಗಳ ಬಗೆಗೆ ವಿಜ್ಞಾನ ಏನು ಹೇಳುತ್ತದೆ ಎಂದು ಕೊಂಚ ಚಿಂತಿಸೋಣ.

ಮನುಷ್ಯನಿಗೆ ನಾನು ಅಂಗಾಂಗಗಳಿವೆ. ಕೈಕಾಲುಗಳಿವೆ. ಈ ನಮ್ಮ ಅಂಗಾಂಗಗಳು, ಕೈಕಾಲುಗಳ ಮೇಲೆ, ಮೈ ಮೇಲೆ ದೇಹದೊಳಗಿನ ರಕ್ತ ಮಾಂಸವನ್ನು, ಅಂಗಾಂಗಗಳನ್ನು ರಕ್ಷಿಸುವ ಚರ್ಮದ ಪದರಗಳಿವೆ. ಇದು ತೊಗಲಿನ ಹೊದಿಕೆ. ನಾವು ಗಾಜಿನ ಬಾಟಲಿಯೊಳಗೇನಿದೆ ಎಂದು ನೋಡಬಹುದು. ಆದರೆ ಅದೇ ರೀತಿ ಈ ಚರ್ಮದೊಳಗೆ ಏನಿದೆ ಎಂದು ನಾವು ಬಹುತೇಕ ನೋಡಲು ಆಗುವುದಿಲ್ಲ. ಏಕೆಂದರೆ ನಮ್ಮ ಚರ್ಮ ಪಾರದರ್ಶಕ ಅಲ್ಲ.

ಆದರೆ, ನಮ್ಮ ಕಣ್ಣನ್ನು ನೋಡಿ. ಕಣ್ಣಿನೊಳಗೆ ಮೀನಿನ ದೇಹದಂತಹ ಬಿಳಿಯ 'ಸ್ಕ್ಲೀರ' ಎನ್ನುವ ಭಾಗವಿದೆ. ಅದರ ನಡುವೆ ಗಾಜಿನ ಗೋಲಿಯಂತಹ ಒಂದು ಅಂಗವಿದೆ. ಗೋಲಿಯ ಮೇಲ್ಭಾಗದ ಹೆಸರು 'ಕಾರ್ನಿಯ' ಅಂತ. ಅದರ ಹಿಂದೆ 'ಪಾಪೆ' ಎನ್ನುವ ಸ್ವಲ್ಪ ಒಳಗಿನ ಬೆಳಕಿಂಡಿಯ ಮೂಲಕ ಕಣ್ಣಿನೊಳಕ್ಕೆ ಬೆಳಕು ತೂರಿಕೊಂಡು ಹೋಗಲು ಅವಕಾಶ ಮಾಡಿಕೊಡುವ 'ಕಾರ್ನಿಯಾ' ಎಂಬುದು ಒಂದು ಅದ್ಭುತ ಅಂಗವಾಗಿದೆ. ಅಲ್ಲಿ ಒಳಗೋಡೆಯ ಮೇಲೆ ಬೀಳುವ ಬಿಂಬದ ಮೂಲಕ ಅಲ್ಲಿನ ನರಕೋಶಗಳು ಕಾಣುವ ಚಿತ್ರದ ಬಣ್ಣ, ದೂರ ಆಳ ಆಗಲ ಇತ್ಯಾದಿಗಳನ್ನು ಗ್ರಹಿಸಿ ಮಿದುಳಿಗೆ ರವಾನಿಸುತ್ತದೆ. ಕಣ್ಣಗೋಲಿಯ ಮೇಲೆ ಒಂದು ಚರ್ಮದ ಪದರ ಕಾರ್ನಿಯಾ, ಆ ನಂತರ ಕಣ್ಣಗೂಡಿನೊಳಗೆ ಹೊರಗಿನ ಚಿತ್ರ ಮೂಡಿಸುವ ಮಸೂರ ಮುಂತಾದ ಅದ್ಭುತ ರಚನೆಗಳಿವೆ. ಕಣ್ಣು ಒಂದು ಅದ್ಭುತ ಅಂಗ. ಬೆಳಕು, ನೆರಳು, ಬಣ್ಣಗಳ ರೂಪದ ಈ ದೃಶ್ಯಗಳನ್ನು ಮಿದುಳಿಗೆ ಕೊಂಡೊಯ್ಯುವ 9 ಲಕ್ಷ ಸೂಕ್ಷ್ಮ ಎಳೆಗಳನ್ನು ಕಣ್ಣು ಹೊಂದಿರುತ್ತದೆ.

ಇಲ್ಲಿಮುಖ್ಯವಾಗಿಗಮನಿಸಬೇಕಾದದದ್ದು, ಈ 'ಕಾರ್ನಿಯಾ' ಎಂಬ ಅಂಗ ಅಂದರೆ ಅದನ್ನು ಚರ್ಮ ಎಂದುಕೊಂಡರೆ ನಮ್ಮ ಕೈ, ಕಾಲುಗಳು ಅಥವಾ ಮೈಮೇಲಿನ ಚರ್ಮದಂತಿಲ್ಲ. ಗಾಜಿನ ಗೋಲಿಯಂತೆ ಪಾರದರ್ಶಕವಾಗಿದೆ. 'ಕಾರ್ನಿಯಾ'.!! ಇದೆಂತಹಾ ವಿಸ್ಮಯ.!!!

ಈಗ ನಮಗೆ ಎದುರಾಗುವ ಪ್ರಶ್ನೆ ಏನೆಂದರೆ ನಮ್ಮ ಕಣ್ಣಿನ ಗೋಲಿಯ ಮೇಲೆ ಮಾತ್ರ ತನ್ನ



ಮೂಲಕ ಬೆಳಕು ಹಾದು ಹೋಗಲು ಬಿಡುವಂತಹ ಈ 'ಕಾರ್ನಿಯಾ' ಅನ್ನುವ ಪಾರದರ್ಶಕ ಪದರ, ಮಸೂರ ಇವೆಲ್ಲಾ ಹೇಗೆ ಮೂಡುತ್ತದೆ.!!! ನಮ್ಮ ಕೈ ಕಾಲುಗಳ ಮೇಲೆ ಇರುವಂತಹ ಬೆಳಕು ಹಾಯಗೊಡದ ಚರ್ಮದ ತೊಗಟೆಯೇ ಇಲ್ಲೂ ಯಾಕೆ ಬೆಳೆಯುವುದಿಲ್ಲ.!! ಇದನ್ನು ನಿರ್ದೇಶಿಸುವವರು ಯಾರು??

ಬಸ್ಸು, ಕಾರುಗಳಲ್ಲಿ ದೂರ ಪ್ರಯಾಣ ಮಾಡುವಾಗ ಡ್ರೈವರ್, ಹೊರಡುವ ಮುಂಚೆ ಕಾರು ಅಥವಾ ಬಸ್ಸಿನ ಮುಂಭಾಗದ ಗಾಜಿಗೆ ನೀರು ಎರಚಿ ತೊಳೆಯುವುದನ್ನು ನೋಡುತ್ತೇವೆ. ಗಾಜು ಶುದ್ಧವಾಗಿರಬೇಕು ಧೂಳೂ, ಕಸ–ಕಡ್ಡಿ ಏನೂ ಅಡ್ಡ ಇರಬಾರದು. ಎದುರು ಬರುವುದೆಲ್ಲವೂ ಸ್ಪಷ್ಟವಾಗಿ ಕಾಣಬೇಕು. ನಿಮಗೆ ಗೊತ್ತಿರಲಿ. ನಮ್ಮ ಕಣ್ಣಿನೊಳಗೆ ಸದಾಕಾಲ ಈ ರೀತಿ ನೀರು ಹಾಕಿ ಈ 'ಕಾರ್ನಿಯಾ' ಎಂಬ ಗಾಜನ್ನು ಮತ್ತು ಕಣ್ಣನ್ನು ತೊಳೆಯುವ ಒಂದು ವ್ಯವಸ್ಥೆ ಇದೆ. ನಮ್ಮ ಕಣ್ಣಿನೊಳಗೆ ಮೇಲಿನಿಂದ ಕೆಳಕ್ಕೆ ಸದಾ ನೀರು ಹರಿಯುತ್ತದೆ. ಕಣ್ಣಿನ ಮೇಲೆ ಬಿದ್ದ ಧೂಳು ಕಸ ಇತ್ಯಾದಿಯನ್ನು ತೊಳೆದು ಹಾಕುತ್ತದೆ. ನೀರು ಎಲ್ಲಿಗೆ ಹೋಗುತ್ತದೆ. ಕಣ್ಣಿನೊಳಗಿನಿಂದ ನೀರು ಮೂಗಿನೊಳಕ್ಕೆ ಹರಿಯುತ್ತದೆ. ಅದಕ್ಕೇ ಮನುಷ್ಯ ಅತ್ತಾಗ ಕಣ್ಣಲ್ಲಿ ನೀರು ಬರುವುದಲ್ಲದೇ, ಹಲವಾರು ಸಾರಿ ಮೂಗಿನಲ್ಲೂ ನೀರು ಸುರಿಯುತ್ತದೆ.

ಅತಿಸೂಕ್ಷ್ಮ ಅಂಗವಾದ ಕಣ್ಣಿಗೆ ಬೇರೇನೂ ತಾಗದಂತೆ ಒಂದು ರಕ್ಷಣಾ ಕವಚ ಬೇಕು. ಅಗೋ ಅದಕ್ಕಾಗಿಯೇ ಕಣ್ಣ ರೆಪ್ಪೆ ಸಿದ್ಧವಾಗಿದೆ. ಅಪಾಯದ ಸಾಧ್ಯತೆ ಕಂಡು ಬಂದಾಗ, ಯಾವುದಾದರೂ ಹುಳು ಹುಪ್ಪಟೆಯೋ, ವಸ್ತುವೋ ಕಣ್ಣಿಗೆ ಹತ್ತಿರವಾಗುವುದು ಕಂಡರೆ, ಧೂಳು, ಕಸ ಬೀಳುವ ಸಾಧ್ಯತೆ ಕಂಡರೆ ಕಣ್ಣನ್ನು ಮುಚ್ಚಿ ಬಿಡುತ್ತದೆ ಕಣ್ಣ ರೆಪ್ಪೆ. ಕಣ್ಣು ತೆರೆದು ಕೆಲಸ ಮಾಡುವಾಗ ಮೇಲಿನಿಂದ ಬೀಳಬಹುದಾದ ಕಸ ಕಡ್ಡಿ ಧೂಳು ಇತ್ಯಾದಿಗಳಿಗೆ ಒಂದು ತಡೆ ಇರಬೇಕಲ್ಲ!! ಹೌದು ಬೇಕು. ಅಗೋ ನೋಡಿ ಕಣ್ಣ ರೆಪ್ಪೆಯಲ್ಲಿ ಕಣ್ಣ ಮುಂದಕ್ಕೆ ಚಾಚಿಕೊಳ್ಳುವ ಚಪ್ಪರದಂತಹ ರೆಪ್ಪೆಕೂದಲುಗಳು. !!!

ಇವೆಲ್ಲಾ ವಿಸ್ಮಯಕರ ವ್ಯವಸ್ಥೆಗಳು ಜೀವಿಯಲ್ಲಿ ಬಂದದ್ದು ಹೇಗೆ?

ಇವಕ್ಕೆ 'ಕೋಟ್ಯಾಂತರ ವರ್ಷಗಳ ವಿಕಾಸದ ಹಾದಿಯಲ್ಲಿ ಜೀವಿಗಳು ಹೀಗೆ ವಿಕಾಸ ಹೊಂದಿವೆ...", 'ಸ್ಟ್ರಗಲ್ ಫಾರ್ ಎಕ್ಸಿಸ್ಟೆನ್ಸ್–ಸರ್ವೈವಲ್ ಆಫ್ ಫಿಟ್ಟೆಸ್ಟ್' ಅಂದರೆ "ಅಸ್ತಿತ್ವಕ್ಕಾಗಿ ಹೋರಾಟ–ಬಲಿಷ್ಟರ ಉಳಿವು..." ತತ್ವದಂತೆ ಪರಿಸರಕ್ಕೆ, ಸನ್ನಿವೇಶಕ್ಕೆ ಹೊಂದಿಕೊಂಡ ಯೋಗ್ಯ–ಸಮರ್ಥ ಜೀವಿಗಳ ಉಳಿವು ಅಂತ ಹೇಳಲಾಗುತ್ತದೆ. ಅಂದರೆ – ಬದಲಾಗುತ್ತಾ ಹೋಗುವ ಒಟ್ಟು ಪರಿಸರದಲ್ಲಿ, ಜಗತ್ತಿನಲ್ಲಿ ಜೀವಿಗಳ ನಡುವೆ ಪ್ರಕೃತಿಯಲ್ಲಿ ಉಳಿಯಲು, ಬಾಳಿ ಬದುಕಲು ಹೋರಾಟ ನಡೆಯುತ್ತಲೇ ಬಂದಿದೆ. ಈ ಹೋರಾಟದಲ್ಲಿ ಹೆಚ್ಚು ಸಮರ್ಥವಾದ, ಬಲಿಷ್ಟವಾದ ಪ್ರಾಣಿಗಳು, ಪರಿಸರ ಮತ್ತು ಸನ್ನಿವೇಶಕ್ಕೆ ಯೋಗ್ಯವಾಗಿ ಹೊಂದಿಕೊಳ್ಳುವ ಜೀವಿಗಳು ಉಳಿದುಕೊಂಡು, ಬೆಳೆದುಕೊಂಡು ಬಂದಿವೆ ಎಂಬ ವೈಜ್ಞಾನಿಕ ವಿವರಣೆ ಇದೆ.

ಇಷ್ಟು ಹೇಳಿದರೂ ಕೆಲವರಿಗೆ ಪ್ರಶ್ನೆಗಳು



ಹಾಗೆಯೇ ಉಳಿಯುತ್ತವೆ. ಏನಿದು? ಜೀವಿಗಳಲ್ಲಿ ಮುಂದಿನ ಹಂತದ ವಿಕಾಸ ಹೇಗೆ ಆಗಬೇಕೋ ಅದಕ್ಕೆ ಬೇಕಾದಂತೆ ಪ್ರಾಣಿಗಳಲ್ಲಿ ಅಂಗಾಂಗಗಳು ಅವಯವಗಳು ಬೆಳವಣಿಗೆಗೊಂಡು ವಿಕಾಸ ಹೊಂದುತ್ತವೆಯೇ? ಇವೆಲ್ಲಾ ಹೀಗೆ ಹೀಗೆ ಇರಲಿ ಎಂದು ಪ್ರಾಣಿ, ಪಕ್ಷಿ ಲೋಕವನ್ನು, ಜಗತ್ತಿನ ಎಲ್ಲವನ್ನೂ ಯಾರೋ ನಿರ್ಧರಿಸಿ ಉಳಿಯಿಂದ ಕೆತ್ತಿ ಇಟ್ಟಂತೆ ಇದೆಯಲ್ಲ.!! ಕುಂಚದಿಂದ ವರ್ಣ ಚಿತ್ರಗಳನ್ನು ಬರೆದಂತೆ ಇದೆಯೆಲ್ಲಾ ಎಂಬ ಅನುಮಾನಗಳು ಕಾಡುತ್ತವೆ.

ಎರೆಹುಳುವಿಗೆ ಕಣ್ಣಿಲ್ಲವೆ?

ಪ್ರಕೃತಿಯ ವಿಸ್ಮಯಗಳ ಬಗೆಗೆ ಏನೇ ವಿವರಣೆ ಇದ್ದರೂ ಜನಸಾಮಾನ್ಯರ ಮಟ್ಟದಲ್ಲಿ ಇಂದಿಗೂ ಬಗೆ ಹರಿಯದ ಎಷ್ಟೋ ಪ್ರಶ್ನೆಗಳಿವೆ. ಹಲ್ಲಿ, ಹಾವು, ಕಪ್ಪೆ, ಮೊಸಳೆಗೆ ಕಣ್ಣುಗಳನ್ನು ಕೊಟ್ಟ ದೇವರು ರೈತನ ಮಿತ್ರನಾದ ಎರೆಹುಳುವಿಗೆ ಕಣ್ಣು ಕೊಡಲಿಲ್ಲ.? ದೇವರು ಏನೋ ಒಂದು ಉದ್ದೇಶ ಇಟ್ಟುಕೊಂಡೇ ಹಾಗೇ ಮಾಡಿದ್ದಾನೆ. ಈ ಪ್ರಾಣಿಯ ಕೆಲಸ ಇದು. ಅದಕ್ಕೆ ಇಷ್ಟು ಸಾಕು. ಈ ಪ್ರಾಣಿಯನ್ನು ಸೃಷ್ಟಿಸುವುದರ ಉದ್ದೇಶ ಇದು. ಆದ್ದರಿಂದ ಅದಕ್ಕೆ ಈ ಅಂಶ, ಈ ಶಕ್ತಿ, ಈ ಯುಕ್ತಿ ಬೇಕು ಎಂದು ಅದನ್ನು ಸೃಷ್ಟಿಸಿದ್ದಾನೆ. ಅದಕ್ಕೆ ಏನೋ ಒಂದು ಕಾರಣ ಇರಬೇಕು ಎಂದು ಯೋಚಿಸಬಹುದು. ಈ ಜಗತ್ತನ್ನು ಸೃಷ್ಟಿಸಿ ಕಾಯುತ್ತಿರುವ ಒಂದು ಶಕ್ತಿ ಇದೆ ಎಂದು ಯೋಚಿಸುವವರೂ ಇದ್ದಾರೆ.

ಇದೆ !! ಎರೆಹುಳುವಿಗೆ ಮೈ ತುಂಬಾ 'ಕಣ್ಣಿದೆ' !!!–

ಹಾಗೆ ನೋಡಿದರೆ ಹಾವಿಗೆ ಮಾತ್ರ ಕಣ್ಣಿದೆ, ಎರೆಹುಳುವಿಗೆ ಕಣ್ಣಿಲ್ಲ ಎಂಬ ತಿಳುವಳಿಕೆಯೇ ಅಷ್ಟು ಸರಿಯಲ್ಲ. ವೈಜ್ಞಾನಿಕವಾಗಿ ನೋಡಿದರೆ 'ಎರೆಹುಳುವಿಗೆ ಕಣ್ಣಿಲ್ಲ' ಎಂಬ ಗ್ರಹಿಕೆ ಸರಿಯಾದುದಲ್ಲ. ಮನುಷ್ಯರಿಗೆ, ಹಸು–ಎಮ್ಮೆ, ಕೀಟ–ಕಪ್ಪೆಗಳಿಗೆ ಇರುವಂತಹ ಕಣ್ಣುಗಳು ಎರೆಹುಳುವಿಗೆ ಇಲ್ಲ. ಆದರೆ ಎರೆಹುಳುವಿನ ಮೈ ಮೇಲೆ, ಮೈ ತುಂಬಕ್ಕೂ ಬೆಳಕನ್ನು ಗ್ರಹಿಸುವ ಜೀವಕೋಶಗಳಿವೆ. ತಾವು ಇತರ ಪ್ರಾಣಿ–ಪಕ್ಷಿಗಳಿಗೆ ಆಹಾರವಾಗಿ ಸಿಕ್ಕಿಕೊಂಡು ಬಿಡುವ ಅಪಾಯವನ್ನು ತಪ್ಪಿಸಲು ಸಾಮಾನ್ಯವಾಗಿ ಎರೆಹುಳುಗಳು ರಾತ್ರಿಹೊತ್ತಿನಲ್ಲಿ ಮಣ್ಣಿನಲ್ಲಿ ಹೊರಬಂದು ಕೊಳೆಯುತ್ತಿರುವ ಎಲೆ, ಸಸ್ಯಗಳ ಅವಶೇಷ ಇತ್ಯಾದಿಗಳನ್ನು ಮತ್ತು ಮಣ್ಣನ್ನು ಸಹ ತಿಂದು ದೇಹದಿಂದ ಹೊರಹಾಕುತ್ತವೆ. ಎರೆಹುಳುಗಳು ಬೆಳಕನ್ನು ಗ್ರಹಿಸುವ ತಮ್ಮ ಮೈ ಮೇಲಿನ ಜೀವಕೋಶಗಳ ಸಹಾಯದಿಂದ ಬೆಳಕಿನ ಪ್ರಮಾಣವನ್ನು ಅಂದಾಜಿಸುತ್ತವೆ. ಅಂದರೆ ಈಗ ಹಗಲೋ, ರಾತ್ರಿಯೋ, ಕಡುಬಿಸಿಲಿನ ಮಧ್ಯಾನ್ಹವೋ, ಸಂಜೆಯೋ ಅಂದಾಜು ಮಾಡಬಲ್ಲವಾಗಿವೆ. ಎರೆಹುಳುವಿಗೆ ಬದುಕಿಗೆ ಅಗತ್ಯವಾದ ಕಣ್ಣುಗಳಂತಹ ಕೋಶ ಅಥವಾ ಕಣ್ಣು ಆ ಪ್ರಾಣಿಗೆ ಇದೆ.

ನಾವು ನಮಗಿರುವ ಸ್ವರೂಪದ ಕಣ್ಣನ್ನು ಮಾತ್ರ ಕಣ್ಣು ಎಂಬುದನ್ನು

ಪುಟ 14 ಕ್ಕೆ

ಕಾರ್ಪೊರೇಟ್ ಚುನಾವಣಾ ನಿಧಿ ನೀಡಿಕೆಯಲ್ಲಿ ಪಾರದರ್ಶಕತೆಯತ್ತ ಸುಪ್ರಿಂ ಕೋರ್ಟ್ ನಡೆ

ಚುನಾವಣಾ ಬಾಂಡ್ ಕುರಿತ ಮಧ್ಯಂತರ ಆದೇಶದ ಬಗ್ಗೆ ಸಿಪಿಐ(ಎಂ) ಪೊಲಿಟ್‌ಬ್ಯುರೊ

ಮೋದಿ ಸರಕಾರದ ಚುನಾವಣಾ ಬಾಂಡ್ ಯೋಜನೆಯನ್ನು ಪ್ರಶ್ನಿಸಿದ ಅರ್ಜಿಗಳ ವಿಚಾರಣೆಗಳ ಸಂದರ್ಭದಲ್ಲಿ ದೇಶದ ಸರ್ವೋಚ್ಚ ನ್ಯಾಯಾಲಯ ಎಪ್ರಿಲ್ 12ರಂದು ಒಂದು ಮಧ್ಯಂತರ ಆದೇಶವನ್ನು ನೀಡಿದ್ದು, ಇದು ಸಕಾರಾತ್ಮಕವಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಸಂಸತ್ತಿನಲ್ಲಿ ಸರಿಯಾದ ಮತ್ತು ಸಮಗ್ರವಾದ ಚರ್ಚೆಯಿಲ್ಲದೆ, ಈ ಕುರಿತ ಕಾನೂನಿನಲ್ಲಿ ಬದಲಾವಣೆಗಳನ್ನು ಅವಸರವಸರವಾಗಿ ಮುಂದೊತ್ತಲಾಯಿತು. ಇದರ ಉದ್ದೇಶ ರಾಜಕೀಯ ಪಕ್ಷಗಳಿಗೆ, ವಿಶೇಷವಾಗಿ ಚುನಾವಣೆಗಳ ಸಂದರ್ಭದಲ್ಲಿ ಕಾರ್ಪೊರೇಟ್ ವಂತಿಗೆಗಳಿಗೆ ಇರುವ ಮಿತಿಗಳನ್ನು ತೆಗೆಯುವುದೇ ಆಗಿತ್ತು. ಈ ಬದಲಾವಣೆಗಳು ಈ ಇಡೀ ವ್ಯವಸ್ಥೆಯನ್ನು ಚಮಚಾ ಬಂಡವಾಳಶಾಹಿಗೆ ಈಡು ಮಾಡಿ ಅದಕ್ಕೆ ಪ್ರತಿಯಾಗಿ ಆಳುವ ಪಕ್ಷದಿಂದ ಪ್ರಯೋಜನಗಳನ್ನು ಗಿಟ್ಟಿಸುವುದಕ್ಕೆ ಒಂದು ಸ್ಪಷ್ಟ ಆಧಾರ ಕಲ್ಪಿಸಲಿಕ್ಕಾಗಿ ಎಂದು ಗಮನಿಸಿರುವ ಪೊಲಿಟ್ ಬ್ಯುರೊ ನಿಧಿ ನೀಡಿಕೆಯನ್ನು ಪಾರದರ್ಶಕಗೊಳಿಸುವುದಕ್ಕೆ ಸರಕಾರದ ಬದ್ಧ ವಿರೋಧವಿರುವುದನ್ನು ಸರ್ವೋಚ್ಚ ನ್ಯಾಯಾಲಯದಲ್ಲಿ ಅಟಾರ್ನಿ ಜನರಲ್ ಅವರ ವಾದ ಸ್ಪಷ್ಟವಾಗಿ ತೋರಿಸಿದೆ ಎಂದಿದೆ. ಅಟಾರ್ನಿ ಜನರಲ್ ಅವರು "ಎಲ್ಲಿಂದ ಹಣ ಬರುತ್ತದೆ ಎಂಬುದು ಮತದಾರರಿಗೆ ಬೇಕಿಲ್ಲ. ಪಾರದರ್ಶಕತೆ ದೇಶದ ಒಂದು ಮಂತ್ರವೆಂದು ಕಾಣಬೇಕಿಲ್ಲ" ಎಂದು ಹೇಳಿದರು!.

ಎಪ್ರಿಲ್ 12ರ ಮಧ್ಯಂತರ ತೀರ್ಪು, ರಾಜಕೀಯ ಪಕ್ಷಗಳು ಚುನಾವಣಾ ಬಾಂಡ್‌ಗಳಿಂದ ಬಂದಿರುವ ತಮ್ಮಸಂಗ್ರಹವನ್ನು ಮತ್ತು ಅದರ ವಿವರಗಳನ್ನು ಚುನಾವಣಾ ಆಯೋಗಕ್ಕೆ ಮೇ 30ರೊಳಗೆ ಸೀಲ್ ಆದ ಲಕೋಟೆಗಳಲ್ಲಿ ಸಲ್ಲಿಸಬೇಕು ಎಂದು ಆದೇಶಿಸುವ ಮೂಲಕ ಇದರಲ್ಲಿ ಸ್ವಲ್ಪ ಮಟ್ಟಿನ ಹೊಣೆಗಾರಿಕೆಯನ್ನು ತಂದಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಅಭಿಪ್ರಾಯ ಪಟ್ಟಿದೆ. ಈ ಪ್ರಶ್ನೆಯ ಗಂಭೀರತೆಯಿಂದಾಗಿ ಮತ್ತು ಅದು ನಮ್ಮ ಪ್ರಜಾಪ್ರಭುತ್ವದ ಸ್ವರೂಪದ ಮೇಲೆಯೇ ಹೊಂದಿರುವ ಪರಿಣಾಮದಿಂದಾಗಿ ಈ ವಿಷಯದಲ್ಲಿ ಹೆಚ್ಚು ಆಳವಾದ ಪರೀಕ್ಷಣೆ ಮಾಡಲಾಗುತ್ತದೆ ಎಂದೂ ಈ ಮಧ್ಯಂತರ ಆದೇಶ ಆಶ್ವಾಸನೆ ನೀಡಿದೆ.

ಈ ಮಧ್ಯಂತರ ಆದೇಶವೇ ಪ್ರಧಾನ ಮಂತ್ರಿ ಮೋದಿ, ಹಣಕಾಸು ಮಂತ್ರಿ ಅರುಣ್ ಜೇಟ್ಲಿ ಮತ್ತು ಬಿಜೆಪಿ ತಳೆದಿರುವ ನಿಲುವನ್ನು ಧ್ವಂಸ ಮಾಡಿದೆ ಎಂದು ಪೊಲಿಟ್ ಬ್ಯುರೊ ಸಕಾರಾತ್ಮಕವಾಗಿ ಟಿಪ್ಪಣಿ ಮಾಡಿದೆ. ಇವರೆಲ್ಲ ಅಪಾರದರ್ಶಕವಾದ, ಗುಪ್ತ ಚುನಾವಣಾ ಬಾಂಡ್ ಗಳಿಗಾಗಿ ಅದನ್ನು ಒಂದು ಹಣ ಮಸೂದೆಯಾಗಿ ತೂರಿಸಿದರು. ಆದರೆ ನ್ಯಾಯಾಲಯ ಪಾರದರ್ಶಕತೆ ಚುನಾವಣಾ ನಿಧಿ ನೀಡಿಕೆಯ ಆಧಾರಭೂತ ನೀತಿ ಎಂದು ಸ್ಪಷ್ಟವಾಗಿ ಹೇಳಿದೆ. ಜನಗಳಿಗೆ ಯಾವ ರಾಜಕೀಯ ಪಕ್ಷ ಯಾರಿಂದ ಎಷ್ಟು ಹಣವನ್ನು ಪಡೆದಿದೆ ಎಂದು ತಿಳಿಯುವ ಹಕ್ಕು ಇದೆ ಎಂದು ಈ ಮೂಲಕ ಸ್ಪಷ್ಟಗೊಳಿಸಲಾಗಿದೆ.

ಸಿಪಿಐ(ಎಂ) ಕೂಡ ಅರ್ಜಿದಾರನಾಗಿರುವ ಕಾನೂನು ಸಮರ ಸದ್ಯಕ್ಕೆ ಸ್ವಲ್ಪ ಸಕಾರಾತ್ಮಕ ಫಲಿತಾಂಶ ನೀಡಿದೆ ಎಂದು ತೃಪ್ತಿ ವ್ಯಕ್ತಪಡಿಸಿರುವ ಸಿಪಿಐ(ಎಂ) ಪೊಲಿಟ್ ಬ್ಯುರೊ ಚುನಾವಣಾ ನಿಧಿ ಸಂಗ್ರಹವನ್ನು ಸಂಪೂರ್ಣವಾಗಿ ಪಾರದರ್ಶಕಗೊಳಿಸಲು ಮತ್ತು ಕಾರ್ಪೊರೇಟ್ ಪ್ರಭಾವದಿಂದ ಅದನ್ನು ಮುಕ್ತಗೊಳಿಸಲು, ಆಮೂಲಕ ಕಾರ್ಪೊರೇಟ್–ಆಳುವ ಪಕ್ಷದ ಕೂಟವನ್ನು ಮುರಿಯುವತ್ತ ಸಾಗಲು ಈ ಹೋರಾಟವನ್ನು ಮುಂದೊಯ್ಯುವುದಾಗಿ ಪುನರುಚ್ಚರಿಸಿದೆ.

ಕಪ್ಪು ಹಣದ ದಾನಿಗಳು ಇನ್ನು ಈ ದಾರಿಯ ಬಗ್ಗೆ ಭಯ ಪಡುತ್ತಾರೆ–ಯೆಚುರಿ

ಈ ಮಧ್ಯಂತರ ಆದೇಶ ಪ್ರಧಾನ ಮಂತ್ರಿ ಮೋದಿ, ಹಣಕಾಸು ಮಂತ್ರಿ ಅರುಣ್ ಜೇಟ್ಲಿ ಮತ್ತು ಬಿಜೆಪಿ ತಳೆದಿರುವ ನಿಲುವನ್ನು ಧ್ವಂಸ ಮಾಡಿದೆ, ನ್ಯಾಯಾಲಯ ಚುನಾವಣಾ ನಿಧಿ ಸಂಗ್ರಹದಲ್ಲಿ ಪಾರದರ್ಶಕತೆ ಆಧಾರಭೂತ ನೀತಿ ಎಂದು ನಿರ್ಧರಿಸಿದೆ ಎಂದಿರುವ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಬಿಜೆಪಿ ಮುಂದೊತ್ತುತ್ತ ಬಂದಿರುವ ದಾನಿಗಳ ಅನಾಮಧೇಯತೆ ಕೊನೆಗಾಣುತ್ತಿದೆ, ಕಪ್ಪು ಹಣದ ದಾನಿಗಳು ಇನ್ನು ಮುಂದೆ ಈ ಚುನಾವಣಾ ಬಾಂಡಿನ ದಾರಿ ಹಿಡಿಯಲು ಭಯ ಪಡುತ್ತಾರೆ ಎಂದು ಟಿಪ್ಪಣಿ ಮಾಡಿದ್ದಾರೆ.

ಇಂದು ಚುನಾವಣಾ ಆಯೋಗದ ಬಳಿ ಮಾಹಿತಿಯಿದೆ. ನಾಳೆ ಸಾರ್ವಜನಿಕರೂ ಅದನ್ನು ಪಡೆಯುತ್ತಾರೆ ಎಂದು ಮುಂದುವರೆದು ಅವರು ಹೇಳಿದ್ದಾರೆ.

2017–18ರಲ್ಲಿ ಬಿಜೆಪಿಯ ಒಟ್ಟು 1027 ಕೋಟಿ ರೂ.ಗಳಲ್ಲಿ ಮಾರ್ಚ್ 2018ರಲ್ಲೇ ಆರಂಭವಾದ ಚುನಾವಣಾ ಬಾಂಡ್ ಮೂಲಕವೇ 210 ಕೋಟಿ ರೂ.ಗಳನ್ನು ಪಡೆದಿದೆ, ಆ ವೇಳೆಗೆ ಚುನಾವಣಾ ಬಾಂಡ್‌ಗಳಲ್ಲಿ ಸಂಗ್ರಹವಾದ ಒಟ್ಟು ಮೊತ್ತವೇ 215 ಕೋಟಿ ರೂ. ಅಂದರೆ 95%ದ ಸಿಂಹಪಾಲನ್ನು ಬಿಜೆಪಿಯೇ ಗಿಟ್ಟಿಸಿದೆ.

2018ರಲ್ಲಿ ಚುನಾವಣಾ ಬಾಂಡ್‌ಗಳಲ್ಲಿ ಸಂಗ್ರಹವಾದ ಮೊತ್ತ ರೂ.1056 ಕೋಟಿಯಾದರೆ, 2019ರ ಮೂರು ತಿಂಗಳಲ್ಲೇ ಸಂಗ್ರಹವಾದ ಮೊತ್ತ ರೂ. 1716 ಕೋಟಿ. ಕಾರಣ ಸ್ಪಷ್ಟ–ಇದು ಚುನಾವಣಾ ವರ್ಷ. ಇದರಲ್ಲೂ ಬಿಜೆಪಿಯದ್ದೇ ಸಿಂಹಪಾಲು, 90%ಕ್ಕಿಂತಲೂ ಹೆಚ್ಚು ಎಂದೂ ಹೇಳಲಾಗಿದೆ.

"ಸಶಸ್ತ್ರ ಪಡೆಗಳ ರಾಜಕೀಯ ದುರ್ಬಳಕೆ ತಕ್ಷಣವೇ ನಿಲ್ಲಬೇಕು"

ರಾಷ್ಟ್ರಪತಿಗಳಿಗೆ 8 ನಿವೃತ್ತ ಸೇನಾಧಿಪತಿಗಳು ಸೇರಿದಂತೆ 150ಕ್ಕೂ ಹೆಚ್ಚು ನಿವೃತ್ತ ಸೇನಾ ಹಿರಿಯರ ಮನವಿ ಪತ್ರ

ರಫೆಲ್ ವ್ಯವಹಾರದಲ್ಲಿ ಮತ್ತು ಚುನಾವಣಾ ಬಾಂಡುಗಳ ವಿಷಯದಲ್ಲಿ ದೇಶದ ಸರ್ವೋಚ್ಚ ನ್ಯಾಯಾಲಯದಲ್ಲಿ ಮಹತ್ವದ ಹಿನ್ನಡೆಯೊಂದಿಗೆ ಮೋದಿ ಸರಕಾರ ತನ್ನ ಕೊನೆಯ ದಿನಗಳಲ್ಲಿ ಅದರ ಪ್ರಜಾಪ್ರಭುತ್ವ–ವಿರೋಧಿ ನಡೆಗಳಿಗೆ ಕೊನೆಗೂ ಸಾಕಷ್ಟು ಪ್ರತಿರೋಧಗಳನ್ನು ಎದುರಿಸಲಾರಂಭಿಸಿದೆ. ಇದುವರೆಗೆ ಮೆತ್ತಗಿದ್ದ ಚುನಾವಣಾ ಆಯೋಗವೂ, ಕೊನೆಗೂ ಮತದಾನದ ಮೊದಲ ಹಂತದ ವೇಳೆಗಾದರೂ, ನಿವೃತ್ತ ಹಿರಿಯ ಅಧಿಕಾರಿಗಳು ವರ್ಣಿಸಿದ 'ವಿಶ್ವಾಸಾರ್ಹತೆಯ ಬಿಕ್ಕಟ್ಟಿ'ನಿಂದ ತುಸು ಹೊರ ಬಂದಿರುವಂತೆ ಕಾಣುತ್ತಿದೆ. ಮೋದಿ ಕುರಿತ ಸಿನೆಮಾದ ಬಿಡುಗಡೆಯನ್ನು ತಡೆದಿದೆ, ನಮೋಟಿವಿಯಲ್ಲಿ ಪ್ರಮಾಣ ಪತ್ರ ಪಡೆದ ಮೇಲೆಯೇ ಯಾವುದೇ ಪ್ರಸಾರಣ ನಡೆಸುವಂತೆ ನೋಡಿಕೊಳ್ಳಬೇಕೆಂದು ದಿಲ್ಲಿಯ ಮುಖ್ಯ ಚುನಾವಣಾಧಿಕಾರಿಗಳಿಗೆ ಹೇಳಿರುವುದಾಗಿ ವರದಿಯಾಗಿದೆ. ಪುಲ್ವಾಮ, ಬಾಲಕೋಟ್ ಹೆಸರಲ್ಲಿ ಮತನೀಡಬೇಕು ಎಂದು ಪ್ರಧಾನಿಗಳೇ ಹೇಳಿರುವ ಬಗ್ಗೆಯೂ 'ಗಂಭೀರವಾಗಿ' ಪರಿಶೀಲಿಸುತ್ತಿದೆಯಂತೆ.

ಈ ನಡುವೆ ಒಂದು ದೊಡ್ಡ 'ಸ್ಫೋಟ'ವೇ ನಡೆದಂತಾಗಿದೆ. ಮೂವರು ನಿವೃತ್ತ ಭೂಸೇನಾಧಿಪತಿಗಳು, ನಾಲ್ವರು ನೌಕಾಪಡೆಯ ಸೇನಾಧಿಪತಿಗಳು ಮತ್ತು ಒಬ್ಬ ವಾಯುಪಡೆಯ ಸೇನಾಧಿಪತಿಗಳು, ಒಟ್ಟು ಎಂಟು ನಿವೃತ್ತ ಸೇನಾಧಿಪತಿಗಳು ಸೇರಿದಂತೆ, ಈ ಹಿಂದೆ ಸಶಸ್ತ್ರ ಪಡೆಗಳಲ್ಲಿ ಸೇವೆ ಸಲ್ಲಿಸಿದ್ದ 150ಕ್ಕೂ ಹೆಚ್ಚು ಹಿರಿಯರು ಭಾರತದ ಸಶಸ್ತ್ರ ಪಡೆಗಳ ಮಹಾಸೇನಾಧಿಪತಿಯೂ ಆಗಿರುವ ರಾಷ್ಟ್ರಪತಿಗಳಿಗೆ ಒಂದು ಮನವಿ ಪತ್ರ ಬರೆದಿದ್ದಾರೆ, ರಾಜಕೀಯ ಪಕ್ಷಗಳು ತಕ್ಷಣವೇ ಮಿಲಿಟರಿಯನ್ನು, ಮಿಲಿಟರಿ ಸಮವಸ್ತ್ರಗಳು ಅಥವ ಸಂಕೇತಗಳನ್ನು, ಮತ್ತು ಯಾವುದೇ ಮಿಲಿಟರಿ ಕಾರ್ಯಾಚರಣೆಯನ್ನು ರಾಜಕೀಯ ಉದ್ದೇಶಗಳಿಗೆ, ತಮ್ಮ ರಾಜಕೀಯ ಅಜೆಂಡಾಗಳಿಗೆ ಬಳಸುವುದನ್ನು ನಿಲ್ಲಿಸುವಂತೆ ನಿರ್ದೇಶನವನ್ನು ನೀಡಬೇಕು, ನಮ್ಮ ಸಶಸ್ತ್ರ ಪಡೆಗಳ ಜಾತ್ಯತೀತ ಮತ್ತು ರಾಜಕೀಯಾತೀತ ಸ್ವರೂಪವನ್ನು ಕಾಪಾಡಿಕೊಳ್ಳುವಂತೆ ಮಾಡಬೇಕು ಎಂದು ಇದರಲ್ಲಿ ಮನವಿ ಮಾಡಿಕೊಂಡಿದ್ದಾರೆ.

ಈ ಪತ್ರದ ಒಂದು ಪ್ರತಿಯನ್ನು ಚುನಾವಣಾ ಆಯೋಗಕ್ಕೂ ಕಳಿಸಿದ್ದಾರೆ.

ಸಶಸ್ತ್ರ ಪಡೆಗಳ ಸೈನಿಕರು, ನಾವಿಕರು ಮತ್ತು ವಾಯುಸಿಬ್ಬಂದಿ ಭಾರತದ ಸಂವಿಧಾನಕ್ಕೆ ವಿಧೇಯ ರಾಗಿದ್ದಾರೆ ಎಂದು ಆರಂಭದಲ್ಲೇ ಸ್ಪಷ್ಟಪಡಿಸಿರುವ ಈ ಹಿರಿಯ ಸೇನಾಧಿಕಾರಿಗಳು ಇತ್ತೀಚಿನ ದಿನಗಳಲ್ಲಿ, ಅದರಲ್ಲೂ ಚುನಾವಣಾ ಪ್ರಚಾರದ ವೇಳೆಯಲ್ಲಿ ಕಂಡು ಬಂದಿರುವ ಕೆಲವು ಸಂಗತಿಗಳು ನಿವೃತ್ತ ಮತ್ತು ಈಗ ಸೇವೆಯಲ್ಲಿರುವ ಸೇನಾ ಸಿಬ್ಬಂದಿಯಲ್ಲೂ ಆತಂಕವನ್ನು ಮತ್ತು ಅಸಮಾಧಾನವನ್ನು ಉಂಟು ಮಾಡಿವೆ ಎಂದು ರಾಷ್ಟ್ರಪತಿಗಳ ಗಮನಕ್ಕೆ ತಂದಿದ್ದಾರೆ.

"ರಾಜಕೀಯ ಮುಖಂಡರು ಗಡಿಯಾಚೆ ಪ್ರಹಾರದಂತಹ ಮಿಲಿಟರಿ ಕಾರ್ಯಾಚರಣೆಗಳ ಕೀರ್ತಿ ತಮಗೆ ಸೇರಿದ್ದು ಎನ್ನುವಂತಹ ಅಸಾಮಾನ್ಯವಾದ ಮತ್ತು ಸಂಪೂರ್ಣವಾಗಿ ಅಸ್ವೀಕಾರ್ಯವಾದ, ಸಶಸ್ತ್ರ ಪಡೆಗಳನ್ನು 'ಮೋದೀಜೀ ಕೀ ಸೇನಾ' ಎನ್ನುವ ವರೆಗೂ ಹೋಗಿರುವ ಆಚರಣೆಗಳ ಬಗ್ಗೆ ಪ್ರಸ್ತಾವಿಸುತ್ತಿದ್ದೇವೆ. ಇದಲ್ಲದೆ, ಚುನಾವಣಾ ವೇದಿಕೆಗಳು ಮತ್ತು ಪ್ರಚಾರಗಳಲ್ಲಿ ಪಕ್ಷದ ಕಾರ್ಯಕರ್ತರು ಮಿಲಿಟರಿ ಸಮವಸ್ತ್ರಗಳನ್ನು ಧರಿಸಿರುವ, ಸೈನಿಕರ, ವಿಶೇಷವಾಗಿ ಭಾರತೀಯ ವಾಯುಪಡೆಯ ವಿಂಗ್ ಕಮಾಂಡರ್ ಅಭಿನಂದನ್ ವರ್ತಮಾನ್ ಚಿತ್ರಗಳು, ಪೋಸ್ಟರುಗಳನ್ನು ಪ್ರದರ್ಶಿಸಿರುವುದು ಮಾಧ್ಯಮ ಗಳಲ್ಲಿ ಕಾಣ ಬಂದಿವೆ" ಎಂಬುದನ್ನು ರಾಷ್ಟ್ರಪತಿಗಳ ಗಮನಕ್ಕೆ ತಂದಿರುವ ಈ ಪತ್ರ, ನಿವೃತ್ತ ನೌಕಾಪಡೆಯ ಮುಖ್ಯಸ್ಥರೂ ಸೇರಿದಂತೆ ಕೆಲವು ನಿವೃತ್ತ ಸೇನಾಧಿಕಾರಿಗಳು ಚುನಾವಣಾ ಆಯೋಗಕ್ಕೆ ದೂರು ಸಲ್ಲಿಸದ ನಂತರ, ಆಯೋಗ **ಈ ಕುರಿತು ಅಧಿಸೂಚನೆ ಹೊರಡಿಸಿದ ನಂತರವೂ ಇಂತಹ ವರ್ತನೆಗಳು, ಆಚರಣೆಗಳು ಸುಮಾರಾಗಿ ಹಾಗೆಯೇ ಮುಮುದುವರೆದಿದೆ** ಎಂಬುದನ್ನೂ ಇವರು ರಾಷ್ಟ್ರಪತಿಗಳ ಗಮನಕ್ಕೆ ತಂದಿದ್ದಾರೆ.

ಈಗಿರುವ ವಾತಾವರಣದಲ್ಲಿ, ರಾಜಕೀಯ ಪಕ್ಷಗಳು ಮತ್ತು ಅಭ್ಯರ್ಥಿಗಳು 'ಮಾದರಿ ಅಚಾರ ಸಂಹಿತೆ'ಯನ್ನು ಕಡೆಗಣಿಸಿ ವರ್ತಿಸುತ್ತಿರುವಾಗ, ಚುನಾವಣೆಗಳು ಸಮೀಪಿಸಿದಂತೆ ಇವು ಇನ್ನೂ ಹೆಚ್ಚಬಹುದು, ಇದು ಸಶಸ್ತ್ರ ಪಡೆಗಳಲ್ಲಿ ಸೇವೆ ಸಲ್ಲಿಸುತ್ತಿರುವವರ ದಕ್ಷತೆ ಮತ್ತು ಅದರಿಂದಾಗಿ ರಾಷ್ಟ್ರೀಯ ಭದ್ರತೆ ಮತ್ತು ಸಮಗ್ರತೆಗೆ ಧಕ್ಕೆ ತರಬಹುದಾದ್ದರಿಂದ "ನಮ್ಮ ಸಶಸ್ತ್ರ ಪಡೆಗಳ ಜಾತ್ಯತೀತ ಮತ್ತು ರಾಜಕೀಯಾತೀತ ಸ್ವರೂಪವನ್ನು ಕಾಪಾಡಿಕೊಳ್ಳುವಂತೆ ಮಾಡಬೇಕು" ಎಂದು ಈ ಹಿರಿಯರು ಮನವಿ ಮಾಡಿಕೊಂಡಿದ್ದಾರೆ, ರಾಜಕೀಯ ಪಕ್ಷಗಳು ತಕ್ಷಣವೇ ಮಿಲಿಟರಿಯನ್ನು, ಮಿಲಿಟರಿ ಸಮವಸ್ತ್ರಗಳು ಅಥವ ಸಂಕೇತಗಳನ್ನು, ಮತ್ತು ಯಾವುದೇ ಮಿಲಿಟರಿ ಕಾರ್ಯಾಚರಣೆಯನ್ನು ರಾಜಕೀಯ ಉದ್ದೇಶಗಳಿಗೆ, ತಮ್ಮ ರಾಜಕೀಯ ಅಜೆಂಡಾಗಳಿಗೆ ಬಳಸುವುದನ್ನು ನಿಲ್ಲಿಸುವಂತೆ ನಿರ್ದೇಶನವನ್ನು ನೀಡಬೇಕು ಎಂದು ರಾಷ್ಟ್ರಪತಿಗಳನ್ನು ಆಗ್ರಹಿಸಿದ್ದಾರೆ

ಬಿಜೆಪಿ ಸಂಕಲ್ಪ ಪತ್ರ ಯಾನೆ ಚುನಾವಣಾ ಪ್ರಣಾಳಿಕೆ 2019



ವ್ಯಂಗ್ಯಚಿತ್ರ: ಆರ್.ಪ್ರಸಾದ್, ಇಕನಾಮಿಕ್ ಟೈಮ್ಸ್



ವ್ಯಂಗ್ಯಚಿತ್ರ: ಮಂಜುಲ್, ಫಸ್ಟ್ ಪೋಸ್ಟ್

2.1 ಕೋಟಿ ಮಹಿಳೆಯರಿಗೆ ಮತದಾನದ ಹಕ್ಕನ್ನು ನಿರಾಕರಿಸಲಾಗಿದೆ

ಚುನಾವಣಾ ಆಯೋಗಕ್ಕೆ ಮಹಿಳಾ ಸಂಘಟನೆಗಳ ಮೆಮೊ

2019ರ ವೇಳೆಗೆ 18 ವರ್ಷ ದಾಟುವ ಮಹಿಳೆಯರ ಪ್ರಮಾಣ ಪುರುಷರ ಒಟ್ಟು ಜನಸಂಖ್ಯೆಯ 97.2% ಆಗುತ್ತದೆ ಎಂದು 2011ರ ಜನಗಣತಿ ಸೂಚಿಸಿತ್ತು. ಆದರೆ ಚುನಾವಣಾ ಆಯೋಗದ 2019ರ ಅಂಕಿ-ಅಂಶಗಳ ಪ್ರಕಾರ ಇದು 92.7% ಮಾತ್ರ. ಅಂದರೆ ಸುಮಾರು 2.1 ಕೋಟಿ ಅರ್ಹ ಮಹಿಳೆಯರ ಹೆಸರುಗಳನ್ನು ಮತದಾರರಾಗಿ ನೋದಾಯಿಸಲಾಗಿಲ್ಲ. ಈ ಅಂಶವನ್ನು ಮಹಿಳಾ ಸಂಘಟನೆಗಳು ಚುನಾವಣಾ ಆಯೋಗದ ಗಮನಕ್ಕೆ ತಂದಿವೆ.

ಅಂದರೆ ಸರಾಸರಿ ಒಂದು ಲೋಕಸಭಾ ಕ್ಷೇತ್ರದಲ್ಲಿ 38 ಸಾವಿರ ಮಹಿಳೆಯರಿಗೆ ಮತದಾನ ಮಾಡಲಾಗುವುದಿಲ್ಲ. ಈ ರೀತಿ ಮತದಾರರಾಗಿ ನೊಂದಾಯಿಸಲ್ಪಡದ ಮಹಿಳೆಯರ ಪ್ರಮಾಣ ಉತ್ತರಪ್ರದೇಶ, ಮಹಾರಾಷ್ಟ್ರ ಮತ್ತು ರಾಜಸ್ಥಾನದಲ್ಲೇ ಅತಿ ಹೆಚ್ಚು, ಅನುಕ್ರಮವಾಗಿ 68 ಲಕ್ಷ, 23 ಲಕ್ಷ ಮತ್ತು 12 ಲಕ್ಷ. ಅಂದರೆ, ಉತ್ತರಪ್ರದೇಶದಲ್ಲಿ ಪ್ರತಿಯೊಂದು ಲೋಕಸಭಾ ಕ್ಷೇತ್ರದಲ್ಲಿ 85 ಸಾವಿರ ಮಹಿಳೆಯರು ಮತದಾನ ಮಾಡಲಾಗುತ್ತಿಲ್ಲ.

ಮತದಾನದ ಹಕ್ಕು ಇಲ್ಲದಂತೆ ಮಾಡುವ ಈ ಕ್ರಮ ಈ ದೇಶದ ನಾಗರಿಕರಾಗಿ ಅವರ ಪ್ರಜಾಪ್ರಭುತ್ವ ಹಕ್ಕಿನ ಮೇಲೆ ನಡೆದಿರುವ ಹಲ್ಲೆ, ಈ ಅನ್ಯಾಯವನ್ನು ಸರಿಪಡಿಸಲು ಕೂಡಲೇ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘ, ಅಖಿಲ ಭಾರತ ಪ್ರಗತಿಪರ ಮಹಿಳಾ ಸಂಘ, ಭಾರತೀಯ ಮಹಿಳೆಯರ ರಾಷ್ಟ್ರೀಯ ಒಕ್ಕೂಟ, ಅಖಿಲ ಭಾರತ ದಲಿತ ಮಹಿಳಾ ಅಧಿಕಾರ್ ಮಂಚ್, ಗಿಲ್ಡ್ ಆಫ್ ಸರ್ವಿಸ್, ಜಂಟಿ ಮಹಿಳಾ ಕಾರ್ಯಕ್ರಮ, ಯುದ್ಧ ವಿಧವೆಯರ ಸಂಘ ಮತ್ತು ರಾಷ್ಟ್ರೀಯ ದಲಿತ ಮಾನವ ಹಕ್ಕುಗಳ ಪ್ರಚಾರಾಂದೋಲನ ಮುಖ್ಯ ಚುನಾವಣಾ ಆಯುಕ್ತರಿಗೆ ಸಲ್ಲಿಸಿರುವ ಒಂದು ಜಂಟಿ ಮನವಿ ಪತ್ರದಲ್ಲಿ ಆಗ್ರಹಿಸಿವೆ.

'ಬಿಜೆಪಿಗೆ ಮತ ನೀಡಬೇಡಿ'

-ಆತ್ಮಹತ್ಯೆ ಮಾಡಿಕೊಂಡ ಡೆಹ್ರಾಡೂನ್ ರೈತ

ಉತ್ತರಾಖಂಡದ ಡೆಹ್ರಾಡೂನಿನ ದಡ್ಕಿ ಗ್ರಾಮದ 65 ವರ್ಷದ ರೈತ ಈ ಶ್ವರಚಂದ್ ಶರ್ಮ ಎಪ್ರಿಲ್ 9ರಂದು ಆತ್ಮಹತ್ಯೆ ಮಾಡಿಕೊಂಡರು. ಇದು ಅಚ್ಛೇ ದಿನ್ ಸರಕಾರ ರೈತರ ಆತ್ಮಹತ್ಯೆಗಳ ಅಂಕಿ-ಅಂಶಗಳನ್ನು ಪ್ರಕಟಿಸುವುದನ್ನು ನಿಲ್ಲಿಸಿದ ಮೇಲೆ ಈ ರಾಜ್ಯದಲ್ಲಿ ದಾಖಲಾದ 17ನೇ ಆತ್ಮಹತ್ಯೆ ಎನ್ನಲಾಗಿದೆ(ಸಬ್ರಂಗ್ ಇಂಡಿಯ, ಎಪ್ರಿಲ್ 10).

ಈ ಪ್ರಕರಣದ ವಿಶೇಷತೆಯೆಂದರೆ" ಬಿಜೆಪಿ ಸರಕಾರ ಕಳೆದ 5ವರ್ಷಗಳಲ್ಲಿ ರೈತರನ್ನು ನಾಶ ಮಾಡಿದೆ. ಅವರಿಗೆ ಮತನೀಡಬೇಡಿ, ನೀಡಿದರೆ ಅವರು ಪ್ರತಿಯೊಬ್ಬರೂ ಚಹಾ ಮಾರುವಂತೆ ಮಾಡುತ್ತಾರೆ" ಎಮದು ತನ್ನ ಡೆತ್ ನೋಟ್‌ನಲ್ಲಿ ಬರೆದಿದ್ದರಂತೆ. ಈ ಪತ್ರವನ್ನು ಆತನೇ ಬರೆದರೇ ಎಂಬುದನ್ನು ಪರೀಕ್ಷಿಸಲಾಗುತ್ತಿದೆಯಂತೆ.

ನಾಗರಿಕತ್ವ ಮತ್ತು ಬಿಜೆಪಿ

ಮೋದಿಯವರು ತಾವು ಮತ್ತೆ ಅಧಿಕಾರಕ್ಕೆ ಬಂದರೆ ನಾಗರಿಕತ್ವ (ತಿದ್ದುಪಡಿ) ಮಸೂದೆಯನ್ನು ಮತ್ತೆ ತರುವುದಾಗಿ ಅಸ್ಸಾಂನ ಸಿಲ್ಚರ್‌ನಲ್ಲಿ ಹೇಳಿದ್ದಾರೆ. ಬಿಜೆಪಿ ಅಧ್ಯಕ್ಷರು ಇಡೀ ದೇಶಕ್ಕೆ ಅನ್ವಯವಾಗುವಂತಹ ನಾಗರಿಕತ್ವ ಮಸೂದೆ ತರುವುದಾಗಿ ಹೇಳಿದ್ದಾರೆ. ಆದರೆ ಅದೇ ಬಿಜೆಪಿಯ ಶಿಲ್ಲಾಂಗ್ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಸನ್ಬೊರ್ ಶುಲ್ಲೈ ಅದನ್ನು ಮೇಘಾಲಯದಲ್ಲಿ ಜಾರಿಗೆ ತಂದರೆ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಹೇಳಿದ್ದಾರೆ!

ಬರಿದಾದ ಖಜಾನೆ-ಮೋದಿ ಸರ್ಕಾರದ ಬಳುವಳಿ



ಮೋದಿ ಸರ್ಕಾರದ ಆಡಳಿತಾವಧಿಯ ಕಡೆಯ ವರ್ಷದಲ್ಲಿ ಪ್ರತ್ಯಕ್ಷ ಮತ್ತು ಅಪ್ರತ್ಯಕ್ಷ ತೆರಿಗೆ ಸಂಗ್ರಹದಲ್ಲಿ ಕಮ್ಮಿಯೆಂದರೂ ರೂ. 1.75 ಲಕ್ಷ ಕೋಟಿಗಳಷ್ಟು ಕೊರತೆ ಉಂಟಾಗಿದೆ. ಇದು ಒಟ್ಟು ಜಿಡಿಪಿಯ ಶೇ. 1 ಕ್ಕೆ ಹತ್ತಿರ ಇದೆ. ಈ ಮೊತ್ತದ ಪ್ರಮಾಣ ಎಷ್ಟೆಂದರೆ ಇದರಿಂದ ಮೋದಿ ಸರಕಾರ ಕೊನೆಯ ಬಜೆಟಿನಲ್ಲಿ ಸಣ್ಣ ರೈತರಿಗೆಂದು ಪ್ರಕಟಿಸಿದ ವಾರ್ಷಿಕ 6000ರೂ. ಆದಾಯ ಬೆಂಬಲವನ್ನು ಅವರಿಗೆ ಮಾತ್ರವಲ್ಲ ದೇಶದ ಎಲ್ಲ ಕುಟುಂಬಗಳಿಗೂ ಕೊಡಬಹುದು. ಅಥವ 15 ಕೋಟಿ ಕುಟುಂಬಗಳಿಗೆ ಅಂದರೆ ನಮ್ಮ ದೇಶದ ಜನ ಸಂಖ್ಯೆಯ ಅರ್ಧಕ್ಕಿಂತ ಹೆಚ್ಚು ಜನರಿಗೆ ಪ್ರತಿ ತಿಂಗಳು ರೂ. 1000 ದಂತೆ ಒಂದಿಲ್ಲೊಂದು ರೀತಿಯಲ್ಲಿ ಆದಾಯ ಬೆಂಬಲ ಕೊಡಬಹುದಾಗಿತ್ತು ಈ ಹಿನ್ನೆಲೆಯಲ್ಲಿ ದೇಶದ ಮುಂದಿರುವ ಪ್ರಶ್ನೆ- ಮೇ ತಿಂಗಳ ಕೊನೆಯಲ್ಲಿ ಬಲಿಷ್ಟ ಹಿತಾಸಕ್ತಿಗಳನ್ನು ಎದುರಿಸಿ ನಿಲ್ಲಬಲ್ಲ ಮತ್ತು ಜನಪರವಾದ ಪರ್ಯಾಯವನ್ನು ದಿಟ್ಟತನದಿಂದ ಆಯ್ದುಕೊಳ್ಳಬಲ್ಲ ಒಂದು 'ಮಜಬೂತ್' ಸರಕಾರ ಬರುವುದೇ ಎಂಬುದು.

ಪ್ರೊ. ಸುರಜಿತ್ ಮಜುಂದಾರ್   ಅನು: ಎಂ.ಜಿ.ವೆಂಕಟೇಶ್

1 ಏಪ್ರಿಲ್ 2019 ರಂದು ಹಣಕಾಸು ಸಚಿವಾಲಯ ಮಾರ್ಚ್ 2019 ರ ಜಿಎಸ್‌ಟಿ ಸಂಗ್ರಹದ ಬಗ್ಗೆ ಹೇಳಿಕೆ ನೀಡಿದ್ದು ಅದು ಪ್ರಸಕ್ತ ಹಣಕಾಸು ವರ್ಷದ ಕಡೆಯ ತಿಂಗಳು ಆಗಿದೆ. ಈ ಹೇಳಿಕೆ ಪ್ರಕಾರ ಮಾರ್ಚ್ ತಿಂಗಳಲ್ಲಿ ಸಂಗ್ರಹವಾದ ರೂ. 1,06,577 ಕೋಟಿ ಜಿಎಸ್‌ಟಿ ಕಾರ್ಯರೂಪಕ್ಕೆ ಬಂದನಂತರ ಗಳಿಸಿರುವ ಅತ್ಯದಿಕ ಮೊತ್ತವಾಗಿದೆ. ಆದರೆ ಈ ವಿಷಯದಲ್ಲಿ ಮರೆಮಾಚುತ್ತಿರುವ ಸಂಗತಿಯೆಂದರೆ ಫೆಬ್ರುವರಿ 1, 2019 ರಂದು ಮಂಡಿಸಿದ ಬಜೆಟ್‌ನಲ್ಲಿ ಪರಿಷ್ಕರಿಸಿದ ಜಿಎಸ್‌ಟಿ ಆದಾಯದ ಪುನರ್ ಅಂದಾಜಿಗಿಂತಲೂ ಬಹಳ ಕಡಿಮೆಯಿದೆ. ವಾಸ್ತವವಾಗಿ ಈ ಪರಿಷ್ಕೃತ ಅಂದಾಜೇ ಕಳೆದ ವರ್ಷದ ಬಜೆಟಿನಲ್ಲಿ ಇರಿಸಿಕೊಂಡಿದ್ದ ಗುರಿಗಿಂತ ಒಂದು ಲಕ್ಷ ಕೋಟಿ ರೂ. ಕಡಿಮೆಯಾಗಿದೆ.

ಕೇಂದ್ರ ಸರ್ಕಾರದ ಕಂಟ್ರೋಲರ್ ಜನರಲ್ ಆಫ್ ಅಕೌಂಟ್ಸ್ ಅವರ ವೆಬ್‌ಸೈಟ್‌ನಲ್ಲಿ ಫೆಬುವರಿ 2019 ರ ವರೆಗಿನ ಲೆಕ್ಕದ ವಿವರವನ್ನು ಪ್ರಕಟಿಸಲಾಗಿದೆ. ಇದರಂತೆ ಜಿಎಸ್‌ಟಿಯ ಎಲ್ಲಾ ಆದಾಯಗಳ ಮೊತ್ತ ಫೆಬ್ರವರಿ 2019 ಕ್ಕೆ ರೂ. 5,26,680 ಕೋಟಿ, ಈ ಬಜೆಟಿನ ಪರಿಷ್ಕೃತ ಅಂದಾಜು ರೂ. 6,43,900 ಕೋಟಿ, ಅಂದರೆ ಆದಾಯ ಗಳಿಕೆಯ ಗುರಿಗಿಂತ ರೂ. 1,17,220 ಕೋಟಿ ಕಡಿಮೆ ಮತ್ತು ಕಳೆದ ಬಜೆಟ್‌ನಲ್ಲಿ ಮಂಡಿಸಿದ ಅಂದಾಜು ರೂ.7,43,900 ಕೋಟಿ.

ಅಂದರೆ ಒಟ್ಟು ಸಂಗ್ರಹವಾಗಿರುವ ಮೊತ್ತ ಪರಿಷ್ಕೃತ ಅಂದಾಜಿನ ಗುರಿ ಮುಟ್ಟಿರುವುದಿಲ್ಲ. ಮಾರ್ಚ್ ತಿಂಗಳಲ್ಲಿ ಸಂಗ್ರಹಿಸಿದ "ದಾಖಲೆ' ಆದಾಯದಲ್ಲಿ 51,209 ಕೋಟಿ ರೂ. ಗಳನ್ನು ರಾಜ್ಯ ಸರ್ಕಾರಗಳಿಗೆ ನೀಡಬೇಕಿದ್ದು ಮತ್ತು ಉಳಿದ ರೂ. 55,368 ಕೋಟಿ ಯಲ್ಲಿ ಜಿಎಸ್‌ಟಿ ಪರಿಹಾರಕ್ಕಾಗಿ ಇಟ್ಟಿರುವ ರೂ. 8000 ಕೋಟಿ ಸೇರಿರುತ್ತದೆ. ಈ **ಎಲ್ಲವನ್ನೂ ಕೇಂದ್ರದ ಲೆಕ್ಕಕ್ಕೆ ಸೇರಿಸಿದರೂ ಮೊತ್ತ ರೂ.5,82, 048 ಕೋಟಿ ಆಗುತ್ತದಷ್ಟೇ. ಒಟ್ಟು ಕೇಂದ್ರ ಸರ್ಕಾರದ ಸಂಗ್ರಹಿಸಿರುವ ಜಿಎಸ್‌ಟಿ ತೆರಿಗೆ ಸಂಗ್ರಹ 5,82,048 ಕೋಟಿಯಾಗಿದ್ದು. ಇದು ಪರಿಷ್ಕೃತ ಬಜೆಟ್ ಅಂದಾಜಿಗಿಂತ ರೂ. 61,852 ಕೋಟಿ ಕಡಿಮೆಯಾಗಿದ್ದರೆ, ಮೂಲ ಬಜೆಟ್‌ಗಿಂತ ರೂ. 1.62 ಲಕ್ಷ ಕೋಟಿ ಕಡಿಮೆಯಾಗಿದೆ.**

ಜಿಎಸ್‌ಟಿ ತೆರಿಗೆ ಸಂಗ್ರಹದಲ್ಲಿನ ತೀವ್ರ ಕೊರತೆ ಕೇಂದ್ರ ಸರ್ಕಾರದ ಅಪ್ರತ್ಯಕ್ಷ ತೆರಿಗೆ ಸಂಗ್ರಹವನ್ನು ತೀವ್ರವಾಗಿ ತಟ್ಟುತ್ತದೆ, ಏಕೆಂದರೆ ಇದು ಅಪ್ರತ್ಯಕ್ಷ ತೆರಿಗೆ ಆದಾಯಗಳ ಬಹುಮುಖ್ಯವಾದ ಭಾಗವಾಗಿದೆ. 2018-19 ಪರಿಷ್ಕೃತ ಅಂದಾಜಿನ ಪ್ರಕಾರ ಜಿಎಸ್‌ಟಿ ಒಟ್ಟು ಅಪ್ರತ್ಯಕ್ಷ ತೆರಿಗೆ ಸಂಪನ್ಮೂಲದ ಶೇ. 60 ಭಾಗವಾಗಿದೆ. ಉಳಿದ ಅಪ್ರತ್ಯಕ್ಷ ತೆರಿಗೆ ಸಂಗ್ರಹವೂ ತೃಪ್ತಿಕರವಾಗಿಲ್ಲವೆಂದು ಕಂಡು ಬರುತ್ತಿದೆ. ಎಪ್ರಿಲ್2018ರಿಂದ-ಫೆಬ್ರುವರಿ 2019ರ ಅಂಕಿಅಂಶಗಳನ್ನು ಗಮನಿಸಿದರೆ ನಾಮಿನಲ್ ಜಿಡಿಪಿ ಹಿಂದಿನ ಸಾಲಿಗಿಂತ ಶೇ. 11.5 ಹೆಚ್ಚಳ ಸಾಧಿಸಿದ್ದರೂ, ಈ 11 ತಿಂಗಳ ಅವಧಿಯಲ್ಲಿ (ಏಪ್ರಿಲ್- ಫೆಬ್ರವರಿ) ಹಿಂದಿನ ಹಣಕಾಸು ವರ್ಷದ ಅದೇ 11ತಿಂಗಳ ಆದಾಯದೊಂದಿಗೆ ಹೋಲಿಸಿದರೆ ಅಪ್ರತ್ಯಕ್ಷ ತೆರಿಗೆ ಹೆಚ್ಚಳ ಕೇವಲ ಶೇ2% ಆಗಿದೆ. ಆದ್ದರಿಂದ ಮಾರ್ಚ್ 2019 ರ ಈ 'ಬೃಹತ್' ಹೆಚ್ಚಳ ಸಹಾ ಒಟ್ಟಾರೆ ಕೊರತೆಯನ್ನು ಕಡಿಮೆ ಮಾಡುವುದಿಲ್ಲ. ಮಾರ್ಚ್ ತಿಂಗಳಿನಲ್ಲಿ ಅಪ್ರತ್ಯಕ್ಷ ತೆರಿಗೆಗಳ ಸಂಗ್ರಹದಲ್ಲಿ 20% ಆಗಿದ್ದರೂ ಕೂಡ, ಒಟ್ಟಾರೆ ಕೊರತೆ 1 ಲಕ್ಷ ಕೋಟಿ ರೂ. ಮೀರಲಿದೆ ಮತ್ತು ಮೂಲ ಬಜೆಟ್‌ಗಿಂತ 2 ಲಕ್ಷ ಕೋಟಿಗಳಿಗಿಂತ ಹೆಚ್ಚಾಗಲಿದೆ.

ನಿಚ್ಚಳವಾಗಿ ಜಿಎಸ್‌ಟಿ ಮೂಲಕ ಅಪ್ರತ್ಯಕ್ಷ ತೆರಿಗೆ ಆದಾಯ ಹೆಚ್ಚುವುದೆಂಬ ಆಶಯ ಕುಸಿಯುತ್ತಿದೆ. ಇದೇ ಸಂದರ್ಭದಲ್ಲಿ ನೇರ ತೆರಿಗೆ ಸಂಗ್ರಹವೂ ಹೆಚ್ಚಾಗಿರುವುದಿಲ್ಲ. ಕಾರ್ಪೋರೇಟ್ ತೆರಿಗೆ ಸಂಗ್ರಹ ಪರಿಷ್ಕೃತ ಬಜೆಟ್ ಅಂದಾಜಿನಂತೆ ಇರಬೇಕಾದರೆ ಮಾರ್ಚ್ 2018 ಗಿಂತ ಮಾರ್ಚ್ 2019 ರಲ್ಲಿ 22.74% ಹೆಚ್ಚಳ ಕಾಣಬೇಕಿದೆ. ಎಪರಿಲ್-ಫೆಬ್ರುವರಿ ಅವಧಿಯಲ್ಲಿ ಕಾಣ ಬಂದಿರುವ ಹೆಚ್ಚಳದ ಪ್ರಮಾಣ 15.43, ಅದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಸಂಗ್ರಹಣೆ ಆಗಬೇಕಿದೆ.

ವೈಯುಕ್ತಿಕ ವರಮಾನ ತೆರಿಗೆ ಸಂಗ್ರಹಕ್ಕೆ ಸಂಬಂಧಪಟ್ಟಂತೆ ಕಳೆದ ವರ್ಷದ ಬಜೆಟ್ ಬಹಳ ಆಶಾದಾಯಕ ಅಂದಾಜು ಮಾಡಿತ್ತು, ಇದನ್ನು ಈ ಬಾರಿಯ ಪರಿಷ್ಕೃತ ಅಂದಾಜಿನಲ್ಲೂ ಉಳಿಸಿಕೊಳ್ಳಲಾಗಿದೆ. ಆದರೆ ನೋಟ್‌ರದ್ಧತಿಯ ನಂತರ ಸತತವಾಗಿ ಎರಡನೇಯ ವರ್ಷವೂ ಈ ಬಾಬ್ತಿನ ಸಂಪನಮೂಲ ಸಂಗ್ರಹ ಮೂಲ ಬಜೆಟ್/ ಪರಿಷ್ಕೃತ ಅಂದಾಜಿನ ಹತ್ತಿರವೂ ಬರುವಂತಿಲ್ಲ. ಎಪ್ರಿಲ್-ಫೆಬ್ರವರಿ 11 ತಿಂಗಳ ಅವಧಿಯಲ್ಲಿನ ಸಂಗ್ರಹವನ್ನು ಗಮನಿಸಿದರೆ, ಕನಿಷ್ಠ ರೂ. 50,000/- ಕೋಟಿ ಕೊರತೆ ತೋರಿಸಲಿದೆ. ಇದರ ಫಲಿತಾಂಶವೆಂದರೆ, ಒಟ್ಟು ವರಮಾನ ತೆರಿಗೆ ಜಿಡಿಪಿಯ ಕೇವಲ 2.5% ಮಾತ್ರ ಆಗಬಹುದು. ಅಂದರೆ ಅದೇ ನಿಧಾನಗತಿಯ ಏರಿಕೆ. ತೆರಿಗೆ ತೆರಬೇಕಾದ ಶ್ರೀಮಂತ ವಿಭಾಗಗಳ ಆದಾಯಗಳಲ್ಲಿ ತ್ವರಿತ ಹೆಚ್ಚಳವಾಗಿದ್ದರೂ, ನೊಟುರದ್ಧತಿಯ ನಂತರವೂ ವರಮಾನ ತೆರಿಗೆಯ ಆದಾಯದ ಸಂಗ್ರಹದ ಏರಿಕೆಯ ಗತಿ ಮಾತ್ರ ಹಿಂದಿನಂತೆಯೇ ನಿಧಾನವಾಗಿಯೇ ಇದೆ.

ನೋಟುರದ್ಧತಿ ಕ್ರಮದಿಂದಾಗಿ ತೆರಿಗೆ ರಿಟರ್ನ್ ಸಲ್ಲಿಸುವರ ಸಂಖ್ಯೆ ಹೆಚ್ಚಾಗಿದೆ ಎಂದು ಸರಕಾರೀ ಪ್ರಚಾರಯಂತ್ರ ಸಾರುತ್ತಿದೆ. ವಾಸ್ತವವಾಗಿ ಈ ಪ್ರವೃತ್ತಿ ನೋಟುರದ್ಧತಿಯ ಮೊದಲೇ ಕಂಡು ಬಂದಿತ್ತು. ಈಗ ಇದೇ ರೀತಿಯ ಕತೆಯನ್ನು ಜಿಎಸ್‌ಟಿ ಬಗ್ಗೆಯೂ ಹೇಳಲಾಗುತ್ತಿದೆ. ಈ ಅಂಕಿ ಅಂಶಗಳು ಮರೆಮಾಚುತ್ತಿರುವ ಸಂಗತಿಯೆಂದರೆ, ತೆರಿಗೆ ಬಲೆಯಲ್ಲಿನ ಸಂಖ್ಯೆಗಳಿಗೂ ಮತ್ತು ತೆರಿಗೆ ಆದಾಯಕ್ಕೂ ಯಾವುದೇ ನೇರ ಸಂಬಂಧವಿಲ್ಲವೆಂಬುದು. ವರಮಾನ ತೆರಿಗೆ ರಿಟರ್ನ್ ಸಲ್ಲಿಸುವ ಶೇ. 90 ರಷ್ಟು ಜನ ಯಾವ ತೆರಿಗೆಯನ್ನು ಕಟ್ಟಿರುವುದಿಲ್ಲ ಅಥವಾ ಬಹಳ ಕಡಿಮೆ ತೆರಿಗೆ ಕಟ್ಟುತ್ತಾರೆ ಮತ್ತು 57% ತೆರಿಗೆ ಮೊತ್ತ ಸಂಬಳಗಳ ಮೂಲದಿಂದ ಬರುತ್ತಿದೆ, ವ್ಯಾಪಾರ-ವ್ಯವಹಾರಗಳ ಮೂಲದಿಂದ ಬರುವ ತೆರಿಗೆ ಆದಾಯಗಳ ಪ್ರಮಾಣ ಇದರ ಅರ್ಧದಷ್ಟು ಮಾತ್ರ. ಈ ಅಂಶಗಳನ್ನು ಗಮನಿಸಿ- ಆದಾಯ ತೆರಿಗೆ ಇಲಾಖೆ ಡಿಸೆಂಬರ್ 2018ರ ವರೆಗೆ 37 ಕೋಟಿ ವ್ಯಕ್ತಿಗಳಿಗೆ ವ್ಯಕ್ತಿಗಳಿಗೆ ಪಾನ್ ಕಾರ್ಡ್ ಅಂದರೆ ತೆರಿಗೆದಾರರ 'ಶಾಶ್ವತ ಅಕೌಂಟ್ ಸಂಖ್ಯೆ' ನೀಡಿದೆ. ಇದು ತೆರಿಗೆ ರಿಟರ್ನ್ ಸಲ್ಲಿಸುವವರ ಸಂಖ್ಯೆಯ 5 ಪಟ್ಟಿಗಿಂತಲೂ ಹೆಚ್ಚು ಮತ್ತು ದೇಶದ ಒಟ್ಟು ದುಡಿಮೆಗಾರರ 75% ದಷ್ಟು!

ಆದ್ದರಿಂದ ಮೋದಿ ಸರ್ಕಾರದ ಆಡಳಿತಾವಧಿಯ ಕಡೆಯ ವರ್ಷದಲ್ಲಿ ಪ್ರತ್ಯಕ್ಷ ಮತ್ತು ಅಪ್ರತ್ಯಕ್ಷ ತೆರಿಗೆ ಸಂಗ್ರಹದಲ್ಲಿ ರೂ. 1.5 ಲಕ್ಷ ಕೋಟಿ ಕೊರತೆಯಿರುವುದು ಕೇವಲ ಎರಡು ತಿಂಗಳ ಹಿಂದಿನ ಪರಿಷ್ಕೃತ ಅಂದಾಜಿನಲ್ಲಿ ವ್ಯಕ್ತವಾಗಿದೆ. ಈ ಪರಿಷ್ಕೃತ ಅಂದಾಜು ಈ ಹಣಕಾಸು ವರ್ಷಧ ಆರಂಭದ ಅಂದಾಜಿಗಿಂತ 23,000 ಕೋಟಿ ರೂ.ಗಳಷ್ಟು ಕಡಿಮೆಯಿರುವುದರಿಂದ ಒಟ್ಟು ತೆರಿಗೆ ಆದಾಯ ಸಂಗ್ರಹಣೆಯಲ್ಲಿ ಒಟ್ಟು ಕೊರತೆ ಕಮ್ಮಿಯೆಂದರೂ ರೂ. 1.75 ಲಕ್ಷ ಕೋಟಿಗಳಷ್ಟಾಗುತ್ತದೆ. ಇದು ಒಟ್ಟು ಜಿಡಿಪಿಯ ಶೇ. 1 ಕ್ಕೆ ಹತ್ತಿರ ಇದೆ. ಈ ಮೊತ್ತದ ಪ್ರಮಾಣ ಎಷ್ಟೆಂದರೆ ಇದರಿಂದ ಮೋದಿ ಸರಕಾರ ಅದರ ಕೊನೆಯ ಬಜೆಟಿನಲ್ಲಿ ಸಣ್ಣ ರೈತರಿಗೆಂದು ಪ್ರಕಟಿಸಿದ ವಾರ್ಷಿಕ 6000ರೂ. ಆದಾಯ ಬೆಂಬಲವನ್ನು ಅವರಿಗೆ ಮಾತ್ರವಲ್ಲ ದೇಶದ ಎಲ್ಲ ಕುಟುಂಬಗಳಿಗೂ ಕೊಡಬಹುದು. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ 15 ಕೋಟಿ ಕುಟುಂಬಗಳಿಗೆ ಅಂದರೆ ನಮ್ಮ ದೇಶದ ಜನ ಸಂಖ್ಯೆಯ ಅರ್ಧಕ್ಕಿಂತ ಹೆಚ್ಚು ಜನರಿಗೆ ಪ್ರತಿ ತಿಂಗಳು ರೂ. 1000 ದಂತೆ ಒಂದಿಲ್ಲೊಂದು ರೀತಿಯಲ್ಲಿ ಆದಾಯ ಬೆಂಬಲ ಕೊಡಬಹುದಾಗಿತ್ತು. ಕಡಿಮೆ ತೆರಿಗೆ ಸಂಗ್ರಹದಿಂದ ರಾಜ್ಯಗಳ ಪಾಲು ಸಹಿತ ಕಡಿತಗೊಳ್ಳಲಿದೆ. ಇದರೊಂದಿಗೆ ಜಿಎಸ್‌ಟಿ ತೆರಿಗೆ ಸಂಗ್ರಹದ ಕೊರತೆ ರಾಜ್ಯ ಸರ್ಕಾರಗಳಿಗೆ ತೀವ್ರ ಹೊಡೆತ ನೀಡಲಿದೆ.

2018-19 ರ ತೆರಿಗೆ ಸಂಗ್ರಹದಲ್ಲಿ ಕೊರತೆ ಉಂಟಾಗಿರುವುದರ ಅರ್ಥ, ವಿತ್ತೀಯ ಕೊರತೆ ಅಂದಾಜಿಗಿಂತ ಬಹಳ ಹೆಚ್ಚಿದೆ ಅಥವಾ ಮಾರ್ಚ್ ತಿಂಗಳಲ್ಲಿ ತೀವ್ರ ವೆಚ್ಚಗಳನ್ನು ತೀವ್ರವಾಗಿ ಕಡಿತ ಮಾಡಲಾಗಿದೆ ಎಂದೇ ಆಗುತ್ತದೆ. ಫೆಬ್ರವರಿ ತಿಂಗಳ ವರೆಗಿನ ಆದಾಯ ಮತ್ತು ಖರ್ಚಿನ ಪ್ರವೃತ್ತಿಯನ್ನು ನೋಡಿದಾಗ, ಹಣಕಾಸು ವರ್ಷ ಮುಗಿಯುವ ಒಂದು ತಿಂಗಳ ಹಿಂದೆಯೇ ಬಜೆಟ್ ಅಂದಾಜಿಗಿಂತ 34% ಹೆಚ್ಚಾಗಿರುವುದು, ಅಥವ ಜಿಡಿಪಿಯ 4.5% ರಷ್ಟು ಆಗಿರುವುದು ಕಂಡು ಬರುತ್ತದೆ.

ಈ ಹಿನ್ನೆಲೆಯಲ್ಲಿ, **ಮೇ ತಿಂಗಳ ಕೊನೆಯಲ್ಲಿ ಬರಲಿರುವ ಹೊಸ ಸರ್ಕಾರದ ಮುಂದಿರುವ ಸವಾಲೆಂದರೆ ವಿತ್ತೀಯ ಕೊರತೆಯನ್ನು ಜಿಡಿಪಿಯ 3% ಮಿತಿಯಲ್ಲಿಡಬೇಕು ಎಂಬ ಎಫ್‌ಆರ್‌ಬಿಎಂ ಕಾಯ್ದೆ ಹೇರಿರುವ ವಿಚಾರಹೀನ ಗೀಳನ್ನು ತ್ಯಜಿಸುವುದು, ಮತ್ತು ಶ್ರೀಮಂತರಿಂದ, ಸಂಪತ್ತುಳ್ಳವರಿಂದ ಹಾಗೂ ಬೃಹತ್ ಉದ್ದಿಮೆಗಳಿಂದ ಮುಲಾಜಿಲ್ಲದೆ ತೆರಿಗೆ ಸಂಗ್ರಹಿಸುವುದು.** ಈ ಮೂಲಕ, ತೆರಿಗೆಗಳ್ಳತನ ತಮ್ಮ ದಿಂಬುಗಳ ಅಡಿಯಲ್ಲಿ ನೋಟಿನ ಕಂತೆಗಳನ್ನು ಬಚ್ಚಿಟ್ಟರಿಗಿಂತ ಹೆಚ್ಚಾಗಿ, ಬಹುಪಾಲು ತೆರಿಗೆ ಬಲೆಯಲ್ಲಿರುವವರಿಂದಲೇ ನಡೆಯುತ್ತಿದೆ ಎಂಬುದನ್ನು ಒಪ್ಪಿಕೊಳ್ಳ ಬೇಕಾಗುತ್ತದೆ. ಆದಾಯ ತೆರಿಗೆ ಮತ್ತು ಜಿಎಸ್‌ಟ್ ಸಂಗ್ರಹದಲ್ಲಿ ಕಂಡು ಬಂದಿರುವ ಪ್ರವೃತ್ತಿ ಕೂಡ ಇಂತಹುದೇ.

ಇದರ ಬದಲಾಗಿ ಹೊಸ ಸರಕಾರಕ್ಕೆ ಇರುವ ಏಕೈಕ ದಾರಿಯೆಂದರೆ, ಒಂದು ತೀವ್ರತರದ 'ಮಿತವ್ಯಯ' ಎಂದು ಹೇಳುವ ದಾರಿ. ಅಂದರೆ ಜನಸಾಮಾನ್ಯರಿಗಾಗಿ ಮಾಡುವ ವೆಚ್ಚಗಳನ್ನು ಕಡಿತಗೊಳಿಸುವುದು. ಕಳೆದ ಒಂದು ದಶಕದಲ್ಲಿ ಬಂದ ಸರಕಾರಗಳು ಇದನ್ನೇ ಅನುಸರಿಸಿವೆ. ಇದು ಜನಸಾಮಾನ್ಯರ ಬದುಕನ್ನು ನರಕಗೊಳಿಸಿರುವ ದಾರಿ. ಮೋದಿ ಸರ್ಕಾರ ಮತ್ತೆ ಬಂದರೆ ಇದೇ ದಾರಿಯನ್ನು ಮುಂದುವರೆಸುತ್ತದೆ ಎಂಬುದು ಖಡಾಖಂಡಿತ. **ಆದ್ದರಿಂದಲೇ, ಜನಸಾಮಾನ್ಯರ ಮೇಲೆ ಇನ್ನೂ ಹೆಚ್ಚಿನ ದಾಳಿಯನ್ನು ತಪ್ಪಿಸಬೇಕಾದರೆ ಈ ಮೋದಿ ಸರ್ಕಾರವನ್ನು ಸೋಲಿಸುವುದು ಆದ್ಯ ಕರ್ತವ್ಯವಾಗಬೇಕು.** ಆದರೆ ಪ್ರಶ್ನೆಯಿರುವುದು-ದೇಶಕ್ಕೆ ಒಂದು ನಿಜವಾಗಿಯೂ ಹೊಸ ಸರ್ಕಾರ ಬರುವುದೇ, ಬಲಿಷ್ಟ ಹಿತಾಸಕ್ತಿಗಳನ್ನು ಎದುರಿಸಿ ನಿಲ್ಲಬಲ್ಲ ಮತ್ತು ಜನಪರವಾದ ಒಂದು ಧೀರ ಪರ್ಯಾಯವನ್ನು ಆಯ್ದುಕೊಳ್ಳಬಲ್ಲ ಒಂದು 'ಮಜಬೂತ್' ಸರಕಾರ ಬರುವುದೇ ಎಂಬುದು.

ದಲಿತ ವಿರೋಧಿ, ಮನು ವಾದಿ, ಬಿಜೆಪಿ ಸೋಲಿಸಿ,

ಜನಪರ ಸಿಪಿಐ(ಎಂ) ಪಕ್ಷಕ್ಕೆ ಮತ ನೀಡಿ

ಕಳೆದ ಐದು ವರ್ಷಗಳಲ್ಲಿ ಅಧಿಕಾರ ನಡೆಸಿದ ಮೋದಿ ಸರ್ಕಾರ ದಲಿತರ ಅಭಿವೃದ್ಧಿಯನ್ನು ಸಂಪೂರ್ಣವಾಗಿ ಕಡೆಗಣಿಸಿದ್ದಾರೆ. ಡಾ॥ ಬಿ.ಆರ್. ಅಂಬೇಡ್ಕರ್ ಅವರು ನೀಡಿದ ಅಮೂಲ್ಯ ಸಂವಿಧಾನದ ಮೇಲೆ ದಾಳಿ ನಡೆಸುತ್ತಿದ್ದಾರೆ. ಸಂವಿಧಾನವನ್ನು ಸುಟ್ಟು ಹಾಕುತ್ತಿದ್ದಾರೆ. ಸಂವಿಧಾನ ಬದ್ಧ ಹಕ್ಕುಗಳನ್ನು ನೀಡುವಲ್ಲಿ ಪಾರ್ಲಿಮೆಂಟಿನ ಒಳಗೆ ಯಾವುದೇ ಚರ್ಚೆ ನಡೆಸದೆ ದಲಿತರನ್ನು ವಂಚಿಸಲಾಗುತ್ತಿದೆ. ದಲಿತರ ಮೇಲಿನ ದೌರ್ಜನ್ಯ ತಡೆ ಕಾಯ್ದೆ ದುರ್ಬಲಗೊಳಿಸಲಾಗುತ್ತಿದೆ. ಅಲ್ಲದೆ ಬಿಜೆಪಿ ಆಡಳಿತವಿರುವ ರಾಜ್ಯಗಳಲ್ಲಿ ದಲಿತರ ಮೇಲೆ ದೌರ್ಜನ್ಯ ತ್ರೀವ್ರವಾಗಿದೆ. ಉತ್ತರಪ್ರದೇಶ, ಮಧ್ಯಪ್ರದೇಶ, ರಾಜಸ್ಥಾನ, ಗುಜರಾತಿನಲ್ಲಿ ದನದ ಚರ್ಮ ಸುಲಿದ ಆರೋಪಕ್ಕಾಗಿ, ದಲಿತರು ಮೀಸೆ ಬಿಟ್ಟ ಕಾರಣಕ್ಕಾಗಿ ಹಲ್ಲೆ ನಡೆಸಿದ್ದಾರೆ. ಮದುವೆಯಲ್ಲಿ ಕುದುರೆಯ ಮೇಲೆ ದಿಬ್ಬಣ ನಡೆಸಿದ್ದಕ್ಕೆ ಹತ್ಯೆ ನಡೆದಿದೆ. ದಲಿತ ಮಹಿಳೆಯರನ್ನು ಬೆತ್ತಲೆಗೊಳಿಸಿದ ದುರ್ಘಟನೆಗಳು ಹೆಚ್ಚಾಗಿವೆ. ರೋಹಿತ್ ವೇಮುಲಾ ಹತ್ಯೆ, ಆನಂದ್ ತೇಲ್‌ತುಂಬ್ಡೆ ಮೇಲೆ ದೌರ್ಜನ್ಯ, ಅಂಬೇಡ್ಕರ್ ಸ್ಮಾರಕ ಧ್ವಂಸ, ಕೊರೆಂಗಾವ್ ವಿಜಯೋತ್ಸವದ ಮೇಲೆ ದಾಳಿ, ಮಹಾರಾಷ್ಟ್ರ ಲಾತೂರಿನಲ್ಲಿ ಹನುಮಂತನ ದರ್ಶನ ಪಡೆದ ಕಾರಣಕ್ಕೆ ದಲಿತರ ಮೇಲೆ ಅಮಾನುಷವಾಗಿ ದೌರ್ಜನ್ಯ ನಡೆಸಿದ್ದಾರೆ. ಹೋರಾಟ ನಡೆಸಿದ ದಲಿತರ ಮೇಲೆ ದೌರ್ಜನ್ಯಗಳು ಲೆಕ್ಕವಿಲ್ಲದಷ್ಟು ನಡೆದಿವೆ. ಸಂವಿಧಾನದ ತಿದ್ದುಪಡಿ ಮಾಡಲು ಬಂದಿದ್ದೇವೆ ಎಂದು ಮನುವಾದಿಗಳು ಸಾರುತ್ತಿದ್ದಾರೆ ಮತ್ತು ಸಂವಿಧಾನವನ್ನು ಸುಟ್ಟು ಜಾತ್ಯಾತೀತ ತತ್ವವನ್ನು ಬುಡಮೇಲು ಮಾಡುತ್ತಿದ್ದಾರೆ.

ದಲಿತರ ಅಭಿವೃದ್ಧಿಯನ್ನು ಸಂಪೂರ್ಣವಾಗಿ ಕಡೆಗಣಿಸಲಾಗಿದೆ. ಉಪ ಯೋಜನೆ ಎಸ್.ಸಿ.ಎಸ್.ಪಿ/ ಟಿ.ಎಸ್.ಪಿ. ಯೋಜನೆಯನ್ನು ನಿರರ್ಥಕಗೊಳಿಸಲಾಗಿದೆ. ನೀತಿ ಆಯೋಗದ ಮೂಲಕ ದಲಿತರ ಜನಸಂಖ್ಯೆ ಆಧಾರದಲ್ಲಿ ಹಣ ಕಡಿತಗೊಳಿಸಿದೆ. ಮೀಸಲಾತಿ, ಬಡ್ತಿ ಮೀಸಲಾತಿ ಕಡೆಗಣಿಸಿ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡದೆ ದಲಿತರನ್ನು ವಂಚಿಸಲಾಗಿದೆ. ಭೂಮಿ ಇಲ್ಲದ ದಲಿತರು, ಮನೆ ಇಲ್ಲದ ದಲಿತರು ಪರದಾಡುತ್ತಿದ್ದಾರೆ. ಇವರ ಜೀವನ ಅತ್ಯಂತ ಭೀಕರ ಸ್ಥಿತಿಗೆ ತಲುಪಿದೆ. ಕೋಮುವಾದದ ವಿಷ ಕಕ್ಕುತ್ತಿರುವ ಬಿಜೆಪಿ ದಲಿತರ ವಿರೋಧಿಯಾಗಿದೆ.

ಈ ಕಾರಣಗಳಿಂದ ಒಂದು ಕ್ಷಣ ಬಿಜೆಪಿ ಅಧಿಕಾರದಲ್ಲಿದ್ದರೂ ದಲಿತರ ಅವನತಿ ಗ್ಯಾರಂಟಿಯಾಗಿದೆ ಎಂಬುವುದನ್ನು ದಲಿತರು ಅರಿತು ಮತ ಹಾಕಬೇಕು. ಕಾಂಗ್ರೆಸ್ ಇದಕ್ಕಿಂತ ಭಿನ್ನವಾಗಿಲ್ಲ ಕೋಮುವಾದಿಗಳು ಕಾಂಗ್ರೆಸ್‌ನಲ್ಲೂ ಇದ್ದಾರೆ. ದಲಿತರನ್ನು ನಿರಂತರವಾಗಿ ಸುಳ್ಳು ಭರವಸೆಗಳ ಮೂಲಕ ನಂಬಿಸಿ ವಂಚನೆ ಮಾಡಲಾಗಿದೆ. ಆದ್ದರಿಂದ ಕಾಂಗ್ರೆಸ್‌ನ್ನೂ ಸೋಲಿಸಬೇಕು.

ಸಿಪಿಐ(ಎಂ) ಗೆಲ್ಲಿಸಿ

ಪ್ರಜಾಸತಾತ್ಮಕ ಹೋರಾಟಗಳ ಮೂಲಕ ದೇಶದಲ್ಲಿ ದುಡಿಯುವ ವರ್ಗ ಮತ್ತು ದಲಿತರ ಪರವಾಗಿ ಹೋರಾಟ ನಡೆಸಿರುವ ಪಕ್ಷ ಸಿಪಿಐ(ಎಂ). ರಾಜ್ಯದಲ್ಲಿ ಮಡೆ ಮಡೆ ಸ್ನಾನ, ಪಂಕ್ತಿ ಭೇದ ತಡೆಗಟ್ಟುವಲ್ಲಿ ಬೃಹತ್ ಹೋರಾಟಗಳನ್ನು ನಡೆಸಿದೆ. ಜಾತಿ ತಾರತಮ್ಯಗಳ ವಿರುದ್ಧ ಚಿಕ್ಕಬಳ್ಳಾಪುರ ಕ್ಷೇತ್ರದಲ್ಲಿ ರಾಜಿ ಇಲ್ಲದ ಹೋರಾಟ ನಡೆಸಿದೆ. ಅಂಗನವಾಡಿ, ಬಿಸಿಯೂಟ, ಪಂಚಾಯತ್ ಮೊದಲಾದ ಅಸಂಘಟಿತ ನೌಕರರನ್ನು ಸಂಘಟಿಸಿ ಅವರ ಹೋರಾಟಗಳನ್ನು ನಡೆಸಿ ಅವರ ಜೀವನವನ್ನು ಉತ್ತಮಗೊಳಿಸಲಾಗಿದೆ. ಇಂತಹ ಜನಪರ ಸಿಪಿಐ(ಎಂ) ಪಕ್ಷದ ಅಭ್ಯರ್ಥಿಯಾದ ಎಸ್. ವರಲಕ್ಷ್ಮಿ ಅವರನ್ನು ಬೆಂಬಲಿಸಿ ಗೆಲ್ಲಿಸಬೇಕೆಂದು ಕೋರಲಾಗಿದೆ.

ಗೋಪಾಲಕೃಷ್ಣ ಅರಳಹಳಿ

ಕಣ್ಣಿನ ವಿಕಾಸದ ಕಥೆ...........

ಪುಟ 11 ರಿಂದ

ಮಾನದಂಡವಾಗಿ ಇಟ್ಟುಕೊಂಡು ನೋಡಿದರೆ 'ಎರೆಹುಳುಗಳಿಗೆ ಕಣ್ಣಿಲ್ಲ'. ಆದರೆ ಬೆಳಕನ್ನು ಗ್ರಹಿಸುವ ಕೋಶವನ್ನು ಸಹ ಕಣ್ಣು ಅಥವಾ ಕಣ್ಣಿನ ಒಂದು ರೂಪ ಎಂದೇ ಒಪ್ಪಿಕೊಳ್ಳಬೇಕಾಗುತ್ತದೆ. ವಾಸ್ತವವಾಗಿ ಬೆಳಕನ್ನು ಗ್ರಹಿಸುವ ಇಂತಹ ಜೀವಕೋಶಗಳೇ ಉನ್ನತ ಮಟ್ಟಕ್ಕೆ ಬೆಳವಣಿಗೆ ಹೊಂದಿದ ಕಣ್ಣುಗಳ ಮೂಲವಾಗಿದೆ. ಜೀವ ವಿಕಾಸದ ಯಾವುದೋ ಒಂದು ಘಟ್ಟದಲ್ಲಿ ಜೀವಿಗಳಲ್ಲಿ ಕಾಣಿಸಿಕೊಂಡ ಬೆಳಕನ್ನು ಗ್ರಹಿಸುವ ಜೀವಕೋಶ ಮುಂದಿನ ದಿನಗಳಲ್ಲಿ ಕೊಂಚ ದೇಹದ ಒಳಭಾಗಕ್ಕೆ ಸೇರಿ ಕ್ರಮೇಣ ನಾನಾ ರೀತಿಯ ರಕ್ಷಣಾ ವ್ಯವಸ್ಥೆ ಮತ್ತು ಕಣ್ಣಿನ ಕಾರ್ಯಕ್ಷಮತೆಯನ್ನು ಹೆಚ್ಚಿಸುವ ಬದಲಾವಣೆಗಳು ಕಾಣಿಸಿಕೊಂಡು, ವಂಶವಾಹಿಗಳ ಮೂಲಕ ಅವು ಪೀಳಿಗೆಯಿಂದ ಪೀಳಿಗೆಗೆ ಮುಂದುವರಿಯುತ್ತಾ ಬಂದಿವೆ. ಕೋಟ್ಯಾಂತರ ವರ್ಷಗಳಲ್ಲಿ ಇಂದಿನ ಮನುಷ್ಯನ ವಿಸ್ಮಯಕರ ಕಣ್ಣುಗಳು ವಿಕಾಸವಾಗಿವೆ.

ಕಣ್ಣುಗಳ ಬಗೆಗೆ ಜನರಲ್ಲಿ ಎಷ್ಟೋ ಬಗೆಯ ತಪ್ಪು ಕಲ್ಪನೆಗಳಿವೆ. ಎಲ್ಲ ಪ್ರಾಣಿಗಳ ಕಣ್ಣುಗಳು ಒಂದೇ ರೀತಿಯಲ್ಲಿ ಇಲ್ಲ. ಗೂಳಿಗೆ ಕೆಂಪು ಬಟ್ಟೆಯನ್ನು ಕಂಡರೆ ಅದು ಕೆರಳಿ ಹಾಯಲು ಬರುತ್ತದೆ ಎಂದು ಜನರು ನಂಬುತ್ತಾರೆ. ಗೂಳಿ ಕಾಳಗದಲ್ಲಿ ಗೂಳಿಗೆ ಕೆಂಪು ಕರವಸ್ತ್ರವನ್ನು ತೋರಿಸಿ ಅದನ್ನು ಕೆರಳಿಸುವ ಪ್ರಯತ್ನ ಮಾಡಲಾಗುತ್ತದೆ.

ಆದರೆ ಸತ್ಯವೆಂದರೆ ಗೂಳಿಗಳಿಗೆ, ಹಸುಗಳ ಕಣ್ಣುಗಳಿಗೆ ಕೆಂಪು ಬಣ್ಣವನ್ನು ಗುರುತಿಸುವ ಸಾಮರ್ಥ್ಯವೇ ಇಲ್ಲ. ಬಹಳಷ್ಟು ಕೀಟಗಳಿಗೆ ಇರುವ ಕಣ್ಣುಗಳು ಇನ್ನೂ ವಿಚಿತ್ರ. ಅವುಗಳದ್ದು ಸಂಯುಕ್ತಾಕ್ಷಿಗಳು. ಅಂದರೆ ಸಾವಿರಾರು ಪುಟ್ಟ ಪುಟ್ಟ ಕ್ಯಾಮೆರಾಗಳನ್ನು ಪಕ್ಕಪಕ್ಕ ಜೋಡಿಸಿ ಒಂದು ಕಟ್ಟು ಹಾಕಿದಂತೆ ಅವುಗಳ ಒಂದೊಂದು ಕಣ್ಣುಗಳು.

ನಾವುಗಳು ಕೀಟಗಳ ಎದುರಿಗೆ ಹೋಗಿ ನಿಂತರೆ ಅವುಗಳಿಗೆ ಇಂತಿಷ್ಟು ದೂರದಲ್ಲಿ ಯಾವುದೋ ಒಂದು ಆಕೃತಿಯು ಬಂದು ನಿಂತಿರುವ ಅಸ್ಪಷ್ಟ ಚಿತ್ರ ಮಾತ್ರ ಆ ಕೀಟಕ್ಕೆ ಸಿಗುತ್ತದೆ. ಆದರೆ ಅಲ್ಲಿ ಹೋಗಿರುವುದು ಎದುರು ಮನೆಯ ರಾಮಣ್ಣನಾ, ಮೂಲೆ ಮನೆಯ ಗಿರಿಜಕ್ಕಳಾ, ಅಥವಾ ಪಕ್ಕದ ಮನೆಯ ಷರೀಫನೋ ಎಂಬ ಸ್ಪಷ್ಟತೆ ಕೀಟಗಳ ಕಣ್ಣು ಮತ್ತು ಮಿದುಳಿನ ಸ್ವರೂಪದಿಂದಾಗಿ ಇರುವುದು ಸಾಧ್ಯವೇ ಇಲ್ಲ.

ಗೋಸುಂಬೆ ಪ್ರಾಣಿಗಳ ಕಣ್ಣುಗಳು ಮತ್ತೂ ವಿಶಿಷ್ಟವಾದದ್ದು. ನಾವೆಲ್ಲಾ ಎರಡು ಕಣ್ಣುಗಳಿದ್ದರೂ ನಮಗೆ ನೋಟ ಅಂದರೆ ಕಾಣುವ ದೃಶ್ಯ ಒಂದೇ. ನಮ್ಮ ಮಿದುಳು ಎರಡೂ ಕಣ್ಣಿನ ದೃಶ್ಯಗಳನ್ನು ಒಂದಾಗಿ ಕೂಡಿಸಿಕೊಳ್ಳುತ್ತದೆ. ಅಂದರೆ ಎರಡೂ ಕಣ್ಣಿನಿಂದ ಕಣ್ಣಿನಲ್ಲಿ ಮೂಡುವ ಚಿತ್ರವೂ ಒಂದೇ ಆಗಿರುವಂತೆ ಮಿದುಳು ಈ ಎರಡೂ ಚಿತ್ರಗಳಲ್ಲಿ ಸಮತೋಲನ ಮಾಡಿಕೊಳ್ಳುತ್ತದೆ. ಆದ್ದರಿಂದ ಕುರಿ, ಕೋಳಿ, ಹಸು, ಮನುಷ್ಯ ಇವರಿಗೆಲ್ಲಾ ಎರಡು ಕಣ್ಣುಗಳಿದ್ದರೂ ಎರಡೂ ಕಣ್ಣುಗಳಿಂದ ಸೇರಿದ ನೋಟ ಮಾತ್ರ ಒಂದೇ. ಆದರೆ ಗೋಸುಂಬೆಯು ಮರದ ಮೇಲೆ ಕುಳಿತು ತನ್ನ ಮುಂದು ಒಂದು ಕಣ್ಣನ್ನು ತಾನು ಹಿಡಿಯಬೇಕಾದ ತನ್ನ ಆಹಾರವಾದ ಹುಳುವಿನ ಕಡೆಗೆ ಗುರಿ ಇಡಲು ಬಳಸಿದರೆ, ಮತ್ತೊಂದು ಕಣ್ಣನ್ನು ಹಿಂದಿನಿಂದ ತನ್ನನ್ನು ಬೇಟೆಯಾಡಲು ಯಾವುದಾದರೂ ಪ್ರಾಣಿ ಹೊಂಚು ಹಾಕುತ್ತಿದೆಯಾ ಎಂದು ನೋಡಿಕೊಂಡು ಎಚ್ಚರ ವಹಿಸಬಲ್ಲುದು. ಅಂದರೆ ಏಕಕಾಲಕ್ಕೆ ಗೊಸುಂಬೆ ಒಂದು ಕಣ್ಣಿನಿಂದ ಮುಂದೆ ಮತ್ತೊಂದು ಕಣ್ಣಿನಿಂದ ಹಿಂದೆ ನೋಡಬಲ್ಲುದು. ಗೋಸುಂಬೆಯ ಕಣ್ಣಿನ ರಚನೆ ಅದಕ್ಕೆ ಅನುಕೂಲವಾಗಿದೆ. ಊಸರವಳ್ಳಿಯ ಮಿದುಳೂ ಈ ಕೆಲಸಕ್ಕೆ ಸಮರ್ಥವಾಗಿದೆ. ಮನುಷ್ಯರಿಗೆ ಇಂಥ ಅನುಕೂಲ ಇಲ್ಲ. ಆದ್ದರಿಂದಲೇ ಕಾರು, ಬಸ್ಸು, ಓಡಿಸುವ ಚಾಲಕರು ತಮ್ಮ ವಾಹನದ ಹಿಂದೆ ಏನು ಬರುತ್ತಿದೆ ಎಂದು ತಿಳಿಯಲು ಕನ್ನಡಿಯನ್ನು ಬಳಸಬೇಕಾಗುತ್ತದೆ. ಗೋಸುಂಬೆಯಂತಹ ಕಣ್ಣಿದ್ದರೆ ಅದು ಬೇಕಿರಲಿಲ್ಲ.

ಬುಡಬುಡಕೆ ಹಾವಿನ ವಿಶಿಷ್ಟ ಶಕ್ತಿ

ಅಮೇರಿಕದಲ್ಲಿ ವಾಸಿಸುವ ಬುಡಬುಡಕೆ ಹಾವು ಎಷ್ಟೇ ಕತ್ತಲಿದ್ದರೂ ಇಲಿಯನ್ನು ಅಥವಾ ತನ್ನ ಬೇಟೆಯನ್ನು ಗುರುತಿಸಿ ಬೇಟೆ ಆಡುತ್ತದೆ. ಬೇರೆ ಹಾವುಗಳಿಗೆ ಮತ್ತು ಪ್ರಾಣಿಗಳಿಗೆ ಮತ್ತು ಮನುಷ್ಯನಿಗೂ ಇದು ಸಾಧ್ಯ ಇಲ್ಲ. ಏಕೆಂದರೆ ಮನುಷ್ಯ ಮತ್ತು ಇತರ ಪ್ರಾಣಿಗಳ ಕಣ್ಣಿನಲ್ಲಿರುವ ಕೊರತೆಯೇ ಅದಕ್ಕೆ ಕಾರಣ.

ಸೂರ್ಯರಶ್ಮಿಯಲ್ಲಿ ನಾನಾ ಬಗೆಯ ಕಿರಣಗಳಿವೆ. ಅತಿನೇರಳೆ ಕಿರಣ, ಎಕ್ಸರೇ, ಬೆಳಕು, ಅವಗೆಂಪು, ರಡಾರ್ ಇತ್ಯಾದಿ. ಅದರಲ್ಲಿ ನಾವು ಬೆಳಕನ್ನು ಮಾತ್ರ ನೋಡಬಲ್ಲೆವು. ಹಗಲು ಸೂರ್ಯನ ಬೆಳಕನ್ನು ಪಡೆಯುವ ಪ್ರಾಣಿಗಳು ಮತ್ತು ಸಸ್ಯಗಳು ರಾತ್ರಿ ಹೊತ್ತಿನಲ್ಲಿ 'ಅವಗೆಂಪು' ಕಿರಣಗಳನ್ನು ಹೊರ ಸೂಸುತ್ತವೆ. ಇದರಿಂದ ಈ ಸಸ್ಯಗಳು ಮತ್ತು ಪ್ರಾಣಿಗಳ ದೇಹದ ಸುತ್ತಲು ಕತ್ತಲಲ್ಲೂ ಒಂದು ಬಗೆಯ 'ಅವಗೆಂಪು' ಬಣ್ಣದ ಆವರಣ ಇರುತ್ತದೆ. ಅಮೆರಿಕದ ಬುಡುಬುಡಕೆ ಹಾವಿನ ಕಣ್ಣಿನಲ್ಲಿ ಈ ಅವಗೆಂಪು ಬಣ್ಣವನ್ನು ಗುರುತಿಸುವ ಶಕ್ತಿ ಇದೆ. ಆದ್ದರಿಂದ ಕತ್ತಲಲ್ಲೂ ಈ ಹಾವು ತನ್ನ ಬೇಟೆಯಾದ ಇಲಿಯನ್ನು ಪತ್ತೆಹಚ್ಚಿ ಬೇಟೆ ಆಡುತ್ತದೆ. ಮನುಷ್ಯನಿಗೆ ಇಂತಹ ಶಕ್ತಿ ಇಲ್ಲ. ಮನುಷ್ಯನ ಕಣ್ಣಿನಲ್ಲೂ ಕೊರತೆಗಳು ಇವೆ. ಇದು ಮಾತ್ರ ಸತ್ಯ.

ಅಮೆರಿಕದ ಬುಡಬುಡಕೆ ಹಾವಿಗೆ ರಾತ್ರಿ ಅವಗೆಂಪು ಬಣ್ಣ ಗುರುತಿಸುವ ಶಕ್ತಿ ಹೇಗೆ ಬಂತು ಅಂತ ಯಾರಾದರೂ ಕೇಳಬಹುದು. ಬಹಳಷ್ಟು ಪ್ರಾಣಿಗೆ ಇಲ್ಲದ ಈ ಶಕ್ತಿ ಈ ಪ್ರಾಣಿಗೆ ಬಂದಿದೆ ಎಂದರೆ ಅದು ಆಕಸ್ಮಿಕ ಎಂದೇ ಹೇಳಬೇಕಾಗುತ್ತದೆ. ಕೆಟ್ಟು ನಿಂತಿರುವ ಗಡಿಯಾರ ಸಹ ದಿನಕ್ಕೆ ಎರಡು ಸಲ ಸರಿಯಾದ ಸಮಯವನ್ನು ತೋರಿಸುತ್ತದೆ. ಹಾಗೇ ಆಕಸ್ಮಿಕವಾಗಿ ಆಗುವ ಏನೋ ಬದಲಾವಣೆ ಅನುಕೂಲವಾಗಿದ್ದರೆ ಅದು ಉಳಿಯುತ್ತದೆ. ಇಲ್ಲವಾದಲ್ಲಿ ಆ ಜೀವಿಯೂ ಅನಾನುಕೂಲದಿಂದ ನಶಿಸಿಹೋಗುತ್ತದೆ. ಕಣ್ಣು ಮಾತ್ರವೇ ಅಲ್ಲ, ಜೀವಿಗಳಲ್ಲಿ ಆಗುವ ಎಲ್ಲ ಬದಲಾವಣೆಗಳೂ ಇಂತಹ ಆಕಸ್ಮಿಕಗಳೇ. ಯಾವುದೂ ಸೃಷ್ಟಿಕರ್ತನೊಬ್ಬನ ಉದ್ದೇಶಪೂರ್ವಕ ಸೃಷ್ಟಿಯಲ್ಲ. ಯಾರೋ ಒಬ್ಬ 'ಸೃಷ್ಟಿಕರ್ತ'ನು ಜೀವಿಗಳಲ್ಲಿ ಕಣ್ಣು ಹೀಗೆ ಇರಬೇಕೆಂದು ಯಾವ ಪ್ರಾಣಿಯ ಕಣ್ಣನ್ನೂ ಸೃಷ್ಟಿಸಿಲ್ಲ. ಆದ್ದರಿಂದಲೇ ಆಯಾಯ ಜೀವಿಗಳಿಗೆ ದಕ್ಕಿದ ಪರಿಸರ ಮತ್ತು ಪೋಷಣೆಗೆ ಅನುಗುಣವಾಗಿ ಜೀವಿಗಳಲ್ಲಿ ವೈವಿಧ್ಯಮಯವಾದ ರೂಪದ ಕಣ್ಣುಗಳು ವಿಕಾಸವಾಗಿರುವುದನ್ನು ನೋಡುತ್ತೇವೆ. ●

ಸಿಪಿಐ(ಎಂ) ಅಭ್ಯರ್ಥಿಗೆ ಮತ ನೀಡಲು ಕೃಷಿ ಕಾರ್ಮಿಕ ಸಂಘದ........

ಪುಟ 9 ರಿಂದ

ಪಕ್ಷಗಳನ್ನು ಬೆಂಬಲಿಸುವುದು ಈ ಚುನಾವಣಾ ಸಮರದಲ್ಲಿ ನಮ್ಮ ದೇಶ ಪ್ರೇಮಿ ಕರ್ತವ್ಯವಾಗಿದೆ. ಜನರು ಸಂಘಟಿತರಾಗುವುದನ್ನು, ಹಕ್ಕುಗಳಿಗಾಗಿ ಹೋರಾಟ ಮಾಡುವುದನ್ನು ಸಹಿಸದ, ಸರ್ಕಾರದ ತಪ್ಪು ನೀತಿಗಳನ್ನು ಟೀಕಿಸುವವರನ್ನು ದೇಶದ್ರೋಹಿಗಳೆಂದು ಪರಿಗಣಿಸುವ ಸರ್ಕಾರವನ್ನು ಸೋಲಿಸಬೇಕು. ಬಿಜೆಪಿಯನ್ನು ಸೋಲಿಸುವುದಕ್ಕಾಗಿ ಅದರ ವಿರುದ್ಧ ಸ್ಪರ್ಧಿಸುತ್ತಿರುವ ಜಾತ್ಯಾತೀತ ಪಕ್ಷಗಳನ್ನು ಬೆಂಬಲಿಸಬೇಕು.

ಸಿಪಿಐ(ಎಂ) ಮತ್ತು ಎಡ ಪಕ್ಷಗಳ ಪ್ರತಿನಿಧಿಗಳು ಹೆಚ್ಚಾಗಲಿ :

ಕೇಂದ್ರದಲ್ಲಿ ಜಾತ್ಯತೀತ ಸರ್ಕಾರ ಬಂದರೆ ಸಾಲದು. ಸರ್ಕಾರದ ಕಿವಿ ಹಿಂಡಿ ಅದು ಜನಪರವಾಗಿ ಕೆಲಸ ಮಾಡುವಂತಾಗಲು ಲೋಕಸಭೆಯಲ್ಲಿ ಸಿಪಿಐ(ಎಂ) ಮತ್ತು ಇತರ ಎಡ ಪಕ್ಷಗಳ ಪ್ರತಿನಿಧಿಗಳ ಸಂಖ್ಯೆ ಹೆಚ್ಚಾಗಬೇಕು. 2004 ರ ಚುನಾವಣೆಯಲ್ಲಿ 61 ಮಂದಿ ಎಡ ಪಕ್ಷಗಳ ಪ್ರತಿನಿಧಿಗಳು ಚುನಾಯಿತರಾಗಿದ್ದರು. ಅದರ ಪರಿಣಾಮದಿಂದ ಕಾಂಗ್ರೆಸ್ ಸರ್ಕಾರ ರಾಷ್ಟ್ರೀಯ ಗ್ರಾಮೀಣ, ಉದ್ಯೋಗ ಖಾತ್ರಿ ಕಾಯ್ದೆ, ಮಾಹಿತಿ ಹಕ್ಕುಗಳ ಕಾಯ್ದೆ, ಅರಣ್ಯ ಹಕ್ಕುಗಳ ಕಾಯ್ದೆ ಎಂಬ 3 ಜನಪರ ಕಾಯ್ದೆಗಳನ್ನು ಜಾರಿಗೆ ತರಲಾಗಿತ್ತು.

ಈ ಸಲವೂ ಕೂಡ ಲೋಕಸಭೆಯಲ್ಲಿ ಸಿಪಿಐ(ಎಂ) ಪ್ರತಿನಿಧಿಗಳ ಸಂಖ್ಯೆ ಹೆಚ್ಚಾಗಬೇಕು. ಆದ್ದರಿಂದ ಚಿಕ್ಕಬಳ್ಳಾಪುರ ಕ್ಷೇತ್ರದ ಮತದಾರರಿಗೆ, ಕೂಲಿಕಾರರಿಗೆ, ಬಡ ರೈತ ಹಾಗೂ ಕಾರ್ಮಿಕರಿಗೆ ಸಿಪಿಐ(ಎಂ) ಅಭ್ಯರ್ಥಿ ಏಕೈಕ ಆಯ್ಕೆ ಆಗಬೇಕು. ಬಿಜೆಪಿ ಮತ್ತು ಕಾಂಗ್ರೆಸ್ ಅಭ್ಯರ್ಥಿಗಳನ್ನು ಮುಲಾಜಿಲ್ಲದೆ ಸೋಲಿಸಬೇಕು.

ಸಿಪಿಐ(ಎಂ) ಪಕ್ಷ ಮಾತ್ರ ಕೂಲಿಕಾರರ ಪ್ರಶ್ನೆಗಳನ್ನು ಬೆಂಬಲಿಸುತ್ತಾ ಬಂದಿದೆ. ಕೂಲಿಕಾರರಿಗೆ, ಕೂಲಿ ಕೆಲಸ, ನ್ಯಾಯವಾದ ಕೂಲಿ, ವಾಸಕ್ಕೆ ಮನೆ, ಸಮರ್ಪಕ ರೇಷನ್, ಬಗರ್ ಹುಕುಂ ಸಾಗುವಳಿಗೆ ಹಕ್ಕು ಪತ್ರ, ಮುಂತಾದ ಪ್ರಶ್ನೆಗಳಿಗೆ ಕೂಲಿಕಾರರ ಸಂಘ ನಡೆಸುವ ಹೋರಾಟಗಳಿಗೆ ಸಿಪಿಐ(ಎಂ) ಬೆಂಬಲಿಸುತ್ತ ಬಂದಿದೆ.

ಆದ್ದರಿಂದ ಚಿಕ್ಕಬಳ್ಳಾಪುರ ಕ್ಷೇತ್ರಕ್ಕೆ ಚಿರಪರಿಚಿತರಾದ ಹೋರಾಟಗಾರ್ತಿ, ಕಾರ್ಮಿಕ ನಾಯಕಿ ಎಸ್. ವರಲಕ್ಷ್ಮಿ ಅವರನ್ನು ಮತ ನೀಡಿ ಗೆಲ್ಲಿಸಬೇಕೆಂದು ಕ್ಷೇತ್ರದ ಎಲ್ಲಾ ಕೂಲಿಕಾರರು, ರೈತರು ಹಾಗೂ ಕಾರ್ಮಿಕರಲ್ಲಿ ಕೂಲಿ ಕಾರ್ಮಿಕರ ಸಂಘ ಮನವಿ ಮಾಡುತ್ತದೆ.

ಸಮಾವೇಶ:

ಸಿಪಿಐ(ಎಂ) ಅಭ್ಯರ್ಥಿ ಎಸ್. ವರಲಕ್ಷ್ಮಿ ಬೆಂಬಲಾರ್ಥ ಕೃಷಿ ಕೂಲಿಕಾರರ ಸಂಘದ ಜಿಲ್ಲಾ ಸಮಿತಿಯು ಎಪ್ರಿಲ್ 10 ರಂದು ಚಿಕ್ಕಬಳ್ಳಾಪುರದಲ್ಲಿ ರಾಜಕೀಯ ಸಮಾವೇಶವನ್ನು ಏರ್ಪಡಿಸಲಾಗಿತ್ತು. ಸಂಘದ ರಾಜ್ಯ ಸಮಿತಿಯ ಅಧ್ಯಕ್ಷರಾದ ನಿತ್ಯಾನಂದಸ್ವಾಮಿ ಸಮಾವೇಶವನ್ನು ಉದ್ಘಾಟಿಸಿದರು. ಎಂ.ಪಿ. ಮುನಿವೆಂಕಟಪ್ಪ ಅಧ್ಯಕ್ಷತೆ ವಹಿಸಿದ್ದರು. ●

ನ್ಯಾಟೋ 70 : ವಿಸರ್ಜನೆಗೆ ಜಗತ್ತಿನಾದ್ಯಂತ ಒತ್ತಾಯ



ನಾಗರಾಜ ನಂಜುಂಡಯ್ಯ

ನ್ಯಾಟೋ (ಉತ್ತರ ಅಟ್ಲಾಂಟಿಕ್ ಒಪ್ಪಂದ ಸಂಘಟನೆ) ಮಿಲಿಟರಿ ಕೂಟದ 70 ನೇ ವಾರ್ಷಿಕೋತ್ಸವನ್ನು ವಾಷಿಂಗ್ಟನ್ ನಲ್ಲಿ ಏಪ್ರಿಲ್ 3–4 ರಂದು ಆಚರಿಸಲಾಯಿತು. ಅಮೆರಿಕಾದ ಮಿಲಿಟರಿ ಸಚಿವ ಮೈಕ್ ಪೊಂಪೆಯೊ ಈ ವಾರ್ಷಿಕೊತ್ಸವ ಆಚರಣೆಯನ್ನು ಸಂಘಟಿಸಿದ್ದರು.

ಆದರೆ ನ್ಯಾಟೋ 70 ವಾರ್ಷಿಕೋತ್ಸವವನ್ನು, ವಿಶ್ವದಾದ್ಯಂತ ವಿಶ್ವ ಶಾಂತಿ, ಸಾಮಾಜಿಕ ಪ್ರಗತಿಪರ ಚಳುವಳಿಗಳು ಮತ್ತು ಎಡ ಪಂಥೀಯ ಸಂಘಟನೆಗಳು ಪ್ರತಿಭಟನಾ ಕಾರ್ಯಕ್ರಮಗಳನ್ನು ನಡೆಸುವ ಮೂಲಕ ಆಚರಿಸಿದ್ದು ಗಮನ ಸೆಳೆದಿದೆ. ಈ ನ್ಯಾಟೋ ಸಂಸ್ಥೆಯು ವಿಶ್ವ ಶಾಂತಿ ಪ್ರಕ್ರಿಯೆಗೆ ಅಡ್ಡಲಾಗಿ ಕಾರ್ಯ ನಿರ್ವಹಿಸುತ್ತಿದೆ ಎಂಬುದು ಈ ಪ್ರತಿಭಟನೆ ಕಾರರ ಆರೋಪವಾಗಿದೆ. ಹಾಗೆಯೇ, ಯುಎಸ್ ಸಾಮ್ರಾಜ್ಯ ಶಾಹಿಯ ಮಿಲಿಟರಿ ಹಿತಾಸಕ್ತಿಗಳನ್ನು ಕಾಪಾಡಲು ನ್ಯಾಟೋ ಹೆಣಗುತ್ತಿದೆ. ಇದು ಇಡೀ ವಿಶ್ವದಲ್ಲಿ ಸಾವಿರಾರು ಅಮಾಯಾಕ ಜನರ ಸಾವು ನೋವುಗಳನ್ನು ಉಂಟು ಮಾಡುವ ಅಪಾಯಕಾರಿ ಸನ್ನಿವೇಶಕ್ಕೆ ಕಾರಣವಾಗಿದೆ ಎಂಬ ಕಟುಟೀಕೆಯನ್ನೂ ಅವರು ಮಾಡಿದ್ದಾರೆ.

ಶಾಂತಿಗೆ ಇಂದು ಪ್ರಧಾನ ಬೆದರಿಕೆ ನ್ಯಾಟೋ ಕೂಟದಿಂದ ಇದೆ. 21ನೇ ಶತಮಾನದ ಸಮಸ್ಯೆಗಳನ್ನು ಎದುರಿಸಿ ಶಾಂತಿಯುತ ಭವಿಷ್ಯ ಕಟ್ಟಿಕೊಳ್ಳುವುದು ಸಾಧ್ಯವಾಗುವುದು ನ್ಯಾಟೋ ಕೂಟ ಇಲ್ಲದಿದ್ದರೆ ಮಾತ್ರ ಎಂದು ಸ್ಕಾಟ್ಲೆಂಡಿನ ಶಾಂತಿ ಚಳುವಳಿಗಾರರು ಹೇಳಿದ್ದಾರೆ. ಎಡಿನ್‌ಬರೋ, ಗ್ಲಾಸ್ಗೋ ಮುಂತಾದ ಸ್ಕಾಟ್ಲೆಂಡಿನ ಹಲವು ಕಡೆ ಏಪ್ರಿಲ್ 4ರಂದು ನ್ಯಾಟೋ ವಿಸರ್ಜಿಸಬೇಕೆಂದು ಒತ್ತಾಯಿಸಿ ಪ್ರದರ್ಶನಗಳು ನಡೆದವು

ನ್ಯಾಟೋ ಏಪ್ರಿಲ್ 4, 1949 ರಲ್ಲಿ, ಎರಡನೇ ಮಹಾಯುದ್ಧದ ನಂತರ ಸ್ಥಾಪನೆಯಾಯಿತು. ಸೋವಿಯತ್ ಒಕ್ಕೂಟದ ಹೆಚ್ಚುತ್ತಿರುವ ಪ್ರಭಾವಕ್ಕೆ ತಡೆಒಡ್ಡುವುದು ಹಾಗೂ ಆ ಮೂಲಕ ಯುರೋಪಿನಾದ್ಯಂತ ಅಮೆರಿಕಾದ ಪ್ರಭಾವವನ್ನು ಕಾಯ್ದುಕೊಳ್ಳುವುದು ಇದರ ಮೂಲ ಉದ್ದೇಶವಾಗಿತ್ತು. ಆದರೆ ಇದೀಗ ನ್ಯಾಟೋ ಇಡೀ ಜಗತ್ತಿಗೆ ಮಿಲಿಟರಿ ಬೆದರಿಕೆಗೆ ಒಡ್ಡುತ್ತಿದೆ ಎಂದು 'ಕೆನಡಾ ಶಾಂತಿ ಕಾಂಗ್ರೆಸ್' ನಾಯಕರು ಹೇಳಿಕೆ ನೀಡಿದ್ದಾರೆ. ಪ್ರತಿ ಬಾರಿ ಶಾಂತಿ ಕಾರ್ಯಕರ್ತರು ಮಿಲಿಟರಿ ಖರ್ಚುಗಳನ್ನು ಕಡಿತಗೊಳಿಸಲು ಅಥವಾ ಯುಎನ್ ಪರಮಾಣು ಶಸ್ತ್ರಾಸ್ತ್ರಗಳ ಒಪ್ಪಂದಗಳಿಗೆ ಕೆನಡಾ ಸಹಿ ಹಾಕಬೇಕು, ಸೌದಿ ಅರೇಬಿಯಾಕ್ಕೆ ಶಸ್ತ್ರಾಸ್ತ್ರ ರಫ್ತು ಮಾಡಬಾರದು ಎಂದು ಒತ್ತಾಯಿಸದಾಗಲೆಲ್ಲ, ಅದು ನ್ಯಾಟೋ ಒಪ್ಪಂದದಿಂದಾಗಿ ಸಾಧ್ಯವಿಲ್ಲ ಎಂಬ ಉತ್ತರ ಕೆನಡಾ ಸರಕಾರದಿಂದ ಬರುತ್ತದೆ. ಆದರೆ ನಿಜವಾಗಿಯೂ ಅದು ಸರಕಾರವನ್ನು ನಿರ್ದೇಶಿಸುತ್ತಿರುವ ಮಿಲಿಟರಿ–ಕೈಗಾರಿಕಾ ಸಂಕೀರ್ಣದ ಉತ್ತರ. ಆದ್ದರಿಂದ ನ್ಯಾಟೋದಿಂದ ಕೆನಡಾ ಹೊರ ಬರುವುದು, ಶಾಂತಿ ಮತ್ತು ನಿಶ್ಶಸ್ತ್ರೀಕರಣದ ಮೇಲೆ ಆಧಾರಿತವಾದ ದೇಶದ ನಿಜವಾದ ಸಾರ್ವಭೌಮ ಮತ್ತು ಸ್ವತಂತ್ರ ವಿದೇಶಾಂಗ ನೀತಿಯ ದೃಷ್ಟಿಯಿಂದಲೂ ಅನಿವಾರ್ಯ, ಎಂದೂ 'ಕೆನಡಾ ಶಾಂತಿ ಕಾಂಗ್ರೆಸ್' ಹೇಳಿಕೆ ತಿಳಿಸಿದೆ.

ಮಾರ್ಚ್ 30 ರಂದು ಕ್ಯಾಲ್ಗರಿ, ಹ್ಯಾಲಿಫ್ಯಾಕ್ಸ್, ರೆಜಿನಾ, ಫ್ರೈಕ್ಸ್, ಒಟ್ಟಾವಾ, ಟೊರೊಂಟೊ, ವ್ಯಾಂಕೂವರ್ ಮತ್ತು ವಿನ್ನಿ ಪೆಗ್ ಸೇರಿದಂತೆ ಹಲವಾರು ಕೆನಡಿಯನ್ ನಗರಗಳಲ್ಲಿ ನ್ಯಾಟೋ ವಿರುದ್ಧ ಅನೇಕ ಪ್ರತಿಭಟನಾ ಮೆರವಣಿಗೆಯನ್ನು ನಡೆಸಿ ನ್ಯಾಟೋ ವಿಸರ್ಜಿಸಬೇಕು ಇಲ್ಲವೆ ಕೆನಡಾ ನ್ಯಾಟೋದಿಂದ ಹೊರ ಬರಬೇಕು ಎಂದು ಒತ್ತಾಯಿಸಿದೆ.

'ನ್ಯಾಟೋ ವಿಸರ್ಜಿಸಿ ಇಲ್ಲವೆ ಅದರಿಂದ ಹೊರಬನ್ನಿ'

ಮಾರ್ಚ್ 30 ರಂದು ಅಮೆರಿಕದ ಯುದ್ಧ–ವಿರೋಧಿ ಒಕ್ಕೂಟ ವಾಶಿಂಗ್ಟನ್ ನಲ್ಲಿ ಭಾರೀ ಪ್ರತಿಭಟನೆ ಏರ್ಪಡಿಸಿತ್ತು. ಪ್ರತಿಭಟನೆ ವೆನೆಜುವೇಲಾದ ಸರಕಾರದ ವಿರುದ್ಧ ಅಮೆರಿಕದ ಸರಕಾರ ನಡೆಸುತ್ತಿರುವ ಕ್ಷಿಪ್ರಕ್ರಾಂತಿಯ ಪ್ರಯತ್ನಗಳನ್ನು ಪ್ರತಿರೋಧಿಸುತ್ತಿರುವ ವೆನೇಜುವೇಲಾದ ಜನತೆಯ ಜತೆ ಸೌಹಾರ್ಧತೆ ವ್ಯಕ್ತಪಡಿಸಲಾಯಿತು. 'ನ್ಯಾಟೋದ ಜನಾಂಗೀಯ ಯುದ್ಧಗಳ ವಿರುದ್ಧ ಐಕ್ಯ ಹೋರಾಟ', 'ವೆನೆಜುವೇಲಾದಲ್ಲಿ ಮೂಗು ತೂರಿಸಬೇಡಿ', 'ನ್ಯಾಟೋ ಬಾಂಬುಗಳು=ಲಿಬ್ಯಾದ ಗುಲಾಮಗಿರಿ', 'ನ್ಯಾಟೋ 10ಲಕ್ಷ ಇರಾಕಿಯರ ನರಮೇಧ ಮಾಡಿದೆ', 'ನ್ಯಾಟೋ ಯುದ್ಧ–ಅಪರಾಧಗಳನ್ನು ನಿಲ್ಲಿಸಿ', 'ಯು. ಎಸ್. ದಿಗ್ಬಂಧನ ವೆನೆಜುವೇಲಾದ ಬಿಕ್ಕಟ್ಟು ಸೃಷ್ಟಿಸಿದೆ', ಲ್ಯಾಟಿನ್ ಅಮೆರಿಕ ಮತ್ತು ಕ್ಯಾರಿಬೀಯಾದಿಂದ ಯು. ಎಸ್. ಹೊರದಬ್ಬಿ' ಎಂಬಿತ್ಯಾದಿ ಬ್ಯಾನರುಗಳನ್ನು ಪ್ಲೆಕಾರ್ಡುಗಳನ್ನು ಹಿಡಿದಿದ್ದರು.



ಯುರೋಪಿನ ಎಲ್ಲೆಡೆ ಕಮ್ಯುನಿಸ್ಟ್ ಮತ್ತು ಎಡ ಪಕ್ಷಗಳು ಹಾಗೂ ಪ್ರಗತಿಪರ ಚಳುವಳಿಗಳು ಜಂಟಿಯಾಗಿ ನ್ಯಾಟೋ–70ನ್ನು ಯುಗೋಸ್ಲಾವಿಯದ ನಡೆಸಿದ ಮೇಲೆ ಭೀಕರ ದಾಳಿಯ 20ನೇ ವಾರ್ಷಿಕವಾಗಿ ಆಚರಿಸಲಾಗಿತ್ತು. ಆ ಭೀಕರ ದಾಳಿಯಲ್ಲಿ ಆ ದೇಶವನ್ನು ಧರ್ಮ–ಜನಾಂಗದ ಮೂಲಕ ಛಿದ್ರಗೊಳಿಸಿ ನಾಶ ಮಾಡಿದ್ದನ್ನು ನೆನಪಿಸಿಕೊಳ್ಳಲಾಯಿತು.


ನ್ಯಾಟೋ ಒಂದು ಸಾಮ್ರಾಜ್ಯಶಾಹಿ ಆಕ್ರಮಣಶೀಲ ಕಾರ್ಯ ತಂತ್ರದ ಮೂಲಭೂತ ಸಾಧನವಾಗಿದೆ. ಇದು ವಿಶ್ವ ಶಾಂತಿ ಪ್ರಕ್ರಿಯೆಗೆ ಅಪಾಯ ತಂದೊಡ್ಡಿದೆ ಮತ್ತು ಮಾನವೀಯತೆಯನ್ನು ಬೆದರಿಸುತ್ತದೆ. ಶಾಂತಿಯ ರಕ್ಷಣೆಗೆ ನ್ಯಾಟೋವನ್ನು ವಿಸರ್ಜನೆ ಮಾಡಬೇಕಾದ ಅಗತ್ಯವಿದೆ. ಏಕೆಂದರೆ ವೆನೆಜುವೆಲಾದ ಮೇಲೆ ಪ್ರಾಕ್ಸಿ ಯುದ್ದದ ಮೂಲಕ ಕ್ರಿಮಿನಲ್ ದಾಳಿ ನಡೆಸುತ್ತಿರುವ ಯುಎಸ್ ನ ನೀತಿಗೆ ನ್ಯಾಟೋ ಬೆಂಬಲವಿದೆ. ಆದ್ದರಿಂದ ನ್ಯಾಟೋದ 70ನೇ ವಾರ್ಷಿಕವನ್ನು, ಸಾಮಾಜಿಕ ಪ್ರಗತಿ ಮತ್ತು ಶಾಂತಿಯ ಪರವಾಗಿರುವ ಶಕ್ತಿಗಳು ನಿಶ್ಶಸ್ತ್ರೀಕರಣದ ಹಾಗೂ ಸಾಮ್ರಾಜ್ಯಶಾಹಿಯ ಆಕ್ರಾಮಕ ಮಧ್ಯಪ್ರವೇಶದ ವಿರುದ್ಧ ಹೋರಾಟವನ್ನು ಬಲ ಪಡಿಸುವ ಮೂಲಕ ಎದುರಿಸಬೇಕು, ಎಂದು ಪೋರ್ಚುಗೀಸ್ ಕಮ್ಯುನಿಸ್ಟ್ ಪಕ್ಷ ಘೋಷಿಸಿದೆ. 1974ರಲ್ಲಿ ಪೋರ್ಚುಗಲ್ ನಲ್ಲಿ ಸರ್ವಾಧಿಕಾರಿಯ ವಿರುದ್ಧ ಹೋರಾಟದಲ್ಲಿ, ಸರ್ವಾಧಿಕಾರಿಯ ಪರವಾಗಿ ಕಾನೂನು–ಬಾಹಿರ ಮತ್ತು ಕ್ರಿಮಿನಲ್ ಮಧ್ಯಪ್ರವೇಶವನ್ನು ಅದು ನೆನಪಿಸಿಕೊಂಡಿದೆ.

ಜರ್ಮನ್ ಎಡಪಕ್ಷದ ನಾಯಕರು ಬರೆದ ಲೇಖನದಲ್ಲಿ ನ್ಯಾಟೋ ವಿಶ್ವದ ಭದ್ರತೆಗೆ ಅತಿ ದೊಡ್ಡ ಅಪಾಯ, ಈ ಮಿಲಿಟರಿ ಕೂಟ ಅಂತರ್ರಾಷ್ಟ್ರೀಯ ಕಾನೂನುಗಳನ್ನು ಮುರಿಯುತ್ತಾ ಮತ್ತು ವಿಶ್ವಸಂಸ್ಥೆಯನ್ನು ನಿರ್ಲಕ್ಷಿಸುತ್ತಾ ಬಂದಿದೆ, ಎಂದು ಹೇಳಿದ್ದಾರೆ.

ನ್ಯಾಟೋ ಜಗತ್ತಿನಲ್ಲಿ ಇಂದು ಅತಿ ದೊಡ್ಡ ಮಿಲಿಟರಿ ಕೂಟ. ಅತಿ ಹೆಚ್ಚು ಅಣ್ವಸ್ತ್ರಗಳಿರುವ ಅತಿ ದೊಡ್ಡ ಮಿಲಿಟರಿ ಬಜೆಟ್ ಇರುವ ಕೂಟ. 'ಶಕ್ತಿಯ ಮೂಲಕ ಶಾಂತಿ'ಯ ಯ ಹೆಸರಿನಲ್ಲಿ ಶಸ್ತ್ರಾಸ್ತ್ರಗಳ ಪೈಪೋಟಿಯನ್ನು ಉತ್ತೇಜಿಸಲು ನ್ಯಾಟೋ ಕಳೆದ ಎಪ್ಪತ್ತು ವರ್ಷಗಳಿಂದ ಕೆಲಸ ಮಾಡುತ್ತಿದೆ. ಅಂತರ್ರಾಷ್ಟ್ರೀಯ ಕಾನೂನುಗಳನ್ನು ಮುರಿದು ಯುಗೋಸ್ಲಾವಿಯ, ಅರ್ಘಘಾನಿಸ್ತಾನ, ಪಾಕಿಸ್ತಾನ, ಲಿಬ್ಯಾಗಳ ಮೇಲೆ ಬಾಂಬ್ ದಾಳಿಗಳನ್ನು ಮಾಡಿದೆ. ರಷ್ಯಾದ ಜೊತೆ ಉದ್ವಿಗ್ನತೆಯನ್ನು ಉಂಟುಮಾಡುತ್ತಿದೆ. ಅಣ್ವಸ್ತ್ರ ಯುದ್ಧದ ಅಪಾಯವನ್ನು ಗಮನಾರ್ಹವಾಗಿ ಹೆಚ್ಚಿಸಿದೆ., ಎಂದು ಅಂತರ್ರಾಷ್ಟ್ರೀಯ ಶಾಂತಿ ಬ್ಯುರೊ ಈ ಸಂದರ್ಭದಲ್ಲಿ ಹೇಳಿದೆ.

ನ್ಯಾಟೋದೊಳಗೆ 'ಜಗಳ'ಗಳು

ಹೀಗೆ ಒಂದು ಕಡೆ ಶಾಂತಿ ಮತ್ತು ಸಾಮಾಜಿಕ ಪ್ರಗತಿಯ ಶಕ್ತಿಗಳು ನ್ಯಾಟೋವನ್ನು ವಿಸರ್ಜಿಸಬೇಕು, ತಮ್ಮ ದೇಶಗಳು ಆ ಕೂಟದಲ್ಲಿ ಇದ್ದರೆ ಅದರಿಂದ ಹೊರಬರಬೇಕು ಎಂದು ಘೋಷಿಸುತ್ತಿದ್ದರೆ, ಇನ್ನೊಂದು ಕಡೆ ನ್ಯಾಟೋ–70ರ ಅಧಿಕೃತ ಸಮಾರಂಭದಲ್ಲಿ ಮಿಲಿಟರಿ ಕೂಟದೊಳಗೆ ಭಿನ್ನ ದನಿಗಳು ಕೇಳಬಂದವು. ನಾಟೋವನ್ನು ಮುನ್ನಡೆಸುವ ವಿಧಾನದ ಬಗ್ಗೆ ಯು.ಎಸ್ ಮತ್ತು ಯುರೋಪಿನ ನಡುವೆ ಇರುವ ಭಿನ್ನಾಭಿಪ್ರಾಯಗಳು ಹೊರಬಂದವು. ರಶ್ಯ ಎಷ್ಟು ಅಪಾಯಕಾರಿ, ಚೀನಾದ ಬೆದರಿಕೆ ಎದುರಿಸುವುದು ಹೇಗೆ, ರಶ್ಯ–ಚೀನಾಗಳೊಂದಿಗೆ ಯಾವ ರೀತಿಯ ಸಂಬಂಧ ಇರಬೇಕು, ಟರ್ಕಿ ಸ್ವತಂತ್ರ ನೀತಿ ಸರಿಯೇ ಎಂಬಿತ್ಯಾದಿ ವಿಷಯಗಳ ಬಗ್ಗೆ ಸಮಾವೇಶದಲ್ಲಿಯೇ ಸಾಕಷ್ಟು 'ಜಗಳ'ಗಳು ಆದವು. ಅಧ್ಯಕ್ಷ ಟ್ರಂಪ್ ನ್ಯಾಟೋದ ಬಗ್ಗೆ ಮತ್ತು ಎಲ್ಲದರ ಬಗ್ಗೆ ತಮ್ಮ ವಿಶಿಷ್ಟ ವಿರೋಧಾಭಾಸದ ನಿಲುವುಗಳನ್ನು ಪೂರ್ಣವಾಗಿ ಪ್ರದರ್ಶಿಸಿದರು. ನ್ಯಾಟೋ ದ ಖರ್ಚಿನ ದೊಡ್ಡ ಭಾಗವನ್ನು ಯು. ಎಸ್ ವಹಿಸುತ್ತಿದೆ. ಇದು ಬದಲಾಗಿ ತಮ್ಮ ಭಾಗ ಯುರೋಪಿಯನ್ ದೇಶಗಳು ಹೆಚ್ಚಿಸಬೇಕು ಎಂದು ತಮ್ಮ ದೂರು ಹೇಳಿದರು. ನ್ಯಾಟೋ ಯುರೋಪಿನ ಹೊರಗೆ ಮಿಲಿಟರಿ ಕಾರ್ಯಾಚರಣೆಗೆ ಇಳಿದಾಗಲೆಲ್ಲ, ಅದು ಏಶ್ಯಾ ಇರಲಿ, ಆಫ್ರಿಕಾ, ದಕ್ಷಿಣ ಅಮೆರಿಕಾ ಇರಲಿ ಅದು ಯು.ಎಸ್. ಹಿತಾಸಕ್ತಿ ಕಾಪಾಡಲು ಎಂದು ಅವರು ಮರೆತಂತಿತ್ತು. ಅದರ ಮತ್ತು ಭಾರಿ ವೆಚ್ಚದ ಎರಡು ದಶಕಗಳ ಅಫ್ಘಾನಿಸ್ತಾನ ಯುದ್ಧದ ಬಗ್ಗೆ ನ್ಯಾಟೋದ ಮಹಾ ಕಾರ್ಯದರ್ಶಿ ಬಗ್ಗೆ ಟ್ರಂಪ್ ಅವರಿಗೆ ಈ ಕುರಿತು ನೆನಪಿಸಿದರು.



ಜರ್ಮನಿ ರಶ್ಯದ ಜತೆ ಇಂಧನ ಅನಿಲ ಪೂರೈಕೆ ಬಗ್ಗೆ ವ್ಯವಹರಿಸಿ ಅದರ ಮೇಲೆ 'ಅವಲಂಬಿತವಾಗುವುದು' ಭದ್ರತೆ ದೃಷ್ಟಿಯಿಂದ ಸರಿಯಲ್ಲ ಎಂದು ಆಕ್ಷೇಪಿಸಿದರು. ಇನ್ನೊಂದು ಕಡೆ ರಶ್ಯ ಅಷೇನೂ ದೊಡ್ಡ ಬೆದರಿಕೆ ಅಲ್ಲ ಎಂದೂ ಹೇಳಿದರು. ಚೀನಾದ ಜತೆ ನಿಕಟ ಆರ್ಥಿಕ ಸಂಬಂಧ ಹೊಂದುವ ಬಗ್ಗೆ ಸಹ ಅವರು ಆಕ್ಷೇಪಿಸಿದರು. ಚೀನಾದ ಹೊಸ ಸಿಲ್ಕ್ ರೋಡ್ ಯೋಜನೆಯಲ್ಲಿ ಭಾಗಿಯಾಗಲು ಇಟಲಿ ಆಗಲೇ ಒಪ್ಪಿದ್ದು, ಇತರ ದೇಶಗಳು ಹಿಂಬಾಲಿಸುವುದರ ಬಗ್ಗೆ ತಮ್ಮ ಆತಂಕ ವ್ಯಕ್ತ ಪಡಿಸಿದರು. ಜರ್ಮನಿಗೆ ಚೀನಾ ಎರಡನೇ ಅತಿ ದೊಡ್ಡ ವಾಣಿಜ್ಯ ಪಾಲುದಾರ ಆಗಿರುವುದರ 'ಅಪಾಯ'ದ ಬಗ್ಗೆ ಪ್ರಸ್ತಾಪಿಸಿದರು. ಚೀನಾ ಮತ್ತು ರಶ್ಯಾ ಗಳ ಜತೆ ಸಾಮಾನ್ಯ ಆರ್ಥಿಕ ಸಂಬಂಧ ಹೊಂದುವುದರ ಬಗ್ಗೆ, ಅವುಗಳ ಬಗ್ಗೆ ತೀರಾ ಆಕ್ರಾಮಕ ಧೋರಣೆ ಬಗ್ಗೆ ಮತ್ತು ಯು.ಎಸ್. ಹಿತಾಸಕ್ತಿ ಬಗ್ಗೆ ಗಮನ ಕೊಡುವ ನ್ಯಾಟೋದ ವೆಚ್ಚದ ಹೆಚ್ಚಿನ ಭಾಗ ವಹಿಸುವುದರ ಬಗ್ಗೆ ಯುರೋಪಿಯನ್ ದೇಶಗಳ ನಿರಾಸಕ್ತಿ ನಿರ್ಲಕ್ಷ ಮತ್ತು ಆ ಬಗ್ಗೆ ಯು. ಎಸ್ ಆಕ್ರೋಶ ಹಿಂದಿನಿಂದಲೂ ಇದೆ. ಆದರೆ ಈ ಸಮಾವೇಶದಲ್ಲಿ ಟ್ರಂಪ್ ಅವರ ವಿಶಿಷ್ಟ ವಿಚಿತ್ರ ಪ್ರಸ್ತುತ ಪಡಿಸುವ ಶೈಲಿಯಿಂದಾಗಿಯೂ ಅದು 'ಜಗಳ'ದ ಮಟ್ಟ ಮುಟ್ಟಿತ್ತು. ಟರ್ಕಿ ರಶ್ಯದಿಂದ ರಕ್ಷಣಾ ವ್ಯವಸ್ಥೆಗಳನ್ನು ಖರೀದಿ ಮಾಡುವ ಬಗ್ಗೆ ಮತ್ತು ಆ ಮೂಲಕ ಕರಿ ಸಮುದ್ರದಲ್ಲಿ ರಶ್ಯ ವಿರೋಧಿ 'ರಕ್ಷಣಾ ವ್ಯವಸ್ಥೆ'ಯಲ್ಲಿ ಭಾಗವಹಿಸದೆ ಹೋಗುವ ಸಾಧ್ಯತೆ ಬಗ್ಗೆ ಟ್ರಂಪ್ ತೀವ್ರ ಆಕ್ಷೇಪ ವ್ಯಕ್ತ ಪಡಿಸಿದರು. ಇದೇ ಧೋರಣೆ ಮುಂದುವರೆಸಿದರೆ ಟರ್ಕಿ ನ್ಯಾಟೋದಲ್ಲಿ ಮುಂದುವರೆಯಬಾರದು ಎಂದೂ ಹೇಳಿದರು. ಆದರೆ ನ್ಯಾಟೋದಲ್ಲಿ ಎಲ್ಲಾ ನಿರ್ಣಯಗಳನ್ನು ಸರ್ವಾನುಮತದಿಂದ ತೆಗೆದುಕೊಳ್ಳುವುದರಿಂದ ಇದರ ತಕ್ಷಣದ ಪರಿಣಾಮಗಳು ಇರಲಿಕ್ಕಿಲ್ಲ. ●

JANASHAKTHI KANNADA VARA PATRIKE APRIL 15-21, 2019 Price: Rs. 10/- Date of Publication: 12 APRIL 2019 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283

ಉಡುಪಿ ಜಿಲ್ಲೆ ಸಿಪಿಐ(ಎಂ) ರಾಜಕೀಯ ಸಮಾವೇಶ

ಮೋದಿ ಸುಳ್ಳಿನ ಸರದಾರ – ಯು. ಬಸವರಾಜ್



ಬಿ.ಜೆ.ಪಿ. ನೇತೃತ್ವದ ಮೋದಿ ಸರಕಾರ ಕಳೆದ ಚುನಾವಣಾ ಸಂದರ್ಭದಲ್ಲಿ ನೀಡಿದ ಭರವಸೆಗಳನ್ನು ಈಡೇರಿಸಿಲ್ಲ. ಯುವಕರಿಗೆ 2 ಕೋಟಿ ಉದ್ಯೋಗ ನೀಡುವುದಾಗಿ ವಾಗ್ದಾನ ಮಾಡಿದರು. ಆದರೆ ಉದ್ಯೋಗ ಸೃಷ್ಠಿಯೇ ಆಗಿಲ್ಲ. ಇರುವ ಉದ್ಯೋಗ ಕಿತ್ತುಕೊಳ್ಳಲಾಗಿದೆ. ಕನಿಷ್ಠ 2 ಲಕ್ಷ ಉದ್ಯೋಗ ಕೊಟ್ಟಿಲ್ಲ. ವಿದೇಶದಲ್ಲಿರುವ ಕಪ್ಪು ಹಣ ತರುತ್ತೇವೆ ಎಂದರು. ಅಧಿಕಾರ ಬಂದು 5 ವರ್ಷ ಕಳೆದರೂ ಹಣ ಬಂದಿಲ್ಲ. ಜನರ ಖಾತೆಗೆ ರೂ. 15 ಲಕ್ಷ ಜಮೆ ಮಾಡುವ ಭರವಸೆ ಈಡೇರಿಲ್ಲ. ಬ್ಯಾಂಕ್‌ಗಳಿಗೆ ಸಾವಿರಾರು ಕೋಟಿ ವಂಚನೆ ಮಾಡಿರುವ ನೀರವ್ ಮೋದಿ, ಮೆಹುಲ್ ಚೋಕ್ಸಿ, ಮಲ್ಯ ವಿದೇಶಕ್ಕೆ ಓಡಿ ಹೋಗಿದ್ದಾರೆ. ಇದೇ ಚೋಕ್ಸಿಗೆ ಮೋದಿ ಆತಿಥ್ಯ ನೀಡಿದ್ದರು ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಯು. ಬಸವರಾಜ್ – ಆರೋಪಿಸಿದ್ದಾರೆ.

ಬೈಂದೂರಿನ ರೋಟರಿ ಭವನದಲ್ಲಿ ನಡೆದ ಸಿಪಿಐ(ಎಂ) ರಾಜಕೀಯ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

ರಾಜ್ಯದ ರೈತರು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಪಡೆದ ರೂ. 42,000/– ಕೋಟಿ ಸಾಲ ಮನ್ನಾ ಮಾಡಲು ಕೇಂದ್ರ ಸರಕಾರ ಸಿದ್ದವಿಲ್ಲ. ರೈತರ ಪರವಲ್ಲದ ಸರಕಾರ ಉದ್ಯಮಿಗಳ 6 ಲಕ್ಷ ಕೋಟಿ ಸಾಲ ಮನ್ನಾ ಮಾಡಿದೇ ಎಂದು ಹೇಳಿದರು.

ಸಿಪಿಐ(ಎಂ) ಮುಖಂಡರಾದ ಕೆ.ಶಂಕರ, ಬಾಲಕೃಷ್ಣ ಶೆಟ್ಟಿ ಸಮಾವೇಶವನ್ನುದ್ದೇಶಿಸಿ ಮಾತನಾಡುತ್ತಾ, ಚುನಾವಣೆ ಹತ್ತಿರವಾಗುತ್ತಿದ್ದಂತೆ ಹಿಂದುತ್ವ, ರಾಮ, ಕೃಷ್ಣರನ್ನು ನೆನಪಿಸುವ ಇವರು ಅಧಿಕಾರದ ಮದ ಬಂದಾಗ ಬ್ರಷ್ಟಾಚಾರ, ಹಗರಣ, ಮಿತ್ರ ದ್ರೋಹ, ಬ್ಲೂಫಿಲ್ಮ್ ವೀಕ್ಷಣೆ, ರಾಸಲೀಲೆಯಲ್ಲಿ ತಲ್ಲೀನರಾಗಿ, ಕೊನೆಗೆ ಜೈಲು ಪಾಲಾಗಿದ್ದು, ಜಿಲ್ಲೆಯ ಜನತೆ ಮರೆಯಲು ಸಾಧ್ಯವೇ? ಎಂದು ಪ್ರಶ್ನೆ ಮಾಡಿದರು.

ಬೈಂದೂರು, ನಾಡ, ಕುಂದಾಪುರ, ಸಿದ್ಧಾಪುರದಲ್ಲಿ ಸಿಪಿಐ(ಎಂ) ಬೈಂದೂರು ಮತ್ತು ಕುಂದಾಪುರ ತಾಲೂಕು ಸಮಿತಿಗಳ ನೇತೃತ್ವದಲ್ಲಿ ರಾಜಕೀಯ ಸಮಾವೇಶಗಳು ಯಶಸ್ವಿಯಾಗಿ ಜರಗಿವೆ.

ಸಿಪಿಐ(ಎಂ) ಪಕ್ಷದ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಚ್. ನರಸಿಂಹ, ಸುರೇಶ ಕಲ್ಲಾಗರ, ವೆಂಕಟೇಶ ಕೋಣಿ, ಮುಖಂಡರಾದ ರಾಜೀವ ಪಡುಕೋಣೆ, ಯು. ದಾಸಭಂಡಾರಿಯವರು ರಾಜಕೀಯ ಸಮಾವೇಶಗಳಲ್ಲಿ ಮಾತನಾಡಿದರು.

ಪ್ರಧಾನಿಯಾಗಿ 4 ವರ್ಷ ಕಳೆದರೂ ಲೋಕಪಾಲರನ್ನು ನೇಮಿಸದ ಮೋದಿ ಚುನಾವಣೆ ಹತ್ತಿರ ಬಂದಾಗ ಲೋಕಪಾಲರನ್ನು ನೇಮಕ ಮಾಡಿದ್ದಾರೆ. ಗುಜರಾತ್ ಮುಖ್ಯಮಂತ್ರಿಯಾಗಿದ್ದ 9 ವರ್ಷಗಳಲ್ಲಿ ಲೋಕಾಯುಕ್ತರನ್ನು ನೇಮಿಸಿಲ್ಲ. ಬ್ರಷ್ಟಾಚಾರ ಬಯಲಿಗೆ ಬರಬಹುದೆಂಬ ಕಾರಣಕ್ಕೆ.

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಅಮಿತಾ ಶಾ ಜೈಲಿಗೆ ಹೋದವರು, ಗುಜರಾತ್‌ನಿಂದ ಗಡಿಪಾರು ಆಗಿದ್ದವರು. ಈ ದೇಶಕ್ಕೆ ದೊಡ್ಡ ಗಂಡಾಂತರಕಾರಿ ಕಳನಾಯಕರಾಗಿದ್ದಾರೆ ಎಂದು ರಾಜಕೀಯ ಸಮಾವೇಶದಲ್ಲಿ ಅಭಿಪ್ರಾಯ ಪಡಲಾಯ್ತು.

ಉಚಿತವಾಗಿ ಅಕ್ಕಿ ಕೊಟ್ಟರೆ ಜನ ಸೋಮಾರಿಗಳಾಗುತ್ತಾರೆ ಎಂದು ಬಿಜೆಪಿ ನಾಯಕರು ಆರೋಪಿಸಿದ್ದರು. ಆಗ ಅವರು ಇದು ಕೇಂದ್ರ ಸರಕಾರದ ದುಡ್ಡಲ್ಲಿ ನಡೆಯುವ ಯೋಜನೆ ಎಂದು ಎಲ್ಲೂ ಹೇಳಿಕೊಂಡಿರಲಿಲ್ಲ. ಆದರೆ ಈಗ ಪ್ರಚಾರ ಗಿಟ್ಟಿಸಿಕೊಳ್ಳುವ ಕೆಲಸಕ್ಕೆ ಇಳಿದಿದ್ದಾರೆ. ದೇಶದ ಸುಮಾರು 18 ರಾಜ್ಯಗಳಲ್ಲಿ ಬಿಜೆಪಿ ಆಡಳಿತದಲ್ಲಿರುವ ಒಂದೇ ಒಂದು ರಾಜ್ಯದಲ್ಲಿ ಉಚಿತ ಅಕ್ಕಿ ನೀಡುವ ಯೋಜನೆ ಇಲ್ಲ ಎಂಬುದಾಗಿ ಸಮಾವೇಶದಲ್ಲಿ ಟೀಕಿಸಲಾಯಿತು.

ಸಿಪಿಐ(ಎಂ) ಮುಖಂಡರಾದ ನಾಗರತ್ನ ನಾಡ, ಗಣೇಶ ತೊಂಡೆಮಕ್ಕಿ, ಮನೋರಮಾ ಭಂಡಾರಿ, ಲಯನ್ಸ್ ರೆಬೆಲ್ಲೊ, ರಾಜೇಶ ಪಡುಕೋಣೆ, ಗಣೇಶ ಮೊಗವೀರ, ಶ್ರೀಧರ ಉಪ್ಪುಂದ, ರೊನಾಲ್ಡ್ ರಾಜೇಶ ಕ್ವಾಡ್ರಸ್, ಅಮ್ಮಯ್ಯ ಪೂಜಾರಿ, ರಾಮ ಕಂಭದಕೋಣೆ, ವಿಜಯ ಕೊಯಾನಗರ, ಮಂಜು ಪಡುವರಿ, ಮಂಜು ಪೂಜಾರಿ ಬಡಾಕೆರೆ, ಉದಯಗಾಣಿಗ ಮೊಗೇರಿ, ಮೊದಲಾದವರು ರಾಜಕೀಯ ಸಮಾವೇಶದ ಯಶಸ್ಸಿಗಾಗಿ ಶ್ರಮಿಸಿದರು.

ವರದಿ : ವೆಂಕಟೇಶ ಕೋಣಿ





ಬಾಗೇಪಲ್ಲಿ ತಾಲ್ಲೂಕಿನ ಗೂಳೂರಿನಲ್ಲಿ ನಡೆದ ಸಿಪಿಐಎಂ ಅಭ್ಯರ್ಥಿ ಎಸ್.ವರಲಕ್ಷ್ಮಿಯವರ ಪರ ಚುನಾವಣಾ ಪ್ರಚಾರ



ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ದೇವನಹಳ್ಳಿಯಲ್ಲಿ ಬೈಕ್ ರ್‍ಯಾಲಿ ಮೂಲಕ ರೋಡ್ ಶೋ ಮತ್ತು ಬಹಿರಂಗ ಸಭೆ ನಡೆಸಿ ಸಿಪಿಐಎಂ ಅಭ್ಯರ್ಥಿ ಎಸ್. ವರಲಕ್ಷ್ಮಿಯವರಿಗಾಗಿ ಮತಯಾಚನೆ ಮಾಡಲಾಯಿತು. ಈ ಸಂದರ್ಭದಲ್ಲಿ ಮುಖಂಡರಾದ ಮಾರುತಿ ಮಾನ್ಪಡೆ, ಗೋಪಾಲಕೃಷ್ಣ ಅರಳಳ್ಳಿ, ಯಮುನಾ ಗಾಂವ್ಕರ್ ಇದ್ದರು.

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**